ಗೌರಿ ಲಂಕೇಶರ

ಲಂಕೇಶ್

ಜುಲೈ 18, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ




ವಿಶೇಷ ಸಂದರ್ಶನ

ತಾಯಿಯ ರೋಧನ

ಮಕ್ಕಳು ದಾರಿ ತಪ್ಪಿದ್ದೆಲ್ಲಿ?







ಗುಲ್ಬರ್ಗಾ: ಮಾರುತಿ ಮುತ್ಯಾನ ವಂಚನೆ


ಮಂಗಳೂರು: ಭಜರಂಗಿ ಕುಲಾಲ್‌ನ ಕಾಮಲೀಲೆ

ಯಡ್ಡಿ ಮಗನ ರೌಡಿಗಿರಿ!



ಕೊನೆಗೂ ಭಾರತದ ತಾಜಮಹಲಿಗೆ ವಿಶ್ವದ ಅದ್ಭುತಗಳಲ್ಲಿ ಒಂದೆಂಬ ಪಟ್ಟ ಸಿಕ್ಕಿದೆ. ತಾಜಮಹಲಿನ ಸಹಜ ಸೌಂದರ್ಯಕ್ಕೆ ವಿಶ್ವದ ಮಾರುಕಟ್ಟೆಯೂ ಸರ್ಟಿಫಿಕೇಟ್ ಕೊಟ್ಟಂತಾಯಿತು. ಇದರೊಂದಿಗೆ ವಿಶ್ವದ ಹೊಸ ಏಳು ಅದ್ಭುತಗಳ ಪಟ್ಟಿಯೂ ಪ್ರಕಟಗೊಂಡಿದೆ. ಅದರಲ್ಲಿ ಚೀನಾದ ಮಹಾಗೋಡೆಗೂ ಸ್ಥಾನ ಸಿಕ್ಕಿದೆ. ಅಂದರೆ ವಿಶ್ವದಲ್ಲಿ ವೇಗವಾಗಿ ಬೆಳೆಯುತ್ತಿರುವ ಏಷಿಯಾದ ಆರ್ಥಿಕತೆಗಳಾಗಿರುವ ಚೀನಾ ಹಾಗೂ ಭಾರತಕ್ಕೆರಡಕ್ಕೂ ಸ್ಥಾನ ದಕ್ಕಿದಂತಾಯಿತು.

ಈ ಸಹಜ ಅದ್ಭುತಗಳಿಗೂ ಮಾರುಕಟ್ಟೆಗೂ ಏನು ಸಂಬಂಧ? ನೇರವಾದ ಸಂಬಂಧವಿದೆ. ಇಲ್ಲದಿದ್ದರೆ ಹೊಸದಾಗಿ ಏಳು ಅದ್ಭುತಗಳನ್ನು ಆವಿಷ್ಕರಿಸುವ ಪ್ರಯತ್ನವೇಕಿರುತ್ತಿತ್ತು? ಈ ಅದ್ಭುತಗಳನ್ನು ಆಯ್ಕೆ ಮಾಡಿದವರು ಯಾರು? ಆಯ್ಕೆ ಮಾಡಿ ಕೊಳ್ಳಲು ಅನುಸರಿಸಿದ ಮಾನದಂಡಗಳೇನು? ಅಸಲು ಈ ರೀತಿ ಹೊಸ ಪಟ್ಟಿಯೊಂದನ್ನು ಘೋಷಿಸುವ ತುರ್ತೇನಿತ್ತು?



ವಿಶ್ವದ ನೂರಾರು ಅದ್ಭುತಗಳನ್ನು ಪತ್ತೆಹಚ್ಚಿ ಅದರಲ್ಲಿ 21 ಅದ್ಭುತಗಳನ್ನು ಪಟ್ಟಿ ಮಾಡಿ ಅವುಗಳಲ್ಲಿ ಏಳು ಸ್ಥಳಗಳನ್ನು ಪ್ರಪಂಚದ ಜನರು ಆಯ್ಕೆ ಮಾಡಬೇಕೆಂದು ಪಂಡಿತರು ಕೆಲವು ವಾರಗಳ ಮುಂಚೆ ಜಗತ್ತಿನ ಜನತೆಯ ಮುಂದಿಟ್ಟರು. ಜಗತ್ತಿನ ಅದ್ಭುತಗಳಲ್ಲಿ ಕೇವಲ 21 ಮಾತ್ರ ಶಾರ್ಟ್‌ಲಿಸ್ಟ್ ಆದದ್ದು ಹೇಗೆ? ಈಗಾಗಲೇ ವಿಶ್ವದ ಯಾವ ಯಾವ ಸುಂದರ ಸ್ಥಳಗಳು ವಿಶ್ವದ ಟೂರಿಸಂ ಮ್ಯಾಪಿನಲ್ಲಿ ಇದ್ದವೋ ಅವು ಮಾತ್ರವೇ ಈ

ತಾಜಮಹಲುಗಳು ಮತ್ತು ಮಾರುಕಟ್ಟೆಯ "ಅದ್ಭುತ" ತಂತ್ರಗಳು

ಪಂಡಿತರ ಪಟ್ಟಿಯಲ್ಲಿ ಇದ್ದದ್ದು. ಇವುಗಳಲ್ಲಿ ಕೆಲವು ಸ್ಥಳಗಳು ಯೂರೋಪು ಮತ್ತು ಅಮೆರಿಕ ಖಂಡಗಳಲ್ಲಿವೆ. ಹಲವು ಏಷಿಯ, ಆಫ್ರಿಕಾ ಹಾಗೂ ಲ್ಯಾಟಿನ್ ಅಮೆರಿಕಗಳಲ್ಲಿವೆ. ಆದರೆ ಸುಂದರ ಮತ್ತು ಅದ್ಭುತ ಎಂದು ತೀರ್ಮಾನಿಸಿದ ಮಾನದಂಡಗಳು, ನೋಡಿದ ಕಣ್ಣುಗಳು ಮಾತ್ರ ವಿದೇಶದವೇ! ಇದರರ್ಥ ತಾಜಮಹಲು ಸುಂದರವಾಗಿಲ್ಲ ಅಥವಾ ಅದ್ಭುತವಾಗಿಲ್ಲ ಎಂದಲ್ಲ, ಪ್ರಶ್ನೆ ಇರುವುದು ದೇಶದೊಳಗೆ ಮತ್ತು ಪ್ರಪಂಚದಲ್ಲೆಲ್ಲಾ ನೂರಾರು ಅದ್ಭುತಗಳನ್ನು ಸಹಜವಾಗಿಯೇ ಸಹಸ್ರಾರು ವರ್ಷದಷ್ಟು ಹಳೆಯದಾದ ನಾಗರಿಕತೆಗಳು ಸೃಷ್ಟಿಸಿವೆ. ಅವುಗಳಲ್ಲಿ ಯಾವುದೂ ಕೆಲವನ್ನು ಅತಿ ಶ್ರೇಷ್ಠ ಎಂದು ತೀರ್ಮಾನಿಸುವುದು ಹೇಗೆ? ಅತಿ ಪುರಾತನವಾದದ್ದು ಅಥವಾ ಸಮಯ ಸಂದರ್ಭಗಳ ಮಿತಿಗಳಲ್ಲಿ ಆಗಾಧವಾದದ್ದು ಅಥವಾ ಈಗಲೂ ನೈಪುಣ್ಯವನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗುವಂಥದ್ದು....ಇವುಗಳು ಮಾನದಂಡಗಳಾಗಿವೆ. ಆದರೆ ಅಂಥ ಅದ್ಭುತಗಳ ಸೃಷ್ಟಿಕ್ರಿಯೆಯಲ್ಲಿ ಕೂಲಿಗಳ ಮೇಲಾದ ಕ್ರೌರ್ಯ ಮತ್ತು ಚಕ್ರವರ್ತಿಗಳ ವಿಲಾಸಕ್ಕೆ ಅದ್ಭುತಗಳ ಅಡಿಪಾಯದಲ್ಲಿ ಮಣ್ಣಾಗಿ ಹೋದ ಅವರ ಬದುಕಿನ ಕಥೆಗಳ ಬಗ್ಗೆ ಇಲ್ಲಿಯವರೆಗೂ ಇತಿಹಾಸ ಸ್ಪಂದಿಸಲೇ ಇಲ್ಲ. ಅವುಗಳ ಆಗಾಧತೆ ಮತ್ತು ಸೌಂದರ್ಯಗಳು ವಿಲಾಸಕ್ಕಾಗಿ ನಡೆದ ಕ್ರೌರ್ಯದ ಆಯಾಮವನ್ನು ಸಂಪೂರ್ಣವಾಗಿ ಮರೆಸೇಬಿಟ್ಟವು. ಇಪ್ಪತ್ತನೇ ಶತಮಾನದಲ್ಲಿ ಕಾರ್ಮಿಕರ ಪರವಾದ ಚಿಂತನೆಗಳು ಬಂದನಂತರವೇ ತಾಜಮಹಲಿನ ಕಥೆಯನ್ನು

"ಯಾವ ಇತಿಹಾಸ ನೋಡಿದರೂ ಏನಿದೆ ಗರ್ವ ಕಾರಣ

ನರಜಾತಿ ಸಮಸ್ತ ಪರಪೀಡನಾ ಪಾರಾಯಣ...

...ನೈಲ್‌ನದಿ ದಂಡೆಯಲ್ಲಿ ಸಾಮಾನ್ಯರ ಜೀವನವೇನಿತ್ತು?

ತಾಜಮಹಲಿಗೆ ಕಲ್ಲುಹೊತ್ತ ಕೂಲಿಗಳ್ಯಾರು?

ಪ್ರಭು ಏರಿದ ಪಲ್ಲಕಿಯಲ್ಲ

ಅದನ್ನು ಹೊತ್ತ ಭೋವಿಗಳ್ಯಾರು.."

ಎಂದು ಪ್ರಶ್ನಿಸಲಾಯಿತು. ಇತಿಹಾಸವನ್ನು, ಸೌಂದರ್ಯವನ್ನು ಮತ್ತು ಅದ್ಭುತಗಳನ್ನು ಬೇರೊಂದು ಕೋನದಲ್ಲಿ ವಿಶ್ಲೇಷಿಸುವ ಆಯಾಮವೂ ಒದಗಿ ಬಂತು. ಈ ದೃಷ್ಟಿಕೋನವೂ ಸಹ ರಾಜಕೀಯದಲ್ಲಿ ಸಮಾಜವಾದದ ಶಕ್ತಿ ಕುಂದುತ್ತಾ ಬಂದಂತೆ ಸೈದ್ಧಾಂತಿಕವಾಗಿಯೂ ಬಲಹೀನವಾಗುತ್ತಾ ಬಂದಿತು.

ಸಮಾಜವಾದದ-ಅಂದರೆ ಶ್ರಮಿಕರ ಸಿದ್ಧಾಂತದ- ಸವಾಲು ಕ್ಷೀಣವಾಗುತ್ತಿರುವ ಹೊತ್ತಿನಲ್ಲೇ ಜಾಗತೀಕರಣದ ಹೆಸರಿನಲ್ಲಿ ಆಕ್ರಮಣಕಾರಿ ಬಂಡವಾಳಶಾಹಿ ದೃಷ್ಟಿಕೋನವೂ ಜಗತ್ತನ್ನು ಆವರಿಸಿಕೊಳ್ಳುತ್ತಿದೆ. ಸೌಂದರ್ಯದ ಬಗ್ಗೆ, ಅದ್ಭುತಗಳ ಬಗ್ಗೆ ಹಳೆಯ ರಾಜರಿಕೆಯ ದೃಷ್ಟಿಕೋನದ ಜೊತೆಜೊತೆಗೆ ಜಾಗತೀಕರಣದ ಹೆಸರಲ್ಲಿ ಜಾಗತಿಕ ಬಂಡವಾಳಶಾಹಿ ಹರಿಬಿಟ್ಟಿರುವ ಸರಕು ಸಂಸ್ಕೃತಿಯೂ ಸೇರಿಕೊಳ್ಳುತ್ತಾ ಇದೆ.

ಜಾಗತೀಕರಣ ಬಂಡವಾಳಶಾಹಿಯ ವಿಸ್ತರಣೆಯ ಅತಿರೇಕದ ಘಟ್ಟ. ಭೌಗೋಳಿಕವಾಗಿ ಜಗತ್ತಿನ ಮೂಲೆ ಮೂಲೆಗಳನ್ನು, ಮನುಷ್ಯ ಜೀವನದ ಪ್ರತಿಯೊಂದು ಭೌತಿಕ ಅಗತ್ಯಗಳನ್ನೂ ಅದು ಸರಕೀಕರಿಸಿ ಜಾಗತಿಕ ಮಾರುಕಟ್ಟೆಯ ಭಾಗವನ್ನಾಗಿಸಿದೆ. ಈಗ ಅಷ್ಟಕ್ಕೇ ನಿಲ್ಲದೆ ಹಾಸ್ಪಿಟಾಲಿಟಿ ಕೈಗಾರಿಕೆ ಹೆಸರಲ್ಲಿ, ಟೂರಿಸಂ ಹೆಸರಲ್ಲಿ ಮನುಷ್ಯರ ಪ್ರತಿಯೊಂದು ಸಂವೇದನೆಗಳನ್ನು ಸಹ ಅದು ಸರಕೀಕರಿಸಿದೆ. ಅದೇ ರೀತಿ ಸೌಂದರ್ಯವೂ ಇಂದು ಬಂಡವಾಳಶಾಹಿ ಮಾನದಂಡದಲ್ಲೇ ನಿರ್ಧರಿತವಾಗುತ್ತಿದೆಯಲ್ಲದೆ ಅದು ಕೂಡ ಜಾಗತಿಕ ಸರಕಾಗಿದೆ. ಸೌಂದರ್ಯ ಸ್ಪರ್ಧೆಗಳೂ, ಈ ಜಾಗತಿಕ ಹೆರಿಟೇಜ್ ಸ್ಥಳಗಳ ಹಗರಣಗಳೂ ಅದರ ಭಾಗವೇ ಆಗಿವೆ.

ಚಾರ್ವಾಕ

- ಶಿವಸುಂದರ್-

ಈಗ ಈ ಅದ್ಭುತಗಳ ಹೊಸ ಪಟ್ಟಿ ಪ್ರಕಟವಾಗಿ ರುವುದರ ಹಿಂದೆಯೂ ಸಹ ಟೂರಿಸಂ ಕೈಗಾರಿಕೆಯನ್ನು ಉತ್ತೇಜಿಸುವ ಉದ್ದೇಶ ಬಿಟ್ಟರೆ ಬೇರೆ ಕಾರಣವಿಲ್ಲ. ಅದರಲ್ಲೂ ಸೌಂದರ್ಯ ಸ್ಪರ್ಧೆಗಳ ಹಿಂದೆ ಆಯಾ ದೇಶಗಳಲ್ಲಿ ಸೌಂದರ್ಯ ಸಾಧನಗಳ ಮಾರುಕಟ್ಟೆಯನ್ನು ಭರ್ಜರಿಯಾಗಿ ಬೆಳೆಸುವ ಹುನ್ನಾರವಿರುವಂತೆ ಈ ಪ್ರಪಂಚದ ಅದ್ಭುತಗಳನ್ನು ಆಯ್ಕೆ ಮಾಡಿಕೊಳ್ಳುವ ಹಿಂದೆಯೂ ಸಹ ನಿರ್ದಿಷ್ಟ ಪ್ರದೇಶದಲ್ಲಿ ಟೂರಿಸಂ ಉದ್ಯಮವನ್ನು ಉತ್ತೇಜಿಸುವ ಹುನ್ನಾರವೇ ವ್ಯವಸ್ಥಿತವಾಗಿರುವಂತೆ ಕಾಣುತ್ತದೆ. ಆದರೆ ಟೂರಿಸಂ ಎಂಬುದು ಒಂದು ಮನಸ್ಥಿತಿಯೂ ಆಗಿರುತ್ತದೆ. ಕಂಡದ್ದನ್ನು ಅನುಭವಿಸಿ ಮೆಚ್ಚಿಕೊಳ್ಳಲು ಒಂದು ನಿರ್ದಿಷ್ಟ ಬಗೆಯ ಮೌಲ್ಯಗಳು ಇರಬೇಕಾಗುತ್ತದೆ. ತಾಜಮಹಲನ್ನು ನೋಡಿದರೆ ಕೇವಲ ಷಹಜಹಾನನ ಪ್ರೇಮ ಮಾತ್ರ ಕಾಣುವ, ಚೀನಾದ ಮಹಾಗೋಡೆಯನ್ನು ನೋಡಿದರೆ ಅದರ ಅಗಾಧತೆಯನ್ನು ಮಾತ್ರ ಕಾಣುವ ಮೌಲ್ಯಗಳು ಅಥವಾ ಪ್ರಾಪಂಚಿಕ ದೃಷ್ಟಿಕೋನವೂ ಇರಬೇಕಾಗುತ್ತದೆ.

ಆದ್ದರಿಂದಲೇ 21 ಅದ್ಭುತಗಳಲ್ಲಿ ಏಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವ ಪ್ರಕ್ರಿಯೆ ನಡೆದದ್ದೇ ಎಸ್‌ಎಂಎಸ್ ಮತ್ತು ಇಂಟರ್ನೆಟ್‌ಗಳ ಮೂಲಕ. ಅಂದರೆ ಯಾರಿಗೆ ಅವುಗಳ ಸೌಲಭ್ಯವಿದೆಯೋ ಮತ್ತು ಅದರ ಬಗ್ಗೆ ತಿಳಿದಿದೆಯೋ ಅವರು ಮಾತ್ರ ಭಾಗವಹಿಸುವ ರೀತಿ ಪ್ರಪಂಚದ ಉಳಿದ ದುಡಿಯುವ ಜನತೆಯ ಅಭಿಪ್ರಾಯವನ್ನು ಇದರಿಂದ ಹೊರಗಿಡಲಾಗಿತ್ತು, ಅದರ ಮೂಲಕ ಅವರ ಪ್ರಾಪಂಚಿಕ ದೃಷ್ಟಿಕೋನವನ್ನೂ ಅವರ ಸೌಂದರ್ಯ ಮೀಮಾಂಸೆಯನ್ನೂ ಸ್ಪರ್ಧೆಯಿಂದ ಹೊರಗಿಡಲಾಗಿತ್ತು, ವಿಲಾಸಿ ಬದುಕು ನಡೆಸುವ ಮತ್ತು ಬದುಕಿನ ಬಗ್ಗೆ ಮತ್ತು ಸೌಂದರ್ಯದ ಬಗ್ಗೆ ವಿಲಾಸಿ ಮೌಲ್ಯಗಳನ್ನು ಉಳ್ಳವರೇ ಏಳು ಅದ್ಭುತಗಳನ್ನು ಆಯ್ಕೆ ಮಾಡಿದರು. ಹೀಗೆ ಪ್ರಪಂಚದ ಏಳು ಹೊಸ ಅದ್ಭುತಗಳ ಆಯ್ಕೆಯ ಹಿಂದೆ ಇರುವುದು ಜಾಗತಿಕ ಮಾರುಕಟ್ಟೆ ಶಕ್ತಿಗಳ ಹೊಸ ಅಗತ್ಯಗಳೇ!! ■

ಭಾರತ ಬೆಳೆಯುತ್ತಿದೆ, ಭಾರತೀಯರು ಮಾತ್ರ ಸಾಯುತ್ತಿದ್ದಾರೆ!!

ಭಾರತ ಈ ವರ್ಷದಲ್ಲಿ ಹಲವಾರು ಸಾಧನೆಗಳನ್ನು ಮಾಡಿದೆ. ಪ್ರಪಂಚದ ಅತಿ ಶ್ರೀಮಂತರ ಪಟ್ಟಿಯಲ್ಲಿ ಏಷಿಯಾದ ಭಾಗದಿಂದ ಯಾವಾಗಲೂ ಅತಿ ಹೆಚ್ಚಿನ ಶ್ರೀಮಂತರು ಇರುತ್ತಿದ್ದದ್ದು ಜಪಾನಿನಿಂದ. ಈ ಬಾರಿ ಪ್ರಪಂಚದ ಅತಿ ಶ್ರೀಮಂತರ ಪಟ್ಟಿಯಲ್ಲಿ ಭಾರತವು ಜಪಾನನ್ನು ಹಿಂದಕ್ಕೆ ಅಟ್ಟಿದೆ. ಜಪಾನಿನಿಂದ 21 ಅತಿ ಶ್ರೀಮಂತರು ಆ ಪಟ್ಟಿಯಲ್ಲಿ ಇರುತ್ತಿದ್ದರೆ ಭಾರತದಿಂದ ಈ ಬಾರಿ 27 ಜನರಿದ್ದಾರೆ. ಅದೇರೀತಿ ಭಾರತದ ಇತಿಹಾಸದಲ್ಲೇ ಪ್ರಥಮ ಬಾರಿಗೆ ಉದ್ಯಮದ ಕುಟುಂಬವೊಂದು ಒಂದು ಲಕ್ಷ ಕೋಟಿಗಿಂತಲೂ ಹೆಚ್ಚು ಆಸ್ತಿಯ ಒಡೆಯನಾಗಿದೆ. ಮುಖೇಶ್ ಅಂಬಾನಿ ಈಗ ಒಂದು ಲಕ್ಷ ಕೋಟಿ ಒಡೆಯನಾದರೆ ಅವನ ತಮ್ಮ ಅನಿಲ ಅಂಬಾನಿ 97000 ಕೋಟಿಯ ಮಾಲೀಕನಾಗಿ ಇನ್ನು ಕೆಲವೇ ವರ್ಷಗಳಲ್ಲಿ ಒಂದು ಲಕ್ಷ ಕೋಟಿಯ ಮಾಲೀಕನಾಗಲಿದ್ದಾನೆ. ಇದಲ್ಲದೆ ಮೊನ್ನೆ ತಾನೆ ಭಾರತ ಒಂದು ಟ್ರಿಲಿಯನ್ ಡಾಲರ್ ಆರ್ಥಿಕತೆಯಾಯಿತು. ಅಂದರೆ ಪ್ರಪಂಚದ ಹನ್ನೆರಡು ಟ್ರಿಲಿಯನ್ ಡಾಲರ್ ರಾಷ್ಟ್ರಗಳಲ್ಲಿ ತಾನೂ ಒಂದಾಯಿತು. ಇದಲ್ಲದೆ ಭಾರತದಲ್ಲಿ 10 ಕೋಟಿಗೂ ಹೆಚ್ಚು ಖರ್ಚು ಮಾಡಬಲ್ಲ ಹಣವಿರುವ ಹತ್ತು ಲಕ್ಷಕ್ಕೂ ಹೆಚ್ಚು ಕುಟುಂಬಗಳಿವೆಯಂತೆ! ಹೀಗೆ ಭಾರತದ ಸಾಧನೆಯ ಗಾಥೆ ಮುಂದುವರೆಯುತ್ತದೆ.

ಆದರೆ ಈ ಅಭಿವೃದ್ಧಿಶೀಲ ಭಾರತದ ಮತ್ತೊಂದು ಮುಖವನ್ನು ಮೊನ್ನೆ ವಿಶ್ವಸಂಸ್ಥೆಯ ಅಂಗಸಂಸ್ಥೆಯೊಂದು ಬಹಿರಂಗಪಡಿಸಿದೆ. ಅದರ ಪ್ರಕಾರ:



1. ವಿಶ್ವದಲ್ಲಿ ಪ್ರಸವದ ನಂತರ ಸಾಯುವ ಗರ್ಭಿಣಿಯರಲ್ಲಿ ಶೇ.25 ರಷ್ಟು ಗರ್ಭಿಣಿಯರು ಭಾರತದಲ್ಲಿ ಇದ್ದಾರೆ.
2. ವಿಶ್ವದಲ್ಲಿ ಕಡಿಮೆ ತೂಕದಲ್ಲಿ ಹುಟ್ಟುವ ಮಕ್ಕಳಲ್ಲಿ ಶೇ.34 ರಷ್ಟು ಭಾರತೀಯ ಮಕ್ಕಳಂತೆ.
3. ವಿಶ್ವದಲ್ಲಿ 5 ವರ್ಷ ಆಗುವ ಮುನ್ನ ಸಾಯುವ ಮಕ್ಕಳಲ್ಲಿ ಶೇ.23ರಷ್ಟು ಮಕ್ಕಳು ಭಾರತೀಯರಂತೆ.
4. ವಿಶ್ವದಲ್ಲಿ ದಿನಕ್ಕೆ ಒಂದು ಡಾಲರ್‌ಗಿಂತ ಕಡಿಮೆ ಸಂಪಾದನೆ ಮಾಡುವ ಬಡವರಲ್ಲಿ ಶೇ.28ರಷ್ಟು ಬಡವರು ಭಾರತೀಯರಾಗಿದ್ದಾರೆ.

ಹಾಗಿದ್ದಲ್ಲಿ ಅಭಿವೃದ್ಧಿ ಎಂದರೇನು? ಭಾರತ ಎಂದರೇನು? ಭಾರತೀಯ ಎಂದರೆ ಯಾರು? ●

ವಿಷಾದ ಮಾತ್ರವಲ್ಲ


"ಸಾಕ್ಷಿಗಳ ಕೊರತೆಯಿಂದಾಗಿ ದಲಿತರ ಮೇಲಿನ ದೌರ್ಜನ್ಯದ ಶೇ.98ರಷ್ಟು ಪ್ರಕರಣಗಳು ಖುಲಾಸೆಗೊಳ್ಳುತ್ತವೆ."

-ನೆಹರು. ಚ. ಓಲೇಕಾರ್,
ಎಸ್ಸಿಎಸ್ಟಿ ಆಯೋಗದ ಅಧ್ಯಕ್ಷ

ಒಬ್ಬ ತಾಯಿಯ ಮೊರೆ

"ನನ್ನ ಮಗ ಸಜ್ಜನ. ನಿರಪರಾಧಿ. ಆತನನ್ನು ಉಗ್ರಗಾಮಿ ಎಂದರೆ ನನ್ನ ಕರುಳು ಕಿತ್ತು ಬರುತ್ತದೆ. ದಯವಿಟ್ಟು ಆತನ ಬಿಡುಗಡೆಗೆ ಸಹಾಯಮಾಡಿ."

-ಬಂಧಿತ ಹನೀಫನ ತಾಯಿ



ವಾರದ ಘೋಷಣೆ

"ಜನ ನನ್ನ ಬಗ್ಗೆ ಬೇಕಾದ್ದು ಅಂದುಕೊಳ್ಳಲಿ. ನಾನು ಇತಿಹಾಸದ ಹೆಜ್ಜೆ ಗುರುತೂ ಉಳಿಯದಂತೆ ಸಮುದ್ರದ ಕಡೆ ಪ್ರವಹಿಸುವ ನದಿಯಂತೆ."

-ಎಂ. ಎಫ್. ಹುಸೇನ್

No Comments

"ಡಾ. ರಾಜಕುಮಾರರು ಹೊಸ ರಾಜಕೀಯ ಪಕ್ಷಕ್ಕೆ ಪ್ರಚಾರ ಮಾಡುವ ಭರವಸೆಯಿಂದ ಹಿಂ... ಸರಿದಿದ್ದರಿಂದ ದೇಜಗೌರವರು ಹೊಸ ಪ್ರಾದೇಶಿ... ಪಕ್ಷ ಕಟ್ಟುವ ಪ್ರಯತ್ನವನ್ನು ಕೈಬಿಟ್ಟರು."

-ಜಾಣಗೆರೆ ವೆಂಕಟರಾಮಯ್ಯ...



"ಎಲ್ಲಾ ಸಂಸ್ಕೃತಿಗಳ ಜನರೂ ಆರ್ಥಿಕ ಉದಾರೀಕರಣವನ್ನು ಒಪ್ಪಿಕೊಳ್ಳುತ್ತಿರುವಾಗ ಅಲಿಪ್ತ ನೀತಿಗೆ ಅರ್ಥವೇ ಇಲ್ಲ."

- ಕಾಂಡೋಲೀಜಾ ರೈಸ್



"ಭ್ರಷ್ಟಾಚಾರವೆಂಬುದು... ಬಡವರಿಂದ ಕದಿಯುವ, ಆಡಳಿ... ಮತ್ತು ನೈತಿಕತೆಯ ತಂತನ... ಕಡಿಯುವ ಹಾಗೂ ವಿಶ್ವಾಸವನ್ನು... ಧ್ವಂಸ ಮಾಡುವ ಕ್ಯಾನ್ಸರ್."

-ರಾಬರ್ಟ್ ಜೋಲಿಕ್...
ವಿಶ್ವಬ್ಯಾಂಕ್ ಅಧ್ಯಕ್ಷ...

"2007ರ ಅಂತ್ಯದ ವೇಳೆಗೆ 325 ಕೋಟಿ ಜನ ಅಂದರೆ ವಿಶ್ವದ ಅರ್ಧದಷ್ಟು ಜನತೆ ಮೊಬೈಲ್ ಫೋನನ್ನು ಬಳಸುತ್ತಿರುತ್ತಾರೆ."



-ಮೊಬೈಲ್ ವರ್ಲ್ಡ್ ವರದಿ...

"ಕಾಂಗ್ರೆಸ್‌ನಲ್ಲಿ ಕಾಲೆಳೆಯುವ ಜನ ಜಾಸ್ತಿ."

-ದಿನೇಶ್ ಗುಂಡೂರಾವ್...

"ನಾನು ಗುಪ್ತವಾಗಿ ಮಾಡುವುದನ್ನು... ಗುಪ್ತವಾಗಿಯೂ, ಬಹಿರಂಗವಾಗಿ ಮಾಡುವುದನ್ನು... ಬಹಿರಂಗವಾಗಿಯೂ ಮಾಡುತ್ತೇನೆ."

ರಮೇಶ್ ಕುಮಾರ್, ಶಾಸಕ...

ನಂಬಿದ್ರೆ ನಂಬಿ ಬಿಟ್ರೆ ಬಿಡಿ...



"ನಾನು ಬ್ರಹ್ಮಚಾರಿ ಅಲ್ಲ....ಅವಿವಾಹಿತ ಎಂದು ಈ ಹಿಂದೆಯೇ ಶ್ರೀರಾಮರೆಡ್ಡಿ ಹೇಳಿಕೊಂಡಿದ್ದಾರೆ. ನೀವು ಅವರನ್ನು ಬ್ರಹ್ಮಚಾರಿ ಎಂದು ಕರೆದು ಅವರನ್ನು ಅವಮಾನಿಸಬೇಡಿ."

-ಮಾಧುಸ್ವಾಮಿ...

"ಜೀವನದಲ್ಲಿ ವಾಟಾಳ್ ನಾಗರಾಜ್ ಮಾಡಿ... ಒಂದೇ ಒಂದು ಒಳ್ಳೆ ಕೆಲಸ ಎಂದರೆ ಪ್ರತಿಭಾ ಪಾಟೀಲರಿಗೆ ರೇಷ್ಮೆ ಸೀರೆ ಹೊದಿಸಿದ್ದು."

-ಧರಂಸಿಂಗ್...

"ನನ್ನ ವೃತ್ತಿಜೀವನದಲ್ಲಿ ಜ್ಯೋತಿಷ್ಯ ಬಹು... ಸಹಾಯ ಮಾಡಿದೆ. ಆದರೆ ಅದಕ್ಕೆ ನಂಬಿಕೆ ಮುಖ್ಯ... ಅಷ್ಟೇ ಮುಖ್ಯವಾದುದು ನೀವು ಯಾವ ಜ್ಯೋತಿ...ಯನ್ನು ನಂಬುತ್ತೀರಾ ಎಂಬುದು."

- ಡಾ. ಸಬಿತಾ ರಾಮಮೂರ್ತಿ...
ಸಾಫ್ಟ್‌ವೇರ್ ಎಂಜಿನಿಯರ್...

ಅವಿವೇಕದ ಅಸೆಂಬ್ಲಿ

"ಮದುವೆಗೆ ಮುನ್ನ ಆರತಕ್ಷತೆ ಮಾಡುವುದು... ಸರಿಯಲ್ಲ. ತಾಳಿ ಕಟ್ಟಿದ ನಂತರವೇ ಆರತಕ್ಷತೆ ಮಾಡ...ಬೇಕು."

- ಮಾಧುಸ್ವಾಮಿ...

ಒಂದು ಸುದ್ದಿ

"ಅನೈತಿಕ ಚಟುವಟಿಕೆಯಲ್ಲಿ ತೊಡಗಿಕೊಂಡಿ... ಭಜರಂಗದಳದ ಪ್ರಮುಖರೊಬ್ಬರನ್ನು ಶ್ರೀರಾಮ... ಸೇನೆಯ ಕಾರ್ಯಕರ್ತರು ಹಿಡಿದು ಪೊಲೀಸರಿ... ಒಪ್ಪಿಸಿದರು."

- ಪತ್ರಿಕಾ ವರದಿ...

ತಮಾಷೆ

"ಮನುಷ್ಯನ ಶರೀರದಲ್ಲಿ ಬದಲಾವಣೆಗಳು... ಆಗುವುದು ಭಾವನೆಗಳಿಂದ."

-ಮುನಿಶ್ರೀ ತರುಣಸಾಗರ...

ನಕ್ಸಲರ ಬೆಂಬಲಿಗರ ಪಟ್ಟಿ ಬಂದಿರುವ ಹಿನ್ನಲೆಯಲ್ಲಿ ಪ್ರಜಾಪ್ರಭುತ್ವದ ಬಗೆಗಿನ ಹೇಳಿಕೆಗಳನ್ನು ಈ ಸಂಚಿಕೆಯ ಪುಟದಡಿಯಲ್ಲಿ ನೀಡಿದ್ದೇವೆ.

ದೌರ್ಜನ್ಯ ಮತ್ತು ಮಹಿಳೆಯರ ನಗ್ನ ಪ್ರತಿಭಟನೆ





ಕಂಡಹಾಗೆ

ಒಂದು ಕೈಯಲ್ಲಿ ಬೇಸ್‌ಬಾಲ್ ಬ್ಯಾಟನ್ನು ದೊಣ್ಣೆಯಂತೆ ತಿರುವುತ್ತಾ, ಇನ್ನೊಂದು ಕೈಯಲ್ಲಿ ಬಳೆಗಳನ್ನು ಝುಣಝುಣಿಸುತ್ತಾ, ಬರೀ ಒಳ ಉಡುಪುಗಳನ್ನು ಧರಿಸಿ ಆಕೆ ದಾರಿಯಲ್ಲಿ ನಡೆದುಹೋಗುತ್ತಿದ್ದರೆ, ಸುತ್ತಲಿದ್ದ ಜನ ಆಕೆಯನ್ನು ಸುಮ್ಮನೇ ನೋಡುತ್ತಿದ್ದರು. ಕೆಲವರು ತಮ್ಮ ಸೈಕಲ್ ಅಥವಾ ಸ್ಕೂಟರನ್ನು ಕ್ಷಣಕಾಲ ನಿಲ್ಲಿಸಿ, ಅವಳನ್ನು ಕಂಡು ಜೋರಾಗಿ ನಕ್ಕು ಮುಂದೆ ಹೋಗುತ್ತಿದ್ದರು. ಆಕೆ ಮಾನಸಿಕ ಸಮತೋಲನವನ್ನು ಕಳೆದುಕೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತಿದ್ದರೂ, ಆಕೆ ಆಕ್ರೋಶದಿಂದ ಕಿರುಚಾಡುತ್ತಿದ್ದರೂ ಯಾರೂ ಅವಳ ಸಹಾಯಕ್ಕೆ ಬರಲಿಲ್ಲ. ಅಷ್ಟೇ ಅಲ್ಲ, ಅವಳ ಅರೆಬೆತ್ತಲೆ ದೇಹವನ್ನು ನೋಡುತ್ತಾ ಆನಂದಿಸಿದರು, ಅವಳನ್ನು ಮುಟ್ಟಲು ಪ್ರಯತ್ನಿಸಿದರು, ರೇಗಿಸಿದರು, ಚುಡಾಯಿಸಿದರು. ಈ ಪ್ರಕರಣ ಕುರಿತಂತೆ ವಿದ್ಯಾವಂತರೇ ಉಪಯೋಗಿಸುವ ಇಂಟರ್‌ನೆಟ್ ನಲ್ಲಂತೂ ಆಕೆಯ ಮೇಲಾದ ದೌರ್ಜನ್ಯಕ್ಕಿಂತಲೂ ಅವಳ ಮೈಮಾಟದ ಬಗ್ಗೆಯೇ ಹೆಚ್ಚು ಚರ್ಚೆ ನಡೆದಿತ್ತು.



ಹೀಗೆ ಅರೆಬೆತ್ತಲೆಯಾಗಿ ಮೊನ್ನೆ ಬೀದಿಯಲ್ಲಿ ನಡೆದವಳು ಪೂಜಾ ಚೌಹಾನ್ ಎಂಬ ಮಹಿಳೆ. ವರದಕ್ಷಿಣೆ ತರುವಂತೆ ತನ್ನನ್ನು ಪೀಡಿಸುತ್ತಿದ್ದ ಗಂಡ ಮತ್ತು ಅತ್ತೆ-ಮಾವರ ವಿರುದ್ಧ ದೂರನ್ನು ದಾಖಲಿಸುವಂತೆ ಪೂಜಾ ಪೊಲೀಸರಿಗೆ ಮನವಿ ಸಲ್ಲಿಸಿದ್ದಳು, ಪೊಲೀಸ್ ಠಾಣೆಯ ಮುಂದೆ ಪ್ರತಿಭಟಿಸಿದ್ದಳು, ಆತ್ಮಹತ್ಯೆಗೂ ಪ್ರಯತ್ನಿಸಿದ್ದಳು. ಆದರೆ ಇದ್ಯಾವುದರಿಂದಲೂ ಪ್ರಯೋಜನವಾಗಲಿಲ್ಲ. ಕೊನೆಗೆ ಅರೆಬೆತ್ತಲೆಯಾಗಿ ನಡೆದು ತನ್ನ ಅಸಹಾಯಕತೆ, ಆಕ್ರೋಶವನ್ನು ವ್ಯಕ್ತಪಡಿಸಿದಳು. ಈಗಲೂ ತನಗೆ ಅನ್ಯಾಯ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಸಂಪೂರ್ಣ ಬೆತ್ತಲಾಗಿ ಪ್ರತಿಭಟಿಸುವುದಾಗಿ ಹೇಳಿದಳು. ಪ್ರಾಯಶಃ ಮಾಧ್ಯಮದವರ ಗಮನಕ್ಕೆ ಪೂಜಾಳ ಪ್ರತಿಭಟನಾ 'ಯಾತ್ರೆ' ಬಾರದಿದ್ದರೆ ಆಕೆ ಪೂರ್ತಿ ಬೆತ್ತಲಾಗುವುದಕ್ಕೆ ಅಲ್ಲಿನ ಪೊಲೀಸರು ಕಾಯುತ್ತಿದ್ದರೇನೋ.



ಅಂದಹಾಗೆ ಈ ಪ್ರಕರಣ ನಡೆದದ್ದು ಗುಜರಾತ್ ರಾಜ್ಯದ ರಾಜಕೋಟ್ ಎಂಬ ನಗರದಲ್ಲಿ. ಇತ್ತೀಚೆಗೆ ಹಿಂದೂ ದೇವತೆಗಳಿಗೆ ಅವಮಾನ ಮಾಡಲಾಗಿದೆ ಎಂದು ಆರೋಪಿಸಿ ಕಲಾಶಾಲೆಯ ವಿದ್ಯಾರ್ಥಿಯೊಬ್ಬನನ್ನು ಬಂಧಿಸಿದ್ದು, ಅದರ ಮುಖ್ಯಸ್ಥ ಶಿವಾಜಿ ಪಣಿಕ್ಕರ್ ಅವರನ್ನು ಅಮಾನತುಗೊಳಿಸಿದ್ದು, ಹಿಂದೂ ದೇವತೆಯರನ್ನು ನಗ್ನವಾಗಿ ಚಿತ್ರಿಸಿದ್ದಾರೆಂದು ಖ್ಯಾತ ಕಲಾವಿದ ಎಂ.ಎಫ್. ಹುಸೇನ್‌ರವರ ವಿರುದ್ಧ ಪ್ರತಿಭಟಿಸಿ ಅವರು ದೇಶವನ್ನೇ ತೊರೆಯುವಂತೆ ಮಾಡಿದ್ದು ಇದೇ ರಾಜ್ಯದ ಸಂಘಪರಿವಾರದ ಪಟಾಲಂ. ಗೋಧ್ರಾ ದುರಂತದಲ್ಲಿ ಹಿಂದೂಗಳನ್ನು 'ಕೊಂದರು' ಎಂದು ಆರೋಪಿಸಿ ಮುಸ್ಲಿಮರ ಮಾರಣಹೋಮ ನಡೆಸಿದ, ಅದನ್ನೇ ಗುಜರಾತಿನ ಗೌರವದ ರಕ್ಷಣೆ ಎಂದು ಸಂಭ್ರಮಿಸಿದ, ಇವತ್ತು ಸಂಘ ಪರಿವಾರದ ಕಣ್ಮಣಿಯಾಗಿರುವ ನರೇಂದ್ರ ಮೋದಿಯೇ ಮುಖ್ಯಮಂತ್ರಿಯಾಗಿರುವ ರಾಜ್ಯದಲ್ಲಿ ಇಂತಹ ಘಟನೆ ಸಂಭವಿಸಿದೆ.

ದೇವತೆಗೆ, ದೇಶದ ಲಾಂಛನಕ್ಕೆ ಅವಮಾನ ಮಾಡಲಾಗಿದೆ ಎಂದು ಭ್ರಮಿಸಿ ಬೀದಿಗಿಳಿಯುವ ಅಲ್ಲಿನ ಸಂಘ ಪರಿವಾರ, ಅದೇ ರಾಜ್ಯದಲ್ಲಿ ತನಗೆ ನ್ಯಾಯ ನೀಡಿ ಎಂದು ಕೇಳುತ್ತಾ ಓರ್ವ ಅಸಹಾಯಕ ಹಿಂದೂ ಗೃಹಿಣಿ ಅರೆಬೆತ್ತಲಾಗಿ ಬೀದಿಗಿಳಿದರೂ ಅಲ್ಲಿನ ಯಾವ ದೇಶಭಕ್ತ ಚೆಡ್ಡಿಯೂ ಚಕಾರವೆತ್ತಿಲ್ಲ. ಪೂಜಾಳಂತಹ ಮಹಿಳೆಯೊಬ್ಬಳನ್ನು ಇಂತಹ ಪರಿಸ್ಥಿತಿಗೆ ದೂಡಿದ್ದು ಯಾರು ಎಂದೂ ಪ್ರಶ್ನಿಸಿಲ್ಲ. 'ಸೀತೆ'ಗೆ ರಾಮಭಕ್ತರು ಸಲ್ಲಿಸುವ 'ಪೂಜಾ' ಪರಿ ಇದು!

ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದ ಅಕ್ಕಮಹಾದೇವಿ ಕೂಡ ತನ್ನ ಗಂಡನ ಕಿರುಕುಳ ತಾಳಲಾರದೆ ನಿರ್ವಸ್ತ್ರಳಾಗಿ ಮನೆಯಿಂದ ಹೊರಬಂದಿದ್ದಳು. ಹಾಗೆಯೇ ಆಕೆಯ ನಂತರ ಕಾಶ್ಮೀರದ ಲಲ್ಲೇಶ್ವರಿ (ಅಲ್ಲಿ ಇವತ್ತಿಗೂ ತಾಯಿ ಲಾಲ್‌ಡೆಡ್ ಎಂದೇ ಖ್ಯಾತಳಾಗಿರುವ ಸಂತೆ ಈಕೆ) ಕೂಡ 14ನೇ ಶತಮಾನದಲ್ಲಿ ತನ್ನ ಗಂಡ ಮತ್ತು ಅತ್ತೆಯ ಕಾಟವನ್ನು ತಾಳಲಾರದೆ ತನ್ನ ಬಟ್ಟೆಗಳನ್ನು ಕಳಚಿ ಬೆತ್ತಲಾಗಿ ಬೀದಿಗೆ ಬಂದಿದ್ದಳು.

ಅಕ್ಕಮಹಾದೇವಿ-ತಾಯಿ ಲಾಲ್‌ಡೆಡ್ ಮತ್ತು ಪೂಜಾಳಿಗೆ ತುಂಬಾ ವ್ಯತ್ಯಾಸಗಳಿವೆ, ನಿಜ. ಆದರೆ, ಅಂದಿನಿಂದ ಇವತ್ತಿನವರೆಗೂ ವಿವಿಧ ರೀತಿಯ ದೌರ್ಜನ್ಯಕ್ಕೊಳಗಾದ ಅಸಹಾಯಕ ಮಹಿಳೆಯರು ಬೆತ್ತಲಾಗಿ ಪ್ರತಿಭಟಿಸುವುದು ಮಾತ್ರ ಬದಲಾಗಿಲ್ಲ ಎಂಬುದನ್ನು ತೋರಿಸಲು ಇವರಿಬ್ಬರ ಪ್ರಸ್ತಾಪವನ್ನು ಮಾಡಿದ್ದೇನೆ. ಅಂದಹಾಗೆ ಹಲವಾರು ದೇವತೆಯರಿರುವ, ಮಾತೆಯರ ಬಗ್ಗೆ 'ಸೌಂದರ್ಯ ಲಹರಿ'ಯನ್ನು ಪಠಿಸುವ ನಮ್ಮ ನಾಡಿನಲ್ಲಿ ನ್ಯಾಯಕ್ಕಾಗಿ ಹೋರಾಡುವ ಮಹಿಳೆಯರಿಗೆ ಇರುವುದು ಎರಡೇ ಆಯ್ಕೆಗಳು ಅನ್ನಿಸುತ್ತದೆ. ಒಂದು, ನಗ್ನರಾಗುವುದು; ಎರಡು, ಬೇರೆಯವರಿಂದ ಬಲಾತ್ಕಾರವಾಗಿ ನಗ್ನತೆಗೆ ಒಳಗಾಗುವುದು.

ಇದನ್ನು ಯಾಕೆ ಹೇಳುತ್ತಿದ್ದೇನೆ ಅಂದರೆ, ಬಲಪಂಥೀಯ ಹಿಂದೂತ್ವವಾದಿ ನರೇಂದ್ರ ಮೋದಿಯ ರಾಜ್ಯದಲ್ಲಿ ಪೂಜಾ ಚೌಹಾನ್ ಬೆತ್ತಲೆಯಾಗಿ ಬೀದಿಗಿಳಿದರೆ, ಎಡಪಂಥೀಯ ಬುದ್ಧದೇವ್ ಭಟ್ಟಾಚಾರ್ಯರವರ ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ಸಿಂಗೂರ್ ಪ್ರದೇಶದ ಜನರು ಪ್ರತಿರೋಧ ವ್ಯಕ್ತಪಡಿಸಿದಾಗ, ಅಲ್ಲಿನ ಸಿಪಿಐಎಂ ಪಕ್ಷದ ಗೂಂಡಾಗಳು 18 ವರ್ಷದ ತಪಸಿ ಮಲ್ಲಿಕ್ ಎಂಬಾಕೆಯ ಮೇಲೆ ಅತ್ಯಾಚಾರವೆಸಗಿ ಆಕೆಯನ್ನು ಕೊಂದು ಹಾಕಿದರು. ಆಕೆಯಲ್ಲದೆ, ಇನ್ನೂ 14 ಹುಡುಗಿಯರು ಸಿಪಿಐಎಂನ ಗೂಂಡಾಗಳ ಕಾಮಕ್ಕೆ ಬಲಿಯಾದರು. ಇದೇ ಘರ್ಷಣೆಯಲ್ಲಿ ಸಿಂಗೂರಿನ ಪ್ರತಿಭಟನಾಕಾರರೂ ಸಿಪಿಎಂ ಪಕ್ಷಕ್ಕೆ ಸೇರಿದ ಮಹಿಳೆಯರ, ಸದಸ್ಯರ ಹೆಣ್ಣುಮಕ್ಕಳನ್ನು ಮೇಲೆಯೂ ಅತ್ಯಾಚಾರವೆಸಗಿದರು. ಅವರಲ್ಲೊಬ್ಬಳು ಆ ಅಮಾನುಷ ಕೃತ್ಯದಿಂದ ಹೊರಬರಲಾಗದೇ ಆತ್ಮಹತ್ಯೆ ಕೂಡ ಮಾಡಿಕೊಂಡಳು. ಇದೆಲ್ಲದರ ಅರ್ಥವೇನು? ಮಹಿಳೆಯರು ಎಂದೂ ಯಾವ ಹಕ್ಕನ್ನೂ ಕೇಳಬಾರದು ಎಂದಲ್ಲವೇ?

ಇದೇ ಜುಲೈ 15ಕ್ಕೆ ಸರಿಯಾಗಿ ಮೂರು ವರ್ಷಗಳ ಹಿಂದೆ ಇಂತಹದ್ದೇ ಒಂದು ಪ್ರತಿಭಟನೆ ನಡೆದದ್ದು ನಿಮಗೆ ನೆನಪಿರಬೇಕು. ಅಂದು, ಮನೋರಮಾ ಥಂಗ್‌ಜಾಮ್ ಎಂಬ ಮಹಿಳೆಯನ್ನು ಮಣಿಪುರದಲ್ಲಿರುವ ಭಾರತ ಸೈನ್ಯದ ಅಸ್ಸಾಂ ರೈಫಲ್ಸ್‌ನ ಸೈನಿಕರು ಅಮಾನುಷವಾಗಿ ರೇಪ್ ಮಾಡಿ ಕೊಂದು ಹಾಕಿದ್ದರ ವಿರುದ್ಧ ಅಲ್ಲಿನ ಮಹಿಳೆಯರು ಪ್ರತಿಭಟಿಸಿದ್ದರು. ಮೈರಾ ಪೈಬೀಸ್ ಎಂಬ ಸಂಘಟನೆಯ ಹನ್ನೆರಡು ಮಹಿಳೆಯರು ಸೈನ್ಯಾಧಿಕಾರಿಗಳ ಕಚೇರಿಯ ಮುಂದೆ ನಗ್ನರಾಗಿ 'ಇಂಡಿಯನ್ ಆರ್ಮಿ, ಕಮ್ ರೇಪ್ ಅಸ್' ಎಂದು ಪ್ರತಿಭಟಿಸಿದ್ದರು. ಅಲ್ಲಿಯವರೆಗೂ ಮಣಿಪುರದಲ್ಲಿ ನಡೆಯುತ್ತಿದ್ದ ಜನರ ಪ್ರತಿಭಟನೆಯು ದೇಶದ ಬಹಳಷ್ಟು ಜನರ ಅರಿವಿಗೆ ಬಂದೇ ಇರಲಿಲ್ಲ. ಆದರೆ ಎಲ್ಲಾ ರೀತಿಯ ಪ್ರಜಾಸತ್ತಾತ್ಮಕ ಮತ್ತು ಶಾಂತಿಯುತ ಪ್ರತಿಭಟನೆಗಳನ್ನು ಅಲ್ಲಿನ ಸರ್ಕಾರ ಮತ್ತು ಸೈನ್ಯ ನಿರ್ಲಕ್ಷಿಸುತ್ತಾ ಬಂದಿದ್ದರಿಂದ ರೋಸತ್ತ ಮಹಿಳೆಯರು ಕೊನೆಗೆ ಅಸಹಾಯಕರಾಗಿ ನಗ್ನರಾಗಿ ನಿಂತಿದ್ದರು.

ಆದರೂ ಅವರ ಈ ಕ್ರಿಯೆಯ ಬಗ್ಗೆ ಅಲ್ಲಿನ ಉನ್ನತ ಸೈನ್ಯಾಧಿಕಾರಿ ಪ್ರತಿಕ್ರಿಯಿಸಿದ್ದು ಹೇಗೆ ಗೊತ್ತಾ? "ನಮ್ಮಂತಹ ದೊಡ್ಡ ಸೈನ್ಯದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರದಂತಹ ಕೃತ್ಯಗಳು ಆಗಾಗ್ಗೆ ಸಂಭವಿಸುತ್ತವೆ" ಎಂದು.



ರೀಟಾ ಮಂಚಂದಾ ಎಂಬುವವರು ಒಂದು ಲೇಖನದಲ್ಲಿ ಬರೆದಿರುವಂತೆ "ಯುದ್ಧ ಸಮಯದಲ್ಲಿ ಅತ್ಯಾಚಾರಗಳು ಸಂಭವಿಸುವುದಿಲ್ಲ, ಬದಲಾಗಿ ಅದನ್ನೂ ಒಂದು ಅಸ್ತ್ರವಾಗಿ ಬಳಸಲಾಗುತ್ತದೆ." ಈ ಕಾರಣದಿಂದಲೇ ಇವತ್ತು ಅಂತರರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯವು ಅತ್ಯಾಚಾರವನ್ನು ಒಂದು ಯುದ್ಧದ ಅಪರಾಧ ಎಂದು ಪರಿಗಣಿಸಿದೆ. ಯುದ್ಧ ಸಂದರ್ಭಗಳಲ್ಲಿ ಮಾತ್ರ ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆಯುವುದಿಲ್ಲ. ದಂಗೆಕೋರರ ವಿರುದ್ಧ ಸೈನ್ಯವು ಕಾರ್ಯಾಚರಣೆಗೆ ಇಳಿದಾಗಲೂ, ದಂಗೆಕೋರರಿಗೆ ಬೆಂಬಲ ನೀಡುತ್ತಿರುವ ಸಮುದಾಯಗಳ ಮೇಲೂ ಸೈನ್ಯ ಮುಗಿಬಿದ್ದು ಅಪಹರಣ, ಕೊಲೆ, ಅತ್ಯಾಚಾರಗಳನ್ನು ನಡೆಸುತ್ತದೆ. ಆದರೆ ಅಂತಹ ಕೃತ್ಯಗಳಲ್ಲಿ ಪಾಲ್ಗೊಳ್ಳುವ ಸೈನಿಕರ ವಿರುದ್ಧ ಯಾವ ಕ್ರಮವನ್ನೂ ತೆಗೆದುಕೊಳ್ಳಲು ಸರ್ಕಾರಗಳಿಗೆ ಅಧಿಕಾರ ಇರುವುದಿಲ್ಲ.

ಅದರಲ್ಲೂ ಇವತ್ತು ಈಶಾನ್ಯ ಪ್ರದೇಶಗಳಲ್ಲಿ ಜಾರಿಯಲ್ಲಿರುವ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯಿದೆ (AFSPA)ಯನ್ನಂತೂ 'ಭಾರತ ಬಿಟ್ಟು ತೊಲಗಿ' ಆಂದೋಲನದ ಸಮಯದಲ್ಲಿದ್ದ ಬ್ರಿಟಿಷರ ಕಾನೂನನ್ನೇ ಅವಲಂಭಿಸಿ ತಯಾರಿಸಲಾಗಿದೆ. ಮಣಿಪುರದಲ್ಲಿ ಈ ಕಾಯಿದೆಯನ್ನು 1980 ರಲ್ಲಿ ಜಾರಿಗೊಳಿಸಿದಾಗ ಅಲ್ಲಿ ಕೇವಲ ನಾಲ್ಕು ದಂಗೆಕೋರ ಗುಂಪುಗಳಿದ್ದವು. ಇವತ್ತು ಅವುಗಳ ಸಂಖ್ಯೆ ಮೂವತ್ತಕ್ಕೇರಿದೆ. ಅಂದರೆ ಅಲ್ಲಿ ಇನ್ನೆಂತಹ ದೌರ್ಜನ್ಯ ನಡೆಯುತ್ತಿರಬಹುದೆಂದು ಊಹಿಸಲೂ ಅಸಾಧ್ಯವಾಗುತ್ತದೆ.

ವಾಸ್ತವಕ್ಕೆ ಹಿಂದಿರುಗುವುದಾದರೆ ಮಣಿಪುರದ ಮಹಿಳೆಯರ ನಗ್ನ ಪ್ರತಿಭಟನೆ ನಡೆದ ನಂತರ ಈ ಕಾಯಿದೆಯನ್ನು ರದ್ದುಗೊಳಿಸಬೇಕು ಎಂದು ಸರ್ವೋಚ್ಚ ನ್ಯಾಯಾಲಯದ ಮುಂದೆ ಮನವಿ ಮಾಡಿಕೊಳ್ಳಲಾಯಿತು. ಆದರೆ ಅದಕ್ಕೆ ಒಪ್ಪದ ನ್ಯಾಯಾಲಯ ಸರ್ಕಾರವು ಅದನ್ನು ವಿಮರ್ಶೆಗೆ ಒಳಪಡಿಸಬೇಕೆಂದು ಮಾತ್ರ ಹೇಳಿತು. ಅಂದು ಪ್ರಧಾನಿ ಮನಮೋಹನ್ ಸಿಂಗ್ ಮತ್ತು ಕಾಂಗ್ರೆಸ್ ಪಕ್ಷದ ನಾಯಕಿ ಸೋನಿಯಾ ಗಾಂಧಿ, ಇಬ್ಬರೂ ಮಣಿಪುರ ಮಹಿಳೆಯರ ದನಿಗೆ ಓಗೊಟ್ಟು, **AFSPA** ಕಾಯಿದೆಯನ್ನು ವಿಮರ್ಶೆಗೆ ಒಳಪಡಿಸಲು ನ್ಯಾಯಮೂರ್ತಿ ಜೀವನ್ ರೆಡ್ಡಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿತು. ಆ ಸಮಿತಿಯು **2005**ರ ಜೂನ್ ತಿಂಗಳಲ್ಲಿ ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತಾದರೂ ಅದನ್ನು ಇವತ್ತಿನ ತನಕ ಬಹಿರಂಗಪಡಿಸಿಲ್ಲ ಸಿಂಗ್-ಸೋನಿಯಾ ಸರ್ಕಾರ. ಯಾಕೆಂದರೆ ಅವರ ಸರ್ಕಾರದ ರಕ್ಷಣಾ ಇಲಾಖೆಯೇ ನ್ಯಾಯಮೂರ್ತಿ ಜೀವನ್ ರೆಡ್ಡಿ ಸಮಿತಿಯ ವರದಿಯನ್ನು ಬಹಿರಂಗಪಡಿಸಬಾರದೆಂದೂ, ಸೈನ್ಯಕ್ಕೆ **AFSPA** ಅಗತ್ಯವಾಗಿದೆ ಎಂದೂ ವಾದಿಸಿತ್ತು. ಇದಕ್ಕೆ ಕಾರಣವೂ ಇತ್ತು. ಅದೇನೆಂದರೆ ಜೀವನ್ ರೆಡ್ಡಿ ಸಮಿತಿಯು **AFSPA** ಯನ್ನು ರದ್ದುಗೊಳಿಸಬೇಕೆಂದು ಅಭಿಪ್ರಾಯಪಟ್ಟಿತ್ತು ಎಂಬ ಗುಪ್ತ (ಜನರಿಂದ ಗುಪ್ತ, ಅಧಿಕಾರದಲ್ಲಿರುವವರಿಗೆ ಉಚಿತ) ಮಾಹಿತಿ!


ಯಾವುದೇ ಮಹಿಳೆಗೆ ತನ್ನ ಮಾನವನ್ನು ಜಾಗೃತವಾಗಿ ಕಾಪಾಡಿಕೊಳ್ಳುವುದು ಪ್ರಥಮ ಆದ್ಯತೆಯಾಗಿರುತ್ತದೆ. ಆದರೆ ತನ್ನ ಮೇಲೆ ಎಲ್ಲಾ ರೀತಿಯ ಅತ್ಯಾಚಾರ, ದೌರ್ಜನ್ಯ, ಹಿಂಸೆ ನಡೆದಾಗ ಆ 'ಮಾನ' ಎಂಬುದನ್ನು ಕಾಪಾಡಿಕೊಳ್ಳುವುದರಲ್ಲಿ ಏನರ್ಥವಿರುತ್ತದೆ? ಮನವಿ, ಪ್ರತಿಭಟನೆ, ಆಕ್ರೋಶ, ಎಲ್ಲವೂ ತನ್ನ ಪರಿಸ್ಥಿತಿಯ ಬಗ್ಗೆ ಗಮನ ಸೆಳೆಯದಿದ್ದಾಗ ಆಕೆಗೆ ಕೊನೆ ಅಸ್ತ್ರವಾಗಿ ಉಳಿಯುವುದೇ ಆಕೆಯ ದೇಹ. ಅದನ್ನೂ ನಗ್ನಗೊಳಿಸಿ ನಿಲ್ಲುತ್ತಾಳೆಂದರೆ ಅವಳ ಅಸಹಾಯಕತೆ ಯಾವ ಹಂತ ತಲುಪಿರಬಹುದು ಎಂಬುದು ಸೂಕ್ಷ್ಮ ಮನಸ್ಸಿನವರಿಗೆ ಅರ್ಥವಾಗುತ್ತದೆ.

-ಗೌರಿ ಲಂಕೇಶ್

ಯಡ್ಡಿ ಮಗನ ರೌಡಿಗಿರಿ!

ಶಿಷ್ಯ ರೇಣುಕಾಚಾರ್ಯ ನರ್ಸ್ ಜಯಲಕ್ಷ್ಮಿ ಜೊತೆ ಡಿಂಗ್‌ಡಾಂಗ್ ಮಾಡಿ ಫಜೀತಿಗೆ ಬಿದ್ದರೆ, ಗುರು ಯಡ್ಡಿಯ ಮಗ ಮಹಿಳಾ ಹೋರಾಟಗಾರ್ತಿಯನ್ನೇ ಹಾಕಿ ಬಡಿದಿದ್ದಾನೆ!

ಕಳೆದ ಐದು ದಿನಗಳಿಂದ ಶಿಕಾರಿಪುರದ ಪೊಲೀಸ್ ಠಾಣೆಯೆದುರು ಆ ಊರಿನ ಸಾರಾಯಿ ವಿರೋಧಿ ಹೆಂಗಸರು ನಡೆಸುತ್ತಿದ್ದ ಧರಣಿ ಪ್ರತಿಭಟನೆ, ಮಹಾತ್ಮಾಗಾಂಧೀಜಿಯ ಫೋಟೋ ಅನ್ನೇ ಕಿತ್ತು ಬೀದಿಗೆಸೆದು ಪ್ರತಿಭಟನಾಕಾರರನ್ನು ಹೊಡೆದೋಡಿಸಿದ ಅಲ್ಲಿನ ಪೊಲೀಸ್ ವರ್ತನೆ, ಯಡ್ಡಿಯ ದ್ವಿತೀಯ ಪುತ್ರ ರಾಘವೇಂದ್ರನನ್ನು ಬಂಧಿಸುವಂತೆ ಬೆಂಗಳೂರಿನ ಬನಪ್ಪ ಪಾರ್ಕಿನಲ್ಲಿ ಮಹಿಳೆಯರು ಇದೇ ಜುಲೈ ಏಳರಂದು ನಡೆಸಿದ ಹೋರಾಟ; ಇತ್ಯಾದಿಗಳ್ಯಾವುದನ್ನೂ ಟೀವಿಗಳು ಬಿತ್ತರಿಸುತ್ತಿಲ್ಲ, ಪತ್ರಿಕೆಗಳು ಬರೆಯುತ್ತಿಲ್ಲ ಏಕೆ?



ಏಕೆಂದರೆ, ಶಿಕಾರಿಪುರದ ಸಾರಾಯಿ ವಿರೋಧಿ ಹೋರಾಟಗಾರ್ತಿ ವಿಜಯಲಕ್ಷ್ಮಿ ಕಂಚುಗಾರ ಎಂಬಾಕೆಯ ಮೇಲೆ ತನ್ನ ರೌಡಿ ಪಡೆಯೊಂದಿಗೆ ದಂಡೆತ್ತಿ ಬಂದು, ತನ್ನ ತಾಯಿ ಸಮಾನಳಾದ ಆಕೆಯನ್ನು ಅಸಹ್ಯವಾಗಿ ಬೈಯ್ದು ಹಲ್ಲೆಗೆ ಯತ್ನಿಸಿದ ಶಿಕಾರಿಪುರಿ ಯುವ ಬಜೆಪಿ ನಾಯಕ ಬಿ.ವೈ. ರಾಘವೇಂದ್ರ ಉಪಮುಖ್ಯಮಂತ್ರಿ ಯಡಿಯೂರಪ್ಪನವರ ದ್ವಿತೀಯ ಪುತ್ರ!

ಅದೂ ಯಡಿಯೂರಪ್ಪನವರ ಸ್ವಂತ ಕ್ಷೇತ್ರ ಶಿಕಾರಿಪುರದುದ್ದಕ್ಕೂ ನಡೆಯುತ್ತಿರುವ ಕಳಪೆ ಕಾಮಗಾರಿಗಳ ವಿರುದ್ಧ ಪ್ರತಿಭಟಿಸಿದ ತಪ್ಪಿಗಾಗಿ?

ಒಂದೇ ವರ್ಷದ ಕ್ಷಣಿಕ ಅಧಿಕಾರಲಾಲಸೆ ಎಂಬುದು ಸೋಕಾಲ್ಡ್ ರಾಮಭಕ್ತರಾದ ಬಜೆಪಿಯವರನ್ನು ಅದೆಷ್ಟು ಕುಲಗೆಡಿಸಿರಬೇಡ? ಅಷ್ಟಕ್ಕೂ ತಾನೊಬ್ಬ ಉಪಮುಖ್ಯಮಂತ್ರಿಯ ಮಗ ಎಂಬುದನ್ನೂ ಲೆಕ್ಕಿಸದೇ ತನ್ನ ತಾಯಿ ಸಮಾನಳಾದ ಹೆಂಗಸನ್ನು ನಡುರಸ್ತೆಯಲ್ಲಿ ಹಾಕಿ ಬಡಿದ ರಾಘವೇಂದ್ರನ ದುರಾಚಾರ ಇನ್ನೆಷ್ಟಿರಬೇಡ?

ಅದು ಮುನ್ನೂರು ಕೋಟಿ ರೂಪಾಯಿಗಳ ಕಾಮಗಾರಿ ಕರ್ಮಕಾಂಡ. ಶಿವಮೊಗ್ಗ ಜಿಲ್ಲೆಯೊಂದಕ್ಕೇ ನಾನೂರು ಕೋಟಿ ರೂಪಾಯಿಯ ಕಾಮಗಾರಿಗಳನ್ನು ಉಪಮುಖ್ಯಮಂತ್ರಿ ಯಡಿಯೂರಪ್ಪ ತಂದರೆಂದು ಅವರ ಪಟಾಲಂ ಟಾಂಟಾಂ ಮಾಡಿಕೊಂಡೇ ಬಂದದ್ದು, ಯಡ್ಡಿಯ ಮಕ್ಕಳಂತೂ 'ನಾನೂರು ಕೋಟಿ ತಂದ ಗಂಡುಸು ನಮ್ಮಪ್ಪ ಕಣ್ರೀ' ಎಂದು ಎಲ್ಲೆಂದರಲ್ಲಿ ಡೈಲಾಗ್ ಹೊಡೆಯುತ್ತಿರುವುದರ ಮತ್ತೊಂದು ಮುಖವೇ ವಿಜಯಲಕ್ಷ್ಮಿಯವರ ಮೇಲೆ ನಡೆದ ಹಲ್ಲೆ.

ಯಡಿಯೂರಪ್ಪ ಉಪಮುಖ್ಯಮಂತ್ರಿಯಾಗುತ್ತಿದ್ದಂತೆ ಅವರನ್ನು ಗೆಲ್ಲಿಸುತ್ತಲೇ ಬಂದ ಶಿಕಾರಿಪುರಕ್ಕೆ, ಬರಪರಿಹಾರ ನಿಧಿಯ ಪ್ರವಾಹವೇ ಹರಿದು ಬಂತು. ಕಿರ್ನೆಲ್ಲಿ ಗೋಮಾಳದಿಂದ ಚಿನ್ನಕಟ್ಟೆಕೆರೆಗೆ ಫೀಡರ್ ಚಾನೆಲ್, ಮಳವಳ್ಳಿ ಗೋಮಾಳದಿಂದ ತಾಮ್ರದ ಕಟ್ಟೆಕೆರೆಗೆ 2 ಕಿ.ಮೀ. ಉದ್ದದ ಮತ್ತೊಂದು ಫೀಡರ್ ಚಾನಲ್, ಮಾಯತಮ್ಮನ ಮುಚಡಿ ಬನಶಂಕರಿ ಕೆರೆ ಅಭಿವೃದ್ಧಿ, ಇಟ್ಟಿಗೆಹಳ್ಳಿ ದಲಿತರ ಕಾಲೋನಿಯಿಂದ ರಸ್ತೆ ಅಭಿವೃದ್ಧಿ, ಅಡಗಂಟಿ ಮುತ್ತಗಿ ರಸ್ತೆ ಅಭಿವೃದ್ಧಿ, ನಾಗೀಹಳ್ಳಿ ಊರಿನ ಎಲ್ಲಾ ರಸ್ತೆಗಳ ಮರು ಡಾಂಬರೀಕರಣ, ಸದಾಶಿವಪುರ ತಾಂಡಾಕ್ಕೆ ಹೋಗುವ ರಸ್ತೆಯ ಎರಡು ಕಡೆ ಗ್ರಾವೆಲ್ ಹಾಕಿ ಎತ್ತರಿಸುವ ಕಾಮಗಾರಿ, ಹಳೇ ಮುಗಳಕೆರೆ ದಲಿತರ ಕಾಲೋನಿಯ ಅಭಿವೃದ್ಧಿ; ಇತ್ಯಾದಿಗಳನ್ನೆಲ್ಲ ಸೇರಿಸಿದರೆ ಅದೇ ಹನ್ನೆರಡು ಕೋಟಿಗಳ ಕಾಮಗಾರಿಯಾಗುತ್ತದೆ.


ಅದಕ್ಕೆ ತಕ್ಕಂತೆ 2007ರ ಜನವರಿಯಲ್ಲಿ ಶಿಕಾರಿಪುರವನ್ನು ಬರಪೀಡಿತ ಪ್ರದೇಶವೆಂದು ಸರ್ಕಾರ ಘೋಷಿಸಿಬಿಟ್ಟಿತು. ಸರಿಸುಮಾರು ಮೂರು ಕೋಟಿ ರೂಪಾಯಿಗಳ ಸರ್ಕಾರಿ ಅಕ್ಕಿ ಮತ್ತು ಹದಿನೈದು ಕೋಟಿಯ ಕಾಮಗಾರಿಗಳ ಇನ್ನೊಂದು ಪ್ಯಾಕೇಜ್ ಬಂತು. ಜೊತೆಗೆ 2007ರ ಏಪ್ರಿಲ್ 6ರಂದು ಪ್ರಕೃತಿ ವಿಕೋಪ ಪರಿಹಾರ ನಿಧಿಯ (CRF) ಅಡಿಯಲ್ಲಿ ಶಿಕಾರಿಪುರ-ಸಾಲೂರು ರಸ್ತೆಯ 169 ಕಿ.ಮೀ. ಅಗಲೀಕರಣ, ಬಗನಕಟ್ಟೆ-ಸಂಕ್ಲಾಪುರದ ರಸ್ತೆ ಅಭಿವೃದ್ಧಿ, ಸುರಗಿಹಳ್ಳಿಯಿಂದ ಚಿಕ್ಕಜಂಬೂರಿಗೆ ಹೋಗುವ ರಸ್ತೆ ಕಾಮಗಾರಿ ಇತ್ಯಾದಿಗೆ ಮತ್ತೆ ಐದು ಕೋಟಿಯ ಹೆಚ್ಚುವರಿ ಪ್ಯಾಕೇಜ್. ರಾಷ್ಟ್ರೀಯ ವಿಪತ್ತು ಸಾದಿಲ್ವಾರು ನಿಧಿ (NCCF)ಯ ಆರು ಕೋಟಿ- ಹೀಗೆ ಉಪಮುಖ್ಯಮಂತ್ರಿಯ ಕ್ಷೇತ್ರಕ್ಕೆ ಕೋಟಿಗಳ ಲೆಕ್ಕದಲ್ಲಿ ಫಂಡು ಹರಿದುಬಂತು.

ಈ ರೀತಿ ಮಂಜೂರಾದ ದುಡ್ಡು ಮತ್ತು ರವಾನೆಯಾದ ಆಹಾರಧಾನ್ಯಗಳೇನಾದರೂ ಪ್ರಾಮಾಣಿಕವಾಗಿ ಬಳಕೆಯಾಗಿದ್ದರೆ ಶಿಕಾರಿಪುರವೆಂಬ ಊರು ಸ್ವರ್ಗವಾಗಿಬಿಡುತ್ತಿತ್ತು! ದುರಂತವೆಂದರೆ ಕಾಮಗಾರಿ ಟೆಂಡರ್‌ಗಳೆಲ್ಲ ಯಡ್ಡಿಯ ಭ್ರಷ್ಟ ಪಟಾಲಮ್ಮಿನ ಪಾಲಾಗಿಹೋದವು. ಮೂಟೆಗಟ್ಟಲೇ ಧಾನ್ಯಗಳನ್ನು ಶಿವಮೊಗ್ಗದ ಸ್ಮಗ್ಲರುಗಳು ನುಂಗಿಬಿಟ್ಟರು. ಇಂಥ ಬರಪರಿಹಾರದ ಅಷ್ಟೂ ಪ್ಯಾಕೇಜುಗಳಿಗೊಂದು ಗತಿಕಾಣಿಸುವುದಕ್ಕೆಂದೇ ನಿಂತವನು ಯಡಿಯೂರಪ್ಪನವರ ದ್ವಿತೀಯ ಪುತ್ರ ರಾಘವೇಂದ್ರ!



ವಿಜಯಲಕ್ಷ್ಮಿ

ಬೆಂಗಳೂರಿನ ಅಷ್ಟೂ ಡೀಲುಗಳನ್ನು ಯಡ್ಡಿಯ ಹಿರಿಯ ಮಗ ವಿಜಯೇಂದ್ರ ಮತ್ತು ದೊಡ್ಡ ಮಗಳು ಪದ್ಮಾವತಿ ನೋಡಿಕೊಂಡರೆ, ಶಿಕಾರಿಪುರದ ಉತ್ಪತ್ತಿಯನ್ನು ಕಿರಿಯ ಮಗ ರಾಘವೇಂದ್ರ ಮತ್ತು ಎರಡನೇ ಮಗಳು ಅರುಣ ನಿಭಾಯಿಸುತ್ತಾರೆ. ಜೊತೆಗೆ ಯಡ್ಡಿಯ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ, ಕುಮುದ್ವತಿ ಬಿ.ಎಡ್. ಕಾಲೇಜು, ಅಕ್ಕಮಹಾದೇವಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆ, ಶಿವಮೊಗ್ಗದ ಮೈತ್ರಿ ನರ್ಸಿಂಗ್ ಕಾಲೇಜ್ ಇತ್ಯಾದಿ ಕ್ಯಾಪಿಟೇಶನ್ ಸಾಮ್ರಾಜ್ಯಕ್ಕೂ ಈ ರಾಘವೇಂದ್ರನೇ ಅಧಿಪತಿ. ಇತ್ತೀಚೆಗಷ್ಟೇ ಭದ್ರಾವತಿಯ ಬನ್ನಿ ಎಂಬ ಝುಂಡುಬಾಮ್ ವೀರನನ್ನು ಮುಂದಿಟ್ಟುಕೊಂಡು ಮೈತ್ರಿ ಆಟೋಮೊಬೈಲ್ಸ್ ಎಂಬ ಕಾರು ಮತ್ತು ಬೈಕುಗಳ ಮಳಿಗೆಗಳನ್ನು ಶಿವಮೊಗ್ಗದಲ್ಲಿ ಆರಂಭಿಸಿದ್ದಾನೆ. ಹಡಬೆ ದುಡ್ಡು ಪೋಕರಿಗಳ ಹಿಂದು ಜೊತೆಗಿದ್ದ ಮೇಲೆ ಕೇಳಬೇಕೆ?




ಯಡ್ಡಿ ಪುತ್ರ ರಾಘವೇಂದ್ರ

ಬಹುಶಃ ಶಿಕಾರಿಪುರದ ಸಾರಾಯಿ ವಿರೋಧಿ ಹೋರಾಟಗಾರ್ತಿ ವಿಜಯಲಕ್ಷ್ಮಿಗೆ ತಾನು ಕೈಯಿಟ್ಟ ಕಳಪೆ ಕಾಮಗಾರಿ ವಿರೋಧಿ ಹೋರಾಟಕ್ಕೆ ಯಡ್ಡಿಯ ಮಗನೇ ಎದುರಾಳಿ ಎಂಬುದು ಹೇಗೆ ತಾನೇ ಗೊತ್ತಾದೀತು?

ಆಕೆಯ ಪೂರ್ತಿ ಹೆಸರು ವಿಜಯಲಕ್ಷ್ಮಿ ಕಂಚುಗಾರ. ಇಬ್ಬರು ಮಕ್ಕಳ ತಾಯಿ. ಪತಿ ಶಿವಣ್ಣ ಸಾಗರದಲ್ಲಿ ವಿಲೇಜ್ ಪಂಚಾಯ್ತಿ ಕಾರ್ಯದರ್ಶಿ. ಶಿಕಾರಿಪುರವೊಂದರಲ್ಲೇ ಸರಿಸುಮಾರು ಇಪ್ಪತ್ತೆರಡು ಸಾವಿರದಷ್ಟು ಕುರುಬರ ಮತಗಳಿವೆ. ವಿಜಯಲಕ್ಷ್ಮಿ ಅಲ್ಲಿನ ಕುರುಬರ ನಾಯಕಿಯೂ ಹೌದು. ಇಲ್ಲಿಗೆ ಮೂರು ವರ್ಷದ ಹಿಂದೆ ಜೆಡಿಎಸ್‌ನ ಮಹಿಳಾ ಘಟಕದ ರಾಜ್ಯಾಧ್ಯಕ್ಷೆಯಾಗಿ ಇನ್ನೇನು ಈಕೆಯನ್ನೇ ನೇಮಿಸಬೇಕೆನ್ನುವಷ್ಟರಲ್ಲಿ ಸಿದ್ಧರಾಮಯ್ಯ ಜೆಡಿಎಸ್ ತೊರೆದುಬಿಟ್ಟರು. ಜಾತಿಯಲ್ಲಿ ಕುರುಬಳಾದ್ದರಿಂದ ದೇವೇಗೌಡರ ಕೆಂಗಣ್ಣಿಗೆ ಬಲಿಯಾದ ವಿಜಯಲಕ್ಷ್ಮಿ ಆ ಹೊತ್ತಿಗಾಗಲೇ ಶಿಕಾರಿಪುರದ ತಾಲ್ಲೂಕು ಬಜೆಪಿ ಅಧ್ಯಕ್ಷ ಪದವಿಗೆ ಗುಡ್‌ಬೈ ಹೇಳಿ ಅನೇಕ ದಿನಗಳಾಗಿದ್ದವು.

ಅಷ್ಟಕ್ಕೂ ಈಕೆಯ ಸಂಘಟನಾ ಸಾಮರ್ಥ್ಯವನ್ನು ಮೊದಲ ಬಾರಿಗೆ ಗುರುತಿಸಿದ್ದೇ ಯಡಿಯೂರಪ್ಪ. ಶಿಕಾರಿಪುರದಲ್ಲೇ ಸರಿಸುಮಾರು 22 ಮಹಿಳಾ ಸ್ತ್ರೀಶಕ್ತಿ ಸಂಘಗಳನ್ನು ಹುಟ್ಟುಹಾಕಿದ್ದು, ಅಲ್ಲಿನ ಅನೇಕ ಹಳ್ಳಿಗಳಲ್ಲಿ ಸಾರಾಯಿ ವಿರೋಧಿ ಹೋರಾಟವನ್ನು ಕಟ್ಟಿದ್ದು, ಯಡ್ಡಿಯ ಬಲಗೈ ಬಂಟ ಮತ್ತು ಮಾಜಿ ಜಿಲ್ಲಾ ಪಂಚಾಯ್ತಿ ಮೆಂಬರ್ ಭದ್ರಾಪುರದ ಹಾಲಪ್ಪನ ಅಳಿಯ ಮಾರುತ್ತಿದ್ದ ಅಕ್ರಮ ಸಾರಾಯಿಯ ವಿರುದ್ಧ ಬೀದಿಗಿಳಿದಿದ್ದು ಮತ್ತು ಆ ಕಾರಣಕ್ಕೇ ಯಡ್ಡಿಯ ಸಿಟ್ಟಿಗೆ ಬಲಿಯಾಗಿದ್ದು; ವಿಜಯಲಕ್ಷ್ಮಿಯ ಸಂಕ್ಷಿಪ್ತ ಹಿನ್ನೆಲೆಯಷ್ಟೇ.

ಇತ್ತ ಬಜೆಪಿಯನ್ನೂ ತೊರೆದು ಅತ್ತ ಜೆಡಿಎಸ್‌ಗೂ ಸಲ್ಲದೇ ತ್ರಿಶಂಕುಸ್ಥಿತಿಯಲ್ಲಿದ್ದ ವಿಜಯಲಕ್ಷ್ಮಿ ಕಂಚುಗಾರ ಶಿಕಾರಿಪುರ ನಾಗರಿಕರ ವೇದಿಕೆಯ ಅಧ್ಯಕ್ಷೆಯಾಗಿ ತನ್ನದೇ ರೀತಿಯಲ್ಲಿ ಹೋರಾಡುತ್ತಾ, ಜನರನ್ನು ಸಂಘಟಿಸುತ್ತಾ ಬಂದಿದ್ದಾರೆ. ಹೀಗಿರುವಾಗಲೇ ಜುಲೈ 2ರ ಘಟನೆ ನಡೆದಿದೆ. ಅವತ್ತು ಬೆಳಿಗ್ಗೆ ಗ್ಯಾಸ್ ತರಲೆಂದು ತಿಮ್ಮಲಾಪುರ ರಸ್ತೆಯ ವನಶ್ರೀ ಘಾರಂನ ತನ್ನ ಮನೆಯಿಂದ ಚನ್ನಕೇಶವ ನಗರದ ಮೊದಲನೇ ಮುಖ್ಯರಸ್ತೆಗೆ ಬರುತ್ತಿದ್ದಂತೆ ಜನ ಗುಂಪುಗೂಡಿದ್ದು ಕಾಣಿಸಿದೆ. ಕಾರನ್ನು ನಿಧಾನಿಸಿ ಕೇಳಿದ್ದಕ್ಕೆ, ಜನ ಕಳಪೆ ಕಾಮಗಾರಿ ಬಗ್ಗೆ ದೂರಿದ್ದಾರೆ. ಅದು ಚರಂಡಿ ಕಟ್ಟೆಯ ಕಾಮಗಾರಿ. ವಾಸ್ತವವಾಗಿ 30 ಬಾಂಡ್ಲಿ ಮರಳಿಗೆ 1 ಮೂಟೆ ಸಿಮೆಂಟ್ ಹಾಕಬೇಕು. ಆದರೆ ಕಾಮಗಾರಿ ಮಾಡುತ್ತಿದ್ದಾತ 70 ಬಾಂಡ್ಲಿ ಮರಳಿಗೆ ಮುಕ್ಕಾಲು ಮೂಟೆ ಸೀಮೆಂಟ್ ಕಲಿಸಿದ್ದ!



ಯಡ್ಡಿ ಮಗನ ವಿರುದ್ಧ ಬೆಂಗಳೂರಿನಲ್ಲಿ ಪ್ರತಿಭಟನೆ

ವಿಜಯಲಕ್ಷ್ಮಿ ಬುದ್ಧಿ ಹೇಳಿದ್ದಾರೆ. ನಾನು ವಾಪಸ್ಸು ಬರುವ ಹೊತ್ತಿಗೆ ಇನ್ನೊಂದು ಮೂಟೆ ಸೀಮೆಂಟ್ ತರಿಸಿ ಹಾಕಲೇಬೇಕು ಎಂದು ಹರತ್ತು ವಿಧಿಸಿಯೇ ಗ್ಯಾಸ್ ಅಂಗಡಿಗೆ ಹೋಗಿದ್ದಾರೆ. ವಾಪಸ್ಸು ಬಂದು ನೋಡಿದರೆ ಅದೇ ಗಾರೆ ಸಹಜವಾಗೇ ಇದು ವಿಜಯಲಕ್ಷ್ಮಿಯನ್ನು ಕೆರಳಿಸಿದೆ. ಮರುದಿನ ಬೆಳಿಗ್ಗೆ ಉದಯ ಕರ್ನಾಟಕದ ಲಿಂಗರಾಜು, ಮಲೆನಾಡು ಮಿತ್ರದ ಹಳದಪ್ಪ, ಕ್ರಾಂತಿದೀಪದ ಕೋಟೇಶ್ವರ್ ಮತ್ತು ಸಂಯುಕ್ತ ಕರ್ನಾಟಕದ ಸುರೇಶ್ ಮುಂತಾದ ಪತ್ರಕರ್ತರನ್ನು ಕರೆದೊಯ್ದು ಕಳಪೆ ಕಾಮಗಾರಿಯನ್ನು ತೋರಿಸಿದ್ದಾರೆ.

ಅದೆಷ್ಟು ಕಳಪೆಯಾಗಿತ್ತೆಂದರೆ, ವಿಜಯಲಕ್ಷ್ಮಿ ಸುಮ್ಮನೇ ಅಲ್ಲಾಡಿಸಿದ್ದಕ್ಕೇ ಕಲ್ಲುಗಳೆಲ್ಲ ಉದುರಿಬಿದ್ದವು. ಕಳಪೆಗಾರೆಯ ಮೇಲೆ ಸಿಮೆಂಟಿನ ಪ್ಲಾಸ್ಟರ್ ಮಾಡಲಾಗಿತ್ತಷ್ಟೆ. ಯಾವತ್ತು ಚರಂಡಿಯ ಕಟ್ಟೆ ಉದುರಿಬಿತ್ತೋ ಕಂಟ್ರಾಕ್ಟರ್ ಛೇಲಾಗಳು ಜಗಳಕ್ಕೆ ನಿಂತಿದ್ದಾರೆ. 'ನೀವ್ಯಾರ‍್ರೀ ಕೇಳೋಕ್ಕೇ?' ಎಂದಿದ್ದೇ 'ಇಲ್ಲೇ ಇರಿ ನಮ್ಮ ಬಾಸ್ ಬರ‍್ತಾರೆ' ಎಂದು ಯಾರಿಗೋ ಫೋನ್ ಮಾಡಿದ್ದಾನೆ

ಬಹುಶಃ 'ಬಾಸ್' ಎಂದರೆ ಕಂಟ್ರಾಕ್ಟರ್ ಇರಬೇಕೆಂದು ಭಾವಿಸಿದ ಪತ್ರಕರ್ತರ ತಂಡ ಅಲ್ಲೇ ನಿಂತಿದೆ. ಕೊಂಚ ಹೊತ್ತಿಗೇ ಬಜೆಪಿಯ ಲಾಂಛನವಿದ್ದ ಸುಮೋ ಒಂದು ನುಗ್ಗಿ ಬಂದಿದೆ ಅದರಿಂದ ಮೊದಲು ಇಳಿದವನೇ ಯಡ್ಡಿಯ ಮ ರಾಘವೇಂದ್ರ!

ಅವನೊಬ್ಬನೇ ಅಲ್ಲ, ಜೊತೆಗೆ ಯಡ್ಡಿಯ ಆಪ ಸಹಾಯಕ ಗುರುಮೂರ್ತಿ, ಯಡ್ಡಿಯ ಪರಮಾಪ ಮಾಜಿ ಎಮ್ಮೆಲ್ಸಿ ಶಾಂತವೀರಪ್ಪನ ಮಗ ರವೀಂದ ಉರ್ಫ್ ರಾಘವೇಂದ್ರ, ಡಿಸಿಸಿ ಬ್ಯಾಂಕ್ ಡೈರೆಕ್ಟರ ಕೊಳಗಿ ರೇವಣ್ಣಪ್ಪ, ಹೊಸೂರು ಜಿ.ಪಂ. ಸದಸ

ರಾ. ಸೋಮನಾಥ್

ರಾಮನಾಯ್ಕ, ಎಮ್ಮೆಲ್ಸಿ ಶಾಂತವೀರಪ್ಪನ ಅಳಿಯ ಕೆ.ಪಿ. ಮಂಜುನಾಥ, ಜೊತೆಗೆ ದೊಡ್ಡಪೇಟೆಯ ರೌ ಗಂಗಾಧರ, ಭವಾನಿರಾವ್ ಕೇರಿಯ ಪಾತಕಿ ಎಸ್‌ವಿ ಮೂರ್ತಿ ಮತ್ತವರ ರೌಡಿ ಗ್ಯಾಂಗ್!

ಬಂದುಬಂದದ್ದೇ ಯಡ್ಡಿಯ ಮಗ ರಾಘವೇಂದ ವಿಜಯಲಕ್ಷ್ಮಿಯ ಮೇಲೆ ಏರಿಹೋದ. 'ಯಾರೊ ಹಾದಿಬೀದೀಲಿ ಹೋಗೋಳು ಕೇಳಿದ್ಲು ಅಂತ ನೀವ್ಯಾಕ್ರೋ ಕೆಲಸ ನಿಲ್ಲಿಸಿದ್ರಿ?' ಎಂದು ಕೆಲಸಗಾರರನ ಬೈಯ್ಯಲಾರಂಭಿಸಿದ. ಇದನ್ನು ಕೇಳಿದ್ದೇ ವಿಜಯಲಕ್ಷ್ಮಿ 'ನೋಡಿ ಮಾತಾಡಿ; ಹಾದಿಬೀದೀಲಿ ಹೋಗೋಳ ಅಂತ ಯಾರನ್ನು ಹೇಳ್ತಿದ್ದೀರಿ? ನಾನೊಬ್ಬ ಜವಾಬ್ದಾ ಯಿರೋ ಹೆಂಗಸು. ನಿಮ್ಮ ಮಾತನ್ನು ವಾಪಸ ತಗೊಳ್ಳೀ...!' ಎಂದಿದ್ದಾರೆ. ಜೊತೆಗಿದ್ದ ಪತ್ರಕರ್ತರು ಕಳಪೆ ಕಾಮಗಾರಿಯ ಬಗ್ಗೆ ಕಿಡಿಕಾರಿದ್ದಾರೆ.

ಅಷ್ಟಕ್ಕೇ ಯಡ್ಡಿ ಮಗನ ಪಿತ್ಥ ಕೆರಳಿದೆ. ' ಯಾವ್ಳೋಳೇ ನೀನು?' ಎಂದುಬಿಟ್ಟ. ಯಡ್ಡಿಯ ಪಿ. ಗುರುಮೂರ್ತಿ ಜೊತೆಗಿದ್ದ ಪತ್ರಕರ್ತರನ್ನೂ ಲೆಕ್ಕಿಸದೆ 'ನೀನೇನು ಇಂಜನಿಯರಾ? ಮಿನಿಸ್ಟ್ರಾ?' ಎಂದ ಕೂಗಾಡಿಬಿಟ್ಟ. ಅದನ್ನು ಕೇಳಿದ ಪತ್ರಕರ್ತ ಹಳದ 'ಅಲ್ರೀ ಕಳಪೆ ಕಾಮಗಾರಿ ಬಗ್ಗೆ ಕೇಳಿದ್ರೆ, ನೀವ್ಯಾಕ್ರಿ ಸಿಟ್ಟಾಗ್ತೀರ? ನೀವೇನು ಕಂಟ್ರಾಕ್ಟರ್‌ಗಳಾ ಶಿಕಾರಿಪುರ ಧಣಿಗಳಾ?' ಎಂದಿದ್ದಾರೆ.

ಅದಕ್ಕೆ ಯಡ್ಡಿ ಮಗ ರಾಘವೇಂದ್ರ 'ಹೌದಯ ನಾವೇ ತಾಲ್ಲೂಕಿನ ಧಣಿಗಳು. ನಾನೂರು ಕೋ ರೂಪಾಯಿ ಸ್ಯಾಂಕ್ಷನ್ ಮಾಡಿಸಿಕೊಂಡು ಬಂದಿದ್ದೀ ಗೊತ್ತಾ? ನೀವು ಪತ್ರಕರ್ತರು ಅದೇನು ಬರೀತೀರೊ ಬರ‍್ಕೊಳ್ಳೀ....' ಎಂದ. ನಿಮ್ಮಪ್ಪನ ಮನೆಯಿಂದ ತಂದ ಹಾಕಿದ್ದೀಯಾ? ಇದು ಸರ್ಕಾರದ ದುಡ್ಡು ಗೊತ್ತಾ ಎಂದು ದಾರಿಹೋಕನೊಬ್ಬ ಯಡ್ಡಿ ಮಗನನ ದಬಾಯಿಸಿಬಿಟ್ಟ. ಇದಾಗಿದ್ದೇ ಶಾಂತವೀರಪ್ಪನ ಮ ರವೀಂದ್ರ ವಿಜಯಲಕ್ಷ್ಮಿಯತ್ತ ನುಗ್ಗಿದ್ದೇ 'ಯಾವ್ಳೋ ನೀನು ರ‍್ಯಾಸ್ಕಲ್! ಬೇವರ್ಸಿ ಮುಂಡೆ! ಒಂದ್‌ಸ ಮೆಟ್ಟು ತಗೊಂಡು ಹೊಡೆದರೆ ಬುದ್ಧಿ ಬರ‍್ತದೆ' ಎಂದ ತೋಳೇರಿಸಿದ್ದಾನೆ.

ಜನತಾದಳ-ಗಳಗಳ

ಒಂದು ಕಾಲದಲ್ಲಿ ಜಿಲ್ಲೆಯನ್ನಾಳಿದ ಜನತಾದಳ ಇಂದು ಗಳಗಳ ಅಳುತ್ತಿದೆ. ಇಲ್ಲಿನ ನಾಯಕರ ನಡುವೆ ವೈಯಕ್ತಿಕ ದ್ವೇಷ ಮತ್ತು ಅಧಿಕಾರದ ಆಸೆಯಿಂದಾಗಿ ಕೆಲ ವರ್ಷಗಳಿಂದ ನಡೆಯುತ್ತಾ ಬಂದಿದ್ದ ಮುಸುಕಿನ ಗುದ್ದಾಟ ಈಗ ಬೀದಿ ರಂಪಾಟವಾಗಿದೆ. ಒಂದೆಡೆ ಎರಡು ವರ್ಷಗಳಿಂದ ಜಿಲ್ಲಾ ದಳಕ್ಕೊಬ್ಬ ಅಧ್ಯಕ್ಷನಿಲ್ಲದೇ ಅತಂತ್ರವಾಗಿದ್ದರೆ, ಇನ್ನೊಂದೆಡೆ ಇದನ್ನೇ ಬಳಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವ ಪುಡಿ ಲೀಡರು ಗಳಿಗೇನೂ ಕಮ್ಮಿಯಿಲ್ಲ.



ರವಿ ದಂಡಿನ

ಗುಂಡನ ಮದುವೇಲಿ ಉಂಡೋನೆ ಜಾಣ ಎಂಬಂತೆ, ಕಾರ್ಯಾಧ್ಯಕ್ಷ ರವಿ ದಂಡಿನನ ಕಾರುಬಾರಿನ ಕೆಸರಿನಲ್ಲಿ ನಂದೆಲ್ಲಿಡ್ಲಿ ಎಂದು ಪಾರ್ಟಿಗೀಗ ಒಕ್ಕರಿಸಿರುವ ಹಾರೋ ಹಕ್ಕಿ ಜಾಯಮಾನದ ಸದಾನಂದ ಪಿಳ್ಳೆ ಎಂಬ ಸ್ವಯಂಘೋಷಿತ ಅಧ್ಯಕ್ಷ ಕಂ. ಆಲ್ ಟೈಪ್ ಸ್ಟಾಂಡರ್ಡ್ ಲೀಡರ್ ಪಾರ್ಟಿಯನ್ನು ಎರಡು ಪಾಲು ಮಾಡೋ ಪ್ಲಾನ್ ಹಾಕಿಕೊಂಡು ಮೋಜು ನೋಡುತ್ತಿದ್ದಾನೆ. ರಾಜ್ಯದಲ್ಲಿ ಅಧಿಕಾರ ನಡಿಸ್ತೀರೋ ಕುಮಾರಸ್ವಾಮಿಗಾಗಲಿ, ಸುಪ್ರೀಮೋ ನಿದ್ದೆಗೌಡರಿಗಾಗಲಿ ಗದಗಿನಲ್ಲಿ ಪಾರ್ಟಿ ಮಲಗಿರೋ ವಿಚಾರ ಗೊತ್ತಿಲ್ಲಾಂತ ಕಾಣುತ್ತೆ.

ಎರಡು ವರ್ಷದ ಹಿಂದೆ ನಿಷ್ಠುರ ರಾಜಕಾರಣಿ ಎಂದು ಕರೆಸಿಕೊಂಡಿದ್ದ ನಾಗನಗೌಡ ಹಿರೇಮನಿ ಪಾಟೀಲ ಜಿಲ್ಲಾಧ್ಯಕ್ಷನಾಗಿ ಪಕ್ಷವನ್ನು ತಕ್ಕಮಟ್ಟಿಗೆ ಬೆಳೆಸಿದ್ದರು. ಆದರೆ ಪಕ್ಷದ ದುರಾದೃಷ್ಟವೋ ಏನೋ, ಕಾರ್ಯಕ್ರಮವೊಂದಕ್ಕೆ ಸಿದ್ದರಾಮಯ್ಯನವರನ್ನು ಹುಬ್ಬಳ್ಳಿಯಿಂದ ಕರ್‌ಕೊಂಡ ಬರತೇನಿ ಅಂತಾ ಹೊರಟು ಹೋದವರು ಶಿವನಪಾದ ವನ್ನೇ ಸೇರಿಬಿಟ್ಟರು. ಅಲ್ಲಿಂದ ಇಲ್ಲಿಯವರೆಗೆ ಜೆಡಿ (ಎಸ್)ನ ಗತಿನೂ ದೇವೆಗೌಡರ ಪಾದ ಸೇರೋ ಮಟ್ಟಕ್ಕೆ ಬಂದಿದೆ. ಈ ಅವಕಾಶಕ್ಕಾಗಿಯೇ ಕಾಯುತ್ತಿದ್ದ ಮುಂಡರಗಿಯ ಬಿ. ಎಫ್. ದಂಡಿನ ಎಂಬ ಸ್ವಯಂ ಘೋಷಿತ ನಾಯಕ ತನ್ನ ಮಗ ರವಿ ದಂಡಿನನನ್ನು ಕಾರ್ಯಾಧ್ಯಕ್ಷನನ್ನಾಗಿ ಮಾಡಿ, ಅಂದಾನಯ್ಯ ಕುರ್ತಕೋಟಿ, ದಾವಲ್ ಮುಳಗುಂದರಂತವರನ್ನ ಅವನ ಸೆಕ್ಯೂರಿಟಿಗೆ ಇಟ್ಟು ಪಕ್ಷ ಸಂಘಟನೆಯ ಹೆಸರಿನಲ್ಲಿ ಫೀಲ್ಡಿಗೆ ಬಿಟ್ಟಿದ್ದಾನೆ. ಜೆಡಿ(ಎಸ್) ಗದಗ ತಾಲ್ಲೂಕು ಪಂಚಾಯತ್ ಹಾಗೂ ಮುಂಡರಗಿ ತಾಲ್ಲೂಕಿನಲ್ಲಿ ಐದು ಜನ ತಾ.ಪಂ.ಸದಸ್ಯರು ಮತ್ತು ಒಂದು ಜಿಲ್ಲಾ ಪಂಚಾಯತ್ ಸ್ಥಾನವನ್ನಿಟ್ಟು ಕೊಂಡು ಇವರೆಲ್ಲ ಕಾಂಗ್ರೆಸ್ಸಿಗೆ ನಿದ್ದೆಗೆಡಿಸಿದ್ದು ಈಗ ಒಲ್ಡ್ ಸ್ಟೋರಿ ಆಗಿದೆ. ಆದರೆ ಈಗ ಗೆದ್ದವರಲ್ಲಿ ಬಹುಪಾಲರು ದಂಡಿನನಿಗೇ ಕ್ಯಾರೇ ಎನ್ನುತ್ತಿಲ್ಲ, ಇವರಿಗೆಲ್ಲ ಚೆಡ್ಡಿ ಪಕ್ಷದಿಂದ ಹಾರಿಬಂದಿರುವ ಸದಾನಂದ ಪಿಳ್ಳೆ ಲೀಡರ್ ಆಗಿದ್ದಾನೆ. ಜಾತಿ ರಾಜಕಾರಣದ ಹೆಸರಿನಲ್ಲಿ ಈಗ ದಂಡಿನ ಕಟ್ಟಿದ್ದನ್ನೆಲ್ಲ ತುಂಡು ಮಾಡೋ ಕೆಲಸಕ್ಕೆ ಪಿಳ್ಳೆ ನಿಂತಿದ್ದಾನೆ. "ರವಿಗೆ ದಡಾ ಸೇರಿಸ್ತಿನಿ" ಎಂದು ಓಪನ್ನಾಗಿ ಚಾಲೆಂಜ್ ಹಾಕಿ, ಪಕ್ಷದಲ್ಲಿ ಬೆಂಕಿ ಹಚ್ಚಿ ಚಳಿ ಕಾಯಿಸಿಕೊಳ್ಳುತ್ತಿದ್ದಾನೆ. ನಿಷ್ಠಾವಂತರಾಗಿ ಎಷ್ಟೋ ವರ್ಷಗಳಿಂದ ದಳ, ದಳ ಎನ್ನುತ್ತಾ ಬಂದಿರುವ ಕಾರ್ಯಕರ್ತರು "ಗೌಡರು ಎಂದು ಬರ್ತರೋ, ನಮ್ಮದು ಒಂದ ಪಾರ್ಟಿ ಅಂತಾ ಯಾವಾಗ ಆಗುತ್ತೋ" ಎಂದು ನಿಟ್ಟುಸಿರು ಬಿಡುತ್ತಿದ್ದಾರೆ.


ಗದಗ

ಅಧಿಪತ್ಯಕ್ಕಾಗಿ ಗುದ್ದಾಟ



ಸದಾನಂದ ಪಿಳ್ಳೆ

ಈ ಹಿಂದೆ ಗದಗ ಶಹರ ಅಧ್ಯಕ್ಷ ಸ್ಥಾನದಲ್ಲಿದ್ದ ಎಂ. ಇಸ್ಮಾಯಿಲ್‌ರವರು ಕಾರಣವನ್ನೂ ಕೊಡದೆ ಪಕ್ಷ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ 'ಇವರ ಸಹವಾಸನೇ ಬೇಡ' ಎಂಬಂತೆ ದೂರಸರಿದರು. ಆಗ ತಾಲ್ಲೂಕು ಅಧ್ಯಕ್ಷ ಸ್ಥಾನದಲ್ಲಿದ್ದ ಎಂ. ಎಸ್. ಪರ್ವತಗೌಡರ್ ಎಂಬ ಪಾರ್ಟ್ ಟೈಮ್ ರಾಜಕಾರಣಿ, ರಾಜಕೀಯದ ಎಲ್‌ಕೆಜಿಗೂ ಅಡ್ಮಿಷನ್ ಇಲ್ಲದ ಶರಣಪ್ಪ ಬೆಟಗೇರಿ ಎಂಬ ಅನಾಮಿಕನನ್ನು ಶಹರ ಅಧ್ಯಕ್ಷನನ್ನಾಗಿ ಮಾಡಿದ್ದ. ಈತ ಕೆಲವೇ ದಿನಗಳಲ್ಲಿ ಶರಣಪ್ಪ ಪರ್ವತಗೌಡನಿಗೇ ಕೈಕೊಟ್ಟು "ಸಿದ್ದುಗೆ ಜೈ" ಎಂದು ಅಹಿಂದ ಸೇರಿದ. ಶರಣಪ್ಪ ಖಾಲಿ ಬಿಟ್ಟು ಹೋದ ಗದಗ ಶಹರದ ಅಧ್ಯಕ್ಷ ಸ್ಥಾನ ಮೊನ್ನಿನವರೆಗೂ ಭರ್ತಿಯಾಗಿರಲಿಲ್ಲ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಎದುರಾಗುವ ವಾಸನೆ ಅರಿತ ಕಾರ್ಯಾಧ್ಯಕ್ಷ ರವಿ ದಂಡಿನ ಗೋವಿಂದೆಗೌಡ ಎಂಬ ಗತ್ತಿನ ಮನುಷ್ಯನನ್ನ ಅಧ್ಯಕ್ಷನನ್ನಾಗಿ ಈಗ ತಂದು ಕೂರಿಸಿದ್ದಾನೆ. ಈ ಗೋವಿಂದೇಗೌಡ ಹಿಂದೆ ಬಂಗಾರಪ್ಪನ ಸೈಕಲ್ ಏರಿ, ಅದನ್ನೇ ಪಂಚರ್ ಮಾಡಿ, ಅಲ್ಲಿಂದ ಹೊರದಬ್ಬಿಸಿಕೊಂಡು ಬಂದ ಮಹಾಹುಂಬ. ಇಂತವನಲ್ಲಿ ಅದೇನು ಕಂಡು ಅಧ್ಯಕ್ಷ ಸ್ಥಾನಕ್ಕೆ ತಂದು ಕೂಡಿಸಿದ್ದಾನೋ ಆ ದೇವೇಗೌಡನೇ ಬಲ್ಲ.



ಗೋವಿಂದೇಗೌಡ

ಇನ್ನು ಪಾರ್ಟಿ ಎರಡು ಮಾಡಲು ಹೊರಟಿರುವ ಸದಾನಂದ ಪಿಳ್ಳೆ ಅಂಡ್ ಗ್ಯಾಂಗ್‌ನ ವರಸೆಯನ್ನು ಕೇಳಬೇಕೆ? ಇದನ್ನೇ ನೆಪವಾಗಿಟ್ಟುಕೊಂಡು ಅದನ್ನೊಂದು ದೊಡ್ಡ ಇಷ್ಯೂ ಮಾಡಿ, ಮೀಡಿಯಾ ಮುಂದೆ ಪೋಜ್ ಕೊಡುತ್ತಿದ್ದಾರೆ. ಆದರೆ ಲಿಂಗಾಯತ ಅಧಿಪತ್ಯ ಸಾಧಿಸುವ ಜಾತಿ ರಾಜಕಾರಣದ ಹುಚ್ಚು ಕನಸು ಹೊತ್ತಿರುವ ಎಸ್. ಟಿ. ಮೇಲ್ಗಿರಿ, ಮಾಜಿ ಎಮ್ಮೆಲ್ಲೆ ಸಿ. ಎಸ್. ಮುತ್ತಿನಪೆಂಡಿ ಮಠ, ಎಂ. ಎಸ್. ಪರ್ವತಗೌಡರ ಸ್ಥಳೀಯ ಸಂಸ್ಥೆ ಚುನಾವಣೆಯ ಬಿ ಫಾರ್ಮ್ ಹಾಗೂ ರೊಕ್ಕದ ಥೈಲಿ ದಂಡಿನ ಪಾಲಾಯಿತೆಂದು ಬಾಯಿ ಬಾಯಿಬಡಕೊತ್ತಿದ್ದಾರೆ. ಹಾಗೆ ನೋಡಿದರೆ, ಗದಗ ಜಿಲ್ಲೆಯನ್ನಾಳಿದ ದಿವಂಗತ ಕೆ. ಎಚ್. ಪಾಟೀಲರ ಕಾಲದಿಂದಲೂ ರಾಜಕಾರಣದಲ್ಲಿ ಲಿಂಗಾಯತ ಮುಖಂಡರೆನಿಸಿಕೊಂಡವರೆಲ್ಲ ಅಸ್ಪೃಶ್ಯರಾಗಿ ಹೊರಗುಳಿದಿದ್ದು ವಾಸ್ತವವೆ. ಆದರೆ, ಕೇವಲ ಜಾತಿ ರಾಜಕಾರಣಕ್ಕಾಗಿ ಪಿಳ್ಳೆಯ ಪಟಾಲಂ ತಾನಿರುವ ಪಕ್ಷದ ಬೆಳವಣಿಗೆಗೆ ಸಂಚಕಾರ ಒಡ್ಡುವ ರೀತಿಯಲ್ಲಿ ಜಾತಿ ಆಧಾರಿತ ಗುಂಪು ಕಟ್ಟಿಕೊಂಡು ನಿರ್ಲಜ್ಜತನಕ್ಕಿಳಿದಿರುವುದು ಅಸಹ್ಯ ಹುಟ್ಟಿಸುವಂತಿದೆ.

ಗುಳುಂ ಗುಳುಂ ಗುಳ್ಳೆನರಿ ಪಿಳ್ಳೆ

ಹೇಳೋಕೂ ಹೆಸರಿಲ್ಲದಂತಿದ್ದ ಸದಾನಂದ ಪಿಳ್ಳೆ ಬಿ.ಜೆ.ಪಿ. ಎಂಬ ಕೋಮುವಾದಿ ಪಕ್ಷದಲ್ಲಿ ತನ್ನ ಗುಳ್ಳೆನರಿ ಬುದ್ಧಿ ಉಪಯೋಗಿಸಿ ಅಲ್ಲಿಂದ ಓಡಿಸಿಕೊಂಡು ಬಂದಿರುವ ಅರ್ಧಚೆಡ್ಡಿ, ನಿಜ ಹೇಳಬೇಕೆಂದರೆ ಈತ ಒಂಥರಾ ಅಬ್ಬೆಪಾರಿ ಕುಲದವನು. ಅನ್ನಪೂರ್ಣಾ ಮಹಿಳಾ ವಿವಿಧೋದ್ದೇಶಗಳ ಸಹಕಾರಿ ಸಂಘದ ಹೆಸರಿನಲ್ಲಿ ಗದಗ ಮತ್ತು ಹಾವೇರಿ ಜಿಲ್ಲೆಯ ಎಲ್ಲ ಸರಕಾರಿ ವಿದ್ಯಾರ್ಥಿ ವಸತಿ ನಿಲಯಗಳಿಗೆ ಕಳಪೆ ಗುಣಮಟ್ಟದ ವಸ್ತುಗಳನ್ನು ಸರಬರಾಜು ಮಾಡಿ, ವಿದ್ಯಾರ್ಥಿಗಳ ಹೊಟ್ಟೆ ಕೆಡಿಸಿ ತನ್ನ ಹೊಟ್ಟೆ ಭರ್ತಿ ಮಾಡಿಕೊಳ್ಳುತ್ತಿರುವ ಹೊಟ್ಟೆಬಾಕ. ಇದಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಬುಟ್ಟಿಗೆ ಹಾಕಿಕೊಂಡು, ಖೊಟ್ಟಿ ಬಿಲ್ ಕೊಟ್ಟು ಗುಳುಂ ಗುಳುಂ ಮಾಡುವ ಗುಳ್ಳೆನರಿ.

ಇತ್ತೀಚೆಗಷ್ಟೆ ಮುಳಗುಂದದ ವಸತಿ ನಿಲಯದ ಬಡವಿದ್ಯಾರ್ಥಿಗಳಿಗೆ ನಾಯಿನೂ ಮುಟ್ಟದಂತಹ ಆಹಾರವನ್ನು ಒದಗಿಸಿದ ಪಿಳ್ಳೆ ನೂರಾರು ಮಕ್ಕಳ ಪ್ರಾಣಕ್ಕೂ ಸಂಚಕಾರ ತಂದಿದ್ದ. ಇದರಿಂದ ಕೋಪಗೊಂಡ ಗ್ರಾಮದ ಜನ ಅವನಿಗೆ ಚಪ್ಪಲಿ ಪೂಜೆ ಮಾಡೋದಕ್ಕೆ ರೆಡಿಯಾಗುತ್ತಿದ್ದಾರೆ ಎಂದು ತಿಳಿದಿದ್ದೇ ತಡ ತಪ್ಪಾಯಿತೆಂದು ಗ್ರಾಮಸ್ಥರ ಪಾದಕ್ಕೆ ಅಡ್ಡಬಿದ್ದಿದ್ದಾನೆ. ಕಂಡದ್ದೆಲ್ಲ ನಂದೇ ಎನ್ನುವ ಪಿಳ್ಳೆ ಹಿಂದೊಮ್ಮೆ ಜನತಾ ದಳದ ಜಿಲ್ಲಾಧ್ಯಕ್ಷ ನಾನೇ ಎಂದು ಘೋಷಿಸಿಕೊಂಡು ಹಲವು ಹಿರಿಯರಿಂದ ಕ್ಯಾಕರಿಸಿ ಉಗಿಸಿಕೊಂಡಿದ್ದ. ಆಮೇಲೆ ಒರೆಸಿಕೊಳ್ಳುತ್ತಾ "ನನಗ್ಯಾವ ಹುದ್ದೇನೂ ಬೇಡ" ಅಂದಿದ್ದ. ಒಟ್ಟನಲ್ಲಿ ಇಂಥ ಮಹಾನುಭಾವರನ್ನು ನೆಚ್ಚಿಕೊಂಡಿರುವ ಗದಗ ಜಿಲ್ಲೆಯ ಜೆಡಿಎಸ್ ಕತ್ತಲಿನಿಂದ ಕಗ್ಗತ್ತಲಿಗೆ ಸಾಗುತ್ತಿರುವುದಂತೂ ಸ್ಪಷ್ಟ.


ಇಷ್ಟು ಕೇಳಿದ ಯಾವ ಹೆಣ್ಣುಮಗಳು ತಾನೇ ಸುಮ್ಮನಿದ್ದಾಳು? ಎಮ್ಮೆಲ್ಸಿ ಶಾಂತವೀರಪ್ಪನ ಮಗನ ಕಪಾಳಕ್ಕೊಂದು ತಪರಾಕಿ ಕೊಟ್ಟಿದ್ದಾಳೆ.
ಇನ್ನು ಯಡ್ಡಿ ಮಗ ಕೇಳಬೇಕೆ? ಇಷ್ಟಾಗಿದ್ದೇ ವಿಜಯಲಕ್ಷ್ಮಿಯ ಕುತ್ತಿಗೆಗೆ ಬಲವಾಗಿ ತಿವಿದಿದ್ದಾನೆ. ತಿವಿದ ರಭಸಕ್ಕೆ ನೆಲಕ್ಕೆ ಬಿದ್ದ ವಿಜಯಲಕ್ಷ್ಮಿಯನ್ನು ಜೊತೆಗಿದ್ದ ಪತ್ರಕರ್ತರೇ ರಕ್ಷಿಸಿದ್ದಾರೆ.

ಯಾವಾಗ ವಿಜಯಲಕ್ಷ್ಮಿ ನೆಲಕ್ಕೆ ಕುಸಿದಳೋ ಗೆಲುವಿನ ಗತ್ತಿನಲ್ಲಿ ಯಡ್ಡಿ ಮಗ ರಾಘವೇಂದ್ರ, 'ಹಿಂಗೆ ಹಾರಾಡ್ತಾ ಇದ್ರೆ ಒಂದಿನ ನಿನ್ನ ಕೈಕಾಲು ಮುರಿಸ್ತೀನಿ. ನಿನ್ನ ಕೈಲಿ ಏನಾಗುತ್ತೋ ಮಾಡಿಕೋ....!' ಎಂದವನೇ ತನ್ನ ಪಟಾಲಂ ಸಮೇತ ಜಾಗ ಖಾಲಿ ಮಾಡಿದ್ದಾನೆ.



ಶಿಕಾರಿಪುರದ ಠಾಣೆಯೆದುರು ಪ್ರತಿಭಟನೆ

ಇದು ಜುಲೈ 5ರ ಅಪರಾಹ್ನ ಶಿಕಾರಿಪುರದ ಚನ್ನಕೇಶವ ನಗರದ ಚನ್ನಕೇಶವ ದೇವಸ್ಥಾನದ ಎದುರು ನಡೆದ ಘಟನೆ. ಹೀಗೆ ಯಡ್ಡಿಯ ಮಗ ವಿಜಯಲಕ್ಷ್ಮಿಯನ್ನು ಹಾಕಿ ಬಡಿಯುತ್ತಿದ್ದರೆ ಆತನ ಜೊತೆಗಿದ್ದ ಎಮ್ಮೇ ನಾಗರಾಜ, ಯಡ್ಡಿಯ ಪಿ.ಎ. ಗುರುಮೂರ್ತಿ, ಎಮ್ಮೆಲ್ಸಿ ಶಾಂತವೀರನ ಮಗ ರವೀಂದ್ರ ಮತ್ತವರ ರೌಡಿ ಗ್ಯಾಂಗ್ ವಿಜಯಲಕ್ಷ್ಮಿಯನ್ನು ವಾಚಾಮಗೋಚರ ಬಯ್ಯುತ್ತಲೇ ಇದೆ. ನೆರವಿಗೆ ಬಂದ ಪತ್ರಕರ್ತರನ್ನೂ ಹೀಯಾಳಿಸಿದೆ.



ಹಲ್ಲೆ ನಡೆದ ಕಳಪೆ ಕಾಮಗಾರಿಯ ಜಾಗ

ಒಬ್ಬ ಉಪಮುಖ್ಯಮಂತ್ರಿಯ ಮಗನಾಗಿ, ಎದುರಿಗಿದ್ದ ಪತ್ರಕರ್ತರನ್ನೂ ಲೆಕ್ಕಿಸದೇ ಮಹಿಳಾ ಹೋರಾಟಗಾರ್ತಿಯೊಬ್ಬಳ ಮೇಲೆ ಕೈ ಮಾಡುತ್ತಾನೆಂದರೆ ಆತನ ಧಾರ್ಷ್ಟ್ಯ ಇನ್ನೆಷ್ಟಿರಬೇಡ?

ಇಷ್ಟಾಗಿದ್ದೇ ವಿಜಯಲಕ್ಷ್ಮಿ ಶಿಕಾರಿಪುರ ಪೊಲೀಸ್ ಠಾಣೆಗೆ ಬಂದು ಯಡ್ಡಿ ಮಗನ ಮೇಲೆ ದೂರು ಕೊಟ್ಟಿದ್ದಾರೆ. ಅಲ್ಲಿದ್ದವನು ಸಬ್‌ಇನ್ಸ್‌ಪೆಕ್ಟರ್ ದೊಡ್ಡೇಗೌಡ. ಕಾನೂನುಪ್ರಕಾರ ಆತ ಎಫ್‌ಐಆರ್ ಮಾಡಬೇಕು. ಎಷ್ಟೆಂದರೂ ಉಪಮುಖ್ಯಮಂತ್ರಿಯ ಮಗ ತಾನೆ? ನೇರವಾಗಿ ರಾಘವೇಂದ್ರನಿಗೇ ಫೋನ್ ಮಾಡಿ ಠಾಣೆಗೆ ಕರೆಸಿಕೊಂಡ ದೊಡ್ಡೇಗೌಡ ಯಡ್ಡಿ ಮಗನ ರೌಡಿ ಪಡೆಗೇ ಕುರ್ಚಿ ಹಾಕಿಕೊಟ್ಟು ಕಾಫಿ ತರಿಸಿಕೊಟ್ಟುಬಿಟ್ಟ. ವಿಜಯಲಕ್ಷ್ಮಿ ಕೊಟ್ಟ ದೂರನ್ನು ಅಡಿಗಿಟ್ಟು ರಾಘವೇಂದ್ರನಿಂದ ಮತ್ತೊಂದು ಕಂಪ್ಲೇಂಟ್ ಬರೆಸಿಕೊಂಡ. ಇದರಿಂದ ರೋಸತ್ತ ವಿಜಯಲಕ್ಷ್ಮಿ ಪೊಲೀಸ್ ಅನ್ಯಾಯದ ವಿರುದ್ಧ ಪ್ರತಿಭಟಿಸಲಾರಂಭಿಸಿದ್ದಾರೆ. ಸಂಜೆಯ ಹೊತ್ತಿಗೆ ಠಾಣೆಗೆ ಬಂದ ಸರ್ಕಲ್ ಇನ್ಸ್‌ಪೆಕ್ಟರ್ ಜಗದೀಶ್ ಇದ್ದಕ್ಕಿದ್ದಂತೆ ಉಲ್ಟಾ ಹೊಡೆದು, ನೋಡಮ್ಮಾ ಬೇರೆ ಯಾರ ಮೇಲೆ ಬೇಕಾದ್ರೂ ಕಂಪ್ಲೇಂಟ್ ಕೊಡು. ಎಫ್‌ಐಆರ್ ಮಾಡ್ತೀವಿ. ಆದರೆ ರಾಘವೇಂದ್ರನ ಹೆಸರು ಮಾತ್ರ ತೆಗೆದುಬಿಡು. ನೀನೆಷ್ಟೇ ಬಾಯಿ ಬಡಕೊಂಡ್ರೂ ಡಿಸಿಎಂ ಮಗನ ಮೇಲೆ ಎಫ್‌ಐಆರ್ ಮಾಡಕ್ಕಾಗೋಲ್ಲ ಎಂದುಬಿಟ್ಟ. ಆ ಹೊತ್ತಿಗಾಗಲೇ ವಿಜಯಲಕ್ಷ್ಮಿಯ ಮೇಲೆ ಹಲ್ಲೆ ನಡೆದ ಸುದ್ದಿ ಕೇಳಿ ಪೊಲೀಸ್ ಠಾಣೆಗೆ ಬಂದ ಜನ ರಾತ್ರಿ ಹತ್ತರ ಹೊತ್ತಿಗೆಲ್ಲ ಪೊಲೀಸ್ ಠಾಣೆಯ ಎದುರೇ ಪ್ರತಿಭಟನೆ ಆರಂಭಿಸಿದ್ದರು. ಅದೇ ಹೊತ್ತಿಗೆ ಡಿವೈಎಸ್‌ಪಿ ಪಾಟೀಲ್ ಕೂಡ ಯಡ್ಡಿ ಮಗನ ವಿರುದ್ಧದ ದೂರನ್ನು ವಾಪಸ್ಸು ಪಡೆಯುವಂತೆ ವಿಜಯಲಕ್ಷ್ಮಿಗೆ ಪೂಸಿ ಹೊಡೆಯಲಾರಂಭಿಸಿದ್ದಾರೆ. ಆದರೆ ರೊಚ್ಚಿಗೆದ್ದ ಜನ ಕೇಳಬೇಕಲ್ಲ.

ಹೀಗೆ ಶುರುವಾದ ಧರಣಿ ಮರುದಿನ ಅಂದರೆ ಜುಲೈ ಐದರಂದೂ ಮುಂದುವರಿದಿದೆ. ವಿಶೇಷವೆಂದರೆ ಆವತ್ತೇ ಶಿಕಾರಿಪುರದ ಯಡ್ಡಿಯ ಮನೆಯಲ್ಲಿ ಚಂಡಿಕಾ ಯಾಗ.

ತಾನು ಮುಖ್ಯಮಂತ್ರಿಯಾಗಲೇಬೇಕೆಂದು ಕೊಳ್ಳೆಗಾಲದ ಮಾಂತ್ರಿಕನೊಬ್ಬನನ್ನು ಕರೆಸಿ ಚಂಡಿಕಾ ಯಾಗ ಶುರುಹಚ್ಚಿಕೊಂಡಿದ್ದ ಯಡ್ಡಿ ಪೊಲೀಸ್ ಠಾಣೆಯೆದುರು ನಡೆಯುತ್ತಿದ್ದ ಪ್ರತಿಭಟನೆಯನ್ನು ಶತಗತಾಯ ನಿಕಾಲಿ ಮಾಡಿ ಎಂದು ಎಸ್‌ಪಿ ಅರುಣ್‌ಚಕ್ರವರ್ತಿಗೆ ದುಂಬಾಲು ಬಿದ್ದಿದ್ದಾರೆ. ಸ್ವಭಾವತಃ ಅರುಣ್ ಚಕ್ರವರ್ತಿ ಸಭ್ಯರೆ. ಆದರೆ ಉಪಮುಖ್ಯಮಂತ್ರಿಯ ಹಿತ ಕಾಯಲೇಬೇಕಲ್ಲ! ಜುಲೈ ಐದರ ರಾತ್ರಿಯೇ ಪ್ರತಿಭಟನೆ ನಿಲ್ಲಿಸುವಂತೆ ತನ್ನ ಮೊಬೈಲ್‌ನಿಂದ ವಿಜಯಲಕ್ಷ್ಮಿಗೆ ಮನವಿ ಮಾಡಿದ್ದಾರೆ. ಯಡ್ಡಿ ಮಗನ ಮೇಲೆ ಕೇಸು ಹಾಕದೇ ಪ್ರತಿಭಟನೆ ನಿಲ್ಲಿಸಲು ಜನ ಒಪ್ಪಬೇಕಲ್ಲ! 6ನೇ ತಾರೀಖಿಗೂ ಹೋರಾಟ ನಿಂತಿಲ್ಲ, ಆದರೆ ಯಾವುದೇ ಟಿವಿ, ಪತ್ರಿಕೆಗಳು ಇದನ್ನು ಸುದ್ದಿ ಮಾಡಲೇ ಇಲ್ಲ.

ಹಾಗಂಥ ವಿಜಯಲಕ್ಷ್ಮಿ ಕೈಕಟ್ಟಿಕೂರಲಿಲ್ಲ. ಶಿಕಾರಿಪುರ ಠಾಣೆಯ ಮುಂದೆ ಪ್ರತಿಭಟಿಸುತ್ತಿದ್ದವರನ್ನು ಹಾಗೇ ಮುಂದುವರೆಸಲು ಹೇಳಿ, ತಾನು ಸದ್ದಿಲ್ಲದೇ ಬೆಂಗಳೂರಿಗೆ ಬಂದಿದ್ದಾರೆ. ಬೆಂಗಳೂರಿನ ಕೆಲ ಮಹಿಳಾ ಸಂಘಟನೆಗಳನ್ನು ಸೇರಿಸಿ ಜುಲೈ 7ರ ಬೆಳಿಗ್ಗೆ ಬನಪ್ಪ ಪಾರ್ಕಿನಲ್ಲಿ ಮತ್ತೊಂದು ಪ್ರತಿಭಟನೆ ನಡೆಸಿದ್ದಾರೆ.

ಅಲ್ಲಿಗೆ ಶಿವಮೊಗ್ಗದ ಪತ್ರಿಕೆ, ಟೀವಿಗಳು ಎಷ್ಟೇ ಮುಚ್ಚಿಟ್ಟರೂ ಯಡ್ಡಿ ಮಗನ ಅಟ್ಟಹಾಸ ಬೆಂಗಳೂರು ಮುಟ್ಟಾಗಿತ್ತು. ಇದು ಗೊತ್ತಾಗಿದ್ದೇ ಶಿಕಾರಿಪುರದ ಪೊಲೀಸರು ಎಂಥಾ ಅನಾಚಾರಕ್ಕೆ ಇಳಿದರೆಂದರೆ ಇತ್ತ ಬೆಂಗಳೂರಿನಲ್ಲಿ ವಿಜಯಲಕ್ಷ್ಮಿ ನೇತೃತ್ವದಲ್ಲಿ ಪ್ರತಿಭಟನೆ ನಡೆಯುತ್ತಿರುವಾಗಲೇ ಶಿಕಾರಿಪುರ ಪೊಲೀಸ್ ಠಾಣೆಯ ಎದುರು ಹಾಕಿದ್ದ ಶಾಮಿಯಾನಾಕ್ಕೆ ಪೊಲೀಸ್ ಪಡೆ ನುಗ್ಗಿದೆ. ಧರಣಿ ಕೂತಿದ್ದವರನ್ನು ಲಾಠಿ ಪ್ರಹಾರ ಮಾಡಿ ಓಡಿಸಿ, ಇಟ್ಟಿದ್ದ ಗಾಂಧಿ ಫೋಟೋ ಅನ್ನು ಬೀದಿಗೆಸೆದಿದ್ದಾರೆ. ಶಾಮಿಯಾನಾವನ್ನೂ ಕಿತ್ತು ಇನ್ನೆಲ್ಲಿಗೋ ಎಸೆದಿದ್ದಾರೆ. ಅದೆಷ್ಟೇ ಲಾಠಿ ಏಟು ತಿಂದರೂ ನೆಲದಲ್ಲೇ ಮಲಗಿ ಪ್ರತಿಭಟಿಸುತ್ತಿದ್ದವರನ್ನು ಎಳೆದೊಯ್ದು ಲಾಕಪ್ಪಿಗೆ ಹಾಕಿದ್ದಾರೆ. ಪ್ರತಿಭಟಿಸುತ್ತಿದ್ದವರನ್ನು ಅಟ್ಟಾಡಿಸಿ ಬಡಿದಿದ್ದಾರೆ.

ತನ್ನ ಮಗನ ಮೇಲೆ ಎಫ್‌ಐಆರ್ ದಾಖಲಾಗದ ಹಾಗೇ ಮಾಡಲು ಇಂಥ ದೌರ್ಜನ್ಯವೇ? ಹಾಗೆ ಮಾಡಿಬಿಟ್ಟರೆ ಮಗನ ಅನಾಚಾರ ಮುಚ್ಚಿಹೋಗುತ್ತದೆಯೆಂಬುದು ಯಡ್ಡಿಯ ಲೆಕ್ಕಾಚಾರವೆ? ಶಿಕಾರಿಪುರದಲ್ಲೇನೋ ಜನರ ಬಾಯಿ ಮುಚ್ಚಿಸಬಹುದು? ರಾಜಧಾನಿ ಬೆಂಗಳೂರಿನಲ್ಲಿ....?

ಈಗಾಗಲೇ ಬೆಂಗಳೂರಿನ ಮಹಿಳಾ ಸಂಘಟನೆಗಳು ವಿಜಯಲಕ್ಷ್ಮಿಯ ಬೆನ್ನಿಗೆ ನಿಂತಿವೆ. ಯಡ್ಡಿ ಮಗ ರಾಘವೇಂದ್ರನ ಜೈಲು ಯಾತ್ರೆ ಖಚಿತವಾಗುತ್ತಿದೆ. ●

ವಿಜಯ ಕರ್ನಾಟಕದ 'ತನಿಖಾ' ಪತ್ರಿಕೋದ್ಯಮ

ಕರ್ನಾಟಕದಲ್ಲೀಗ ಪಟ್ಟಿಗಳ ಭರಾಟೆ. ನಕ್ಸಲ್ ಬೆಂಬಲಿಗರ ಪಟ್ಟಿ, ಆಸ್ತಿ ವಿವರ ನೀಡದ ಶಾಸಕರ ಪಟ್ಟಿ, ಇನ್‌ಕಂಟ್ಯಾಕ್ಸ್ ದಾಳಿಗೊಳಗಾದ ಭೂಗಳ್ಳರ ಪಟ್ಟಿ, ನಕಲಿ ಸಾರಾಯಿ ಸರಬರಾಜುದಾರರ ಪಟ್ಟಿ, ಸರ್ಕಾರಕ್ಕೇ ಪಂಗನಾಮ ಹಾಕುತ್ತಿರುವ ಇಂಗ್ಲಿಷ್ ಶಾಲೆಗಳ ಪಟ್ಟಿ, ಭಜರಂಗದಳ-ಬಿಜೆಪಿ ಪಟಾಲಂ ವಿರುದ್ಧ ಇದ್ದ 74 ಕ್ರಿಮಿನಲ್ ಕೇಸುಗಳು ರದ್ದಾದ ಪಟ್ಟಿ..... ಹೀಗೆ ಹುಡುಕುತ್ತಾ ಹೊರಟರೆ ಇನ್ನೂ ಸಿಗಬಹುದು.


ಸಾರಾಂಶದಲ್ಲಿ ಹೇಳಬೇಕೆಂದರೆ ಮೇಲಿನ ಪಟ್ಟಿಯಲ್ಲಿರುವ ಪೈಕಿ ನಕ್ಸಲ್ ಬೆಂಬಲಿಗರ ಪಟ್ಟಿಯಲ್ಲಿರುವ ಜನರನ್ನು ಹೊರತುಪಡಿಸಿದರೆ ಉಳಿದೆಲ್ಲಾ ಪಟ್ಟಿಗಳ ಜನ ಈ ದೇಶದ ಸಂವಿಧಾನ, ಕಾಯ್ದೆ ಕಾನೂನುಗಳನ್ನು ಉಲ್ಲಂಘಿಸಿರುವ ಅಪರಾಧಿಗಳಾಗಿರುವುದು. ಇದಕ್ಕೆ ಪೂರಕವಾಗಿರುವ ಸಾಕ್ಷಿ ಆಧಾರಗಳು ಬಯಲಿಗೆ ಬಂದಿವೆ. ಜನರಿಗೂ ಅದು ಗೊತ್ತಿದೆ. ಆದರೆ ಫಲಿತಾಂಶದಲ್ಲಿ ಹೇಳಬೇಕೆಂದರೆ ಯಾವುದೇ ಗುರುತರವಾದ ಅಪರಾಧ ಮಾಡಿರದಿದ್ದಾಗಲೂ, ಸಾಕ್ಷಿ ಆಧಾರಗಳು ಇಲ್ಲದಿದ್ದರೂ ಈಗ ನಕ್ಸಲ್ ಬೆಂಬಲಿಗರ ಪಟ್ಟಿ ಬಗ್ಗೆ ಮಾತ್ರ ಹುಯಿಲೆಬ್ಬಿಸಲಾಗುತ್ತಿರುವುದು. ಈ ಪಟ್ಟಿ ಈಗ ರದ್ದಾಗಿದೆಯಾದರೂ ಗೃಹ ಮಂತ್ರಿ ಎಂ.ಪಿ. ಪ್ರಕಾಶ್ ಅಂಥ ನಿರ್ಧಾರ ಮಾಡುವ ಮೂಲಕ ತಪ್ಪು ಮಾಡಿದ್ದಾರೆಂಬಂತೆ ಹಿಂದೂ ಸಂಘ ಪರಿವಾರದ ಆಸಾಮಿಗಳು ಚೀರಿಕೊಳ್ಳುತ್ತಿದ್ದಾರೆ. ಅವರೊಂದಿಗೆ ಟೈಮ್ಸ್ ಆಫ್ ಇಂಡಿಯಾ ಗ್ರೂಪ್‌ನ ವಿಜಯ ಕರ್ನಾಟಕ ದಿನಪತ್ರಿಕೆ ಹಾಗೂ ಆರ್‌ಎಸ್‌ಎಸ್ ಮುಖವಾಣಿ ಹೊಸದಿಗಂತ ಪತ್ರಿಕೆಗಳು ಸೇರಿಕೊಂಡಿವೆ.

ವಿಜಯ ಕರ್ನಾಟಕ ಪತ್ರಿಕೆಯು ಕನ್ನಡ ಓದುಗರನ್ನು ಗುಗ್ಗುಗಳೆಂದು ಭಾವಿಸಿರುವಂತಿದೆ. ಮೊನ್ನೆ ಜುಲೈ 3ರ ತನ್ನ ಸಂಚಿಕೆಯ ಮುಖಪುಟದಲ್ಲೇ ಒಂದು ಫೋಟೋಸಹಿತ ಬರಹ ಪ್ರಕಟಿಸಿರುವ ವಿಕ "ನಕ್ಸಲೀಯರಿಗೂ ಕರ್ನಾಟಕದ ಜನಪರ ಹೋರಾಟಗಾರರಿಗೂ ಸಂಬಂಧ ಇದೆ ಎನ್ನಲು ಈ ಫೋಟೋನೇ ಸಾಕ್ಷಿ" ಎಂದು ಪ್ರತಿಪಾದಿಸಿದೆ. ಹಾಗೆ ನೋಡಿದರೆ ಆ ಫೋಟೊದಲ್ಲಿ ಅಂಥ ರಹಸ್ಯವಾದಂಥದ್ದೇನೂ ಇಲ್ಲಾ ಕಾನೂನುಬಾಹಿರ ವಾದದ್ದೂ ಏನೂ ಇಲ್ಲ.



ಪತ್ರಿಕೆಗಳಲ್ಲಿ ಪ್ರಕಟವಾದ ಫೋಟೋ

ಸುಮಾರು 10 ವರ್ಷಗಳ ಹಿಂದೆ 1998 ರ ನವೆಂಬರ್ 3 ರಂದು ನೆಲ್ಲೀಬೀಡುವಿನಲ್ಲಿ ನಡೆದ ರಾಷ್ಟ್ರೀಯ ಉದ್ಯಾನ ಸಂತ್ರಸ್ತರ ಹೋರಾಟ ವೇದಿಕೆಯ ಬಹಿರಂಗ ಸಭೆಯ ಫೋಟೋ ಅದು. ಒಂದು ಗಮನಾರ್ಹ ವಿಚಾರವೇನೆಂದರೆ ಆ ಫೋಟೋದಲ್ಲಿ ರೈತ ನಾಯಕರಾದ ಕಡಿದಾಳ್ ಶಾಮಣ್ಣ ಹಾಗೂ ಕಲ್ಕುಳಿ ವಿಠಲ ಹೆಗ್ಡೆ ಇದ್ದಾರೆ. ಜೊತೆಗೆ 2003 ನವೆಂಬರ್‌ನಲ್ಲಿ ರಂದು ಪೊಲೀಸರಿಂದ ಹತ್ಯೆಗೀಡಾದ ಪಾರ್ವತಿ ಇದ್ದಾಳೆ. ಹಾಗೂ ಈಗಲೂ ಭೂಗತರಾಗಿ ಮಲೆನಾಡಿನ ಆದಿವಾಸಿಗಳ ಪರವಾಗಿ ಹೋರಾಟ ಮುಂದುವರೆಸಿರುವ ನಿಲಗುಳಿ ಪದ್ಮನಾಭ, ಬಿ.ಜೆ.ಕೃಷ್ಣಮೂರ್ತಿ, ಸಿರಿಮನೆ ನಾಗರಾಜ್ ಮುಂತಾದವರೂ ಇದ್ದಾರೆ. ಜೊತೆಗೆ ಆಗ ಸಂಸೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದ ಶ್ರೀಪಾಲಯ್ಯ, ಜಿಲ್ಲಾ ಪಂಚಾಯಿತಿ ಮೆಂಬರ್ ಮೀನಾಕ್ಷಿ, ಮಲೆನಾಡು ಜಾಗೃತ ವೇದಿಕೆಯ ಕೆ.ಜೆ. ಶ್ರೀಧರ್, ಮೂಡಿಗೆರೆ ರೈತ ಸಂಘದ ದುಗ್ಗಪ್ಪ ಗೌಡರೂ ಭಾಗವಹಿಸಿದ್ದ ಸಾರ್ವಜನಿಕ ಸಭೆ ಅದು.


ಪ್ರೊ. ವಿ.ಎಸ್. ಶ್ರೀಧರ, ದೊರೆಸ್ವಾಮಿ, ಮೇಧಾಪಾಟ್ಕರ್, ಕಲ್ಕುಳಿ ವಿಠಲ ಹೆಗ್ಡೆ, ಬಿ.ಜಿ. ಕೃಷ್ಣಮೂರ್ತಿ



ಕಡಿದಾಳ್ ಶಾಮಣ್ಣ, ನಿಲುಗುಳಿ ಪದ್ಮನಾಭ, ಶಿವಸುಂದರ್, ಸಿರಿಮನೆ ನಾಗರಾಜ್, ಕೆ.ವಿ. ಸುಬ್ಬಣ್ಣ, ಡೀಡ್ ಶ್ರೀಕಾಂತ್ ಮತ್ತು ಇತರರು


ಕಲ್ಕುಳಿ ವಿಠಲ್ ಹೆಗ್ಡೆ, ಬಿ.ಜಿ.ಕೃಷ್ಣಮೂರ್ತಿ, ಶಿವಸುಂದರ್, ದೊರೆಸ್ವಾಮಿ, ರಾಮದಾಸ್, ರವಿವರ್ಮಕುಮಾರ್ ಮತ್ತು ರಾಜೇಂದ್ರ ಚೆನ್ನಿ

ಆಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಗೋವಿಂದೇಗೌಡರು 'ಸಾಕ್ಷಾತ್ ಬ್ರಹ್ಮ ಬಂದರೂ ನಿಮ್ಮನ್ನು ಇಲ್ಲಿ ಉಳಿಸಲಾರ, ನಿಮ್ಮ ಎತ್ತಂಗಡಿಯಾಗುವುದು ಖಚಿತ' ಎಂದಿದ್ದರು. ಈ ರೀತಿಯ ಅವರ ಹೇಳಿಕೆ ಬಂದನಂತರ ಆಘಾತ ಕ್ಕೊಳಗಾದ ಮಹಾಬಲಕೊಲಿ ಹಾಗೂ ದ್ಯಾವೇಗೌಡ ಎಂಬುವರು ಎತ್ತಂಗಡಿ ವಿರೋಧಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲೇ ರಾಷ್ಟ್ರೀಯ ಉದ್ಯಾನ ಸಂತ್ರಸ್ತರ ಹೋರಾಟ ಸಮಿತಿಯು 12 ದಿನಗಳ ಕಾಲ ಶೃಂಗೇರಿಯಿಂದ ಮೂಡಿಗೆರೆವರೆಗಿನ ಹಳ್ಳಿಹಳ್ಳಿಗಳಿಗೆ ಜಾಥಾ ಹೋಗಿ ಪ್ರಚಾರಾಂದೋಲನ ನಡೆಸಿತ್ತು, ಅತ್ಯಂತ ಪ್ರಜಾಸತ್ತಾತ್ಮಕವಾಗಿದ್ದ ಈ ಜನಾಂದೋಲನವೇ ವಿಜಯ ಕರ್ನಾಟಕ ಹಾಗೂ ಹೊಸ ದಿಗಂತ ಪತ್ರಿಕೆಗಳಿಗೆ ಉಗ್ರಗಾಮಿಗಳ ಸಭೆಯಂತೆ ಕಂಡರೆ ಅದು ಸತ್ಯಕ್ಕೆ ಎಸಗುವ ಅಪಚಾರವಲ್ಲವೆ?

ಅವತ್ತಿನ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದವರು ಆನಂತರ ಸಶಸ್ತ್ರ ಹೋರಾಟದ ಹಾದಿ ಆರಿಸಿಕೊಂಡು ಈಗ ನಕ್ಸಲೀಯ ಹೋರಾಟಕ್ಕೆ ಸೇರಿಕೊಂಡಿದ್ದಾರೆ. ನಕ್ಸಲರಾಗಿಯೇ ತಮ್ಮ ರಾಜಕೀಯ ಹೋರಾಟ ಶುರು ಮಾಡುವವರು ತಮ್ಮ ಗುರುತು, ಫೋಟೊ ಹಿನ್ನೆಲೆಗಳನ್ನು ಸಾಮಾನ್ಯವಾಗಿ ಬಹಿರಂಗಪಡಿಸುವುದಿಲ್ಲ, ಅವರು ತಮ್ಮ ಪ್ರಾಣರಕ್ಷಣೆಗಾಗಿ ಮಾಡಿಕೊಳ್ಳುವ ವ್ಯವಸ್ಥೆ ಅದು. ಆದರೆ ವಿಕ ಪ್ರಕಟಿಸಿರುವ ಫೋಟೊದಲ್ಲಿರುವ ಅಷ್ಟೂ ಜನ ಕಾನೂನುಬದ್ಧ, ಅಹಿಂಸಾತ್ಮಕ ಹೋರಾಟಗಳನ್ನೇ ನಂಬಿದ್ದವರು. ಹಾಗಾಗಿಯೇ ಎಲ್ಲಾ ಆಕ್ಟಿವಿಸ್ಟ್‌ಗಳಂತೆ ಭಾಷಣ ಮಾಡುತ್ತಾ, ಕರಪತ್ರ ಹಂಚುತ್ತಾ ಚಳವಳಿ ನಡೆಸಿಕೊಂಡು ಬಂದಿದ್ದೇ ಅಲ್ಲದೆ ಯಾವುದೇ ಹಿಂಜರಿಕೆ ಭೀತಿ ಇಲ್ಲದೆ ಫೋಟೋಗಳನ್ನೂ ತೆಗೆಸಿಕೊಂಡಿದ್ದಾರೆ.

ಅವತ್ತು ಹಾಗೆ ಫೋಟೋ ತೆಗೆಸಿಕೊಂಡಿದ್ದಕ್ಕೆ ತಾನೆ ಇವತ್ತು ವಿಜಯ ಕರ್ನಾಟಕ ಪ್ರಕಟಿಸಲು ಸಾಧ್ಯವಾಗಿರುವುದು. ಇಂತಹ ಇನ್ನೂ ನಾಲ್ಕಾರು ಫೋಟೋಗಳನ್ನು ಇಲ್ಲಿ ಲಂಕೇಶ್ ಪ್ರಕಟಿಸಿದೆ. ಅವುಗಳಲ್ಲಿ ಕಡಿದಾಳ್ ಶಾಮಣ್ಣ, ರಾಜೇಂದ್ರ ಚೆನ್ನಿ, ವಿಠಲ ಹೆಗ್ಡೆಯವರಲ್ಲದೆ ನೀನಾಸಂನ ಕೆ.ವಿ.ಸುಬ್ಬಣ್ಣ ಇದ್ದಾರೆ. ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಹಾಗೂ ವಕೀಲ ರವಿವರ್ಮಕುಮಾರ್ ಇದ್ದಾರೆ. ಕೊಡಗಿನ ಎನ್‌ಜಿಓ ಡೀಡ್‌ನ ಸುರೇಂದ್ರ ಇದ್ದಾರೆ. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಗಾಂಧಿವಾದಿ ಮತ್ತು ಈಗಿನ ಜನದ್ರೋಹಿ ಸರ್ಕಾರಗಳ ವಿರುದ್ಧ ಹೋರಾಡುತ್ತಲೇ ಇರುವ ಎಚ್.ಎಸ್. ದೊರೆಸ್ವಾಮಿ ಸಹ ಸಿಗುತ್ತಾರೆ. ಇದರರ್ಥ ಇವರೆಲ್ಲಾ ಮಾವೋವಾದಿಗಳ ಸಶಸ್ತ್ರ ಹೋರಾಟದ ಹಾದಿಯ ಸಮರ್ಥಕರೆಂದೇನಲ್ಲ.

ಇನ್ನೂ ಮಿಗಿಲಾಗಿ ಅವತ್ತು ಅಹಿಂಸಾತ್ಮಕ ಪ್ರತಿಭಟನೆ ನಡೆಸಿ ಈಗ ಯಾರಾದರೂ ಬಂದೂಕು ಕೈಗೆತ್ತಿಕೊಂಡಿದ್ದರೆ ಅದಕ್ಕೆ ಇವರ್‍ಯಾರೂ ಹೊಣೆಗಾರರಾಗುವುದೂ ಇಲ್ಲ. ಒಟ್ಟಾರೆಯಾಗಿ ಹೇಳಬೇಕೆಂದರೆ ಈ ಬೆಳವಣಿಗೆಗಳಿಗೆ ಸರ್ಕಾರ ಹಾಗೂ ಪೊಲೀಸರೇ ಹೊಣೆಯಾಗುತ್ತಾರಾಗಲೀ ಬೇರೆ ಪ್ರಗತಿಪರ ಜನ ಹಾಗೂ ಸಂಘಟನೆಗಳು ಹೊಣೆಯಲ್ಲ, ಏಕೆಂದರೆ ಕರ್ನಾಟಕದಲ್ಲಿ ಅದರಲ್ಲೂ ಮಲೆನಾಡಿನಲ್ಲಿ ನಕ್ಸಲೀಯ ಚಳವಳಿ ಪ್ರಾರಂಭವಾಗಿದ್ದು ನ್ಯಾಷನಲ್ ಪಾರ್ಕ್ ಹೆಸರಿನಲ್ಲಿ ಸರ್ಕಾರವು ಆದಿವಾಸಿ ಗಿರಿಜನರನ್ನು ಎತ್ತಂಗಡಿ ಮಾಡಲು ಹೊರಟಾಗ. ಆದರೆ ವಿಪರ್ಯಾಸದ ಸಂಗತಿ ಏನೆಂದರೆ ಈ ಕುದುರೆಮುಖ ನ್ಯಾಷನಲ್ ಪಾರ್ಕ್ ಯಾರಿಗೆ ಬೇಕು? ಯಾಕೆ ಬೇಕೆಂಬುದನ್ನು ಸರ್ಕಾರ ಯಾರಿಗೂ ಮನವರಿಕೆ ಮಾಡಿ ಕೊಡಲಿಲ್ಲ, ಅಷ್ಟೇ ಅಲ್ಲ, ಯಾವ ಗಾಂಧೀವಾದಿಗಳು, ಲೋಹಿಯಾ ವಾದಿಗಳು, ಪ್ರಜಾತಂತ್ರ ಪ್ರೇಮಿ, ಬುದ್ಧಿಜೀವಿಗಳೂ ಆದಿವಾಸಿಗಳನ್ನು ಅತಂತ್ರ ಪರಿಸ್ಥಿತಿಗೆ ಯಾಕೆ ತಳ್ಳುತ್ತಿದ್ದೀರೆಂದು ಸರ್ಕಾರವನ್ನು ಕೇಳಲಿಲ್ಲ, ಈಗಲೂ ಕೇಳುತ್ತಿಲ್ಲ. ವಾಸ್ತವಸತ್ಯ ಹೀಗಿರುವಾಗ ತಮ್ಮನ್ನು ಒದ್ದು ಕಾಡಿನಿಂದ ಆಚೆ ತಳ್ಳಲು ಸಿದ್ಧವಿರುವ ಸರ್ಕಾರವನ್ನು ಆದಿವಾಸಿಗಳಾದರೂ ಹೇಗೆ ನಂಬುತ್ತಾರೆ?

ಇವತ್ತು ಜನರ ಎತ್ತಂಗಡಿ ಎಂಬುದು ಕೇವಲ ಕುದುರೆಮುಖ ನ್ಯಾಷನಲ್ ಪಾರ್ಕಿಗೆ ಮಾತ್ರ ಸೀಮಿತವಾದ ಸಂಗತಿಯಲ್ಲ, ನಕ್ಸಲೈಟರಿದ್ದಾರೆಂಬ ಮಾತ್ರಕ್ಕೇ ಅದೊಂದೇ ವಿಚಾರವನ್ನು ಮಾತಾಡುತ್ತಾ ಇನ್ನಿತರ ಎತ್ತಂಗಡಿಗಳನ್ನು ನಿರ್ಲಕ್ಷಿಸುವಂತೆಯೂ ಇಲ್ಲ, ಮೊನ್ನಿನ ಐಟಿ ದಾಳಿಯಲ್ಲಿ ಸಿಕ್ಕಿಬಿದ್ದ ಭೂಗಳ್ಳರಾದ ರೆಡ್ಡಿ ವೀರಣ್ಣ ಕುಪೇಂದ್ರರೆಡ್ಡಿ, ಗೊಟ್ಟಿಗೆರೆ ಪೊರ್ಕಿ ಮಂಜ ಮುಂತಾದವರೆಲ್ಲಾ ಮುಗ್ಧ ಸಣ್ಣ ರೈತರ ಜಮೀನುಗಳನ್ನು KIADB ಮೂಲಕ ನೋಟಿಫೈ ಮಾಡಿಸಿ ತಮ್ಮ ವಶಕ್ಕೆ ತೆಗೆದುಕೊಂಡು ಕೋಟ್ಯಂತರ ರೂಪಾಯಿ ಸಂಪತ್ತು ಗಳಿಸಿದ್ದಾರೆ. ನಾಳೆ ಇನ್ನೂ ಬರಲಿರುವ ವಿಶೇಷಆರ್ಥಿಕ ವಲಯ (SEZ)ಗಳಿಗೆ ತಮ್ಮ ಭೂಮಿ ಬಿಟ್ಟುಕೊಡುವುದಿಲ್ಲವೆಂದು ರೈತರು ಹೋರಾಟಕ್ಕಿಳಿದರೆ, ಸಭೆ ನಡೆಸಿದರೆ ಅದೂ ನಕ್ಸಲ್ ಬೆಂಬಲಿಗರ ಸಭೆ ಎಂದು ಬರೆದುಬಿಟ್ಟರೆ ವಿಜಯ ಕರ್ನಾಟಕದ ಮರ್ಯಾದೆ ಉಳಿಯುತ್ತದಾ.

ಟೈಮ್ಸ್ ಆಫ್ ಇಂಡಿಯಾದ ಇಲ್ಲಿನ ಉಸ್ತುವಾರಿ ನೋಡಿಕೊಳ್ಳುತ್ತಿರುವ ಚಿನ್ನನ್ ದಾಸ್‌ರವರು ಕರ್ನಾಟಕದ ಜನತೆಗೆ ಉತ್ತರ ಕೊಡಲಿ.

-ಬಿಳಿದಾಳೆ ಈಶ

ಬಿಡಿ ಚಿತ್ರಗಳು

ರಾಜೇಶ್ವರಿ ಬರೆಯುತ್ತಾರೆ....

ಕಳೆದ ವಾರ ನಾನು, ಗೌರಿ, ಪ್ರೊ. ಶ್ರೀಧರ್, ಪ್ರೊ. ಶಿವರಾಮಯ್ಯ, ಯುವರಾಜ್ ಎಲ್ಲರೂ ಮೂಡಿಗೆರೆಗೆ ಹೋಗಿ ಬಂದೆವು. ಚಿಕ್ಕಮಗಳೂರಿನ ಪ್ರತಿಭಟನಾ ರ್‍ಯಾಲಿಯಲ್ಲಿ ಭಾಗವಹಿಸಿ ನಾವೆಲ್ಲಾ ಮೂಡಿಗೆರೆ ತಲುಪಿದಾಗ ಆಗಲೇ ಸಂಜೆ. ತೇಜಸ್ವಿ ನೆನೆದುಕೊಂಡು ಅವರ ಮಡದಿ ರಾಜೇಶ್ವರಿ ಯವರೊಂದಿಗೆ ಮಾತಾಡುತ್ತಾ "ನೀವು ತೇಜಸ್ವಿ ಯವರನ್ನು ಮೊದಲು ನೋಡಿದ್ದು ಯಾವಾಗ? ಸ್ನೇಹ ಹೇಗೆ ಬೆಳೆಯಿತು?" ಎಂಬಲ್ಲಿಂದ ಶುರು ಮಾಡಿ 'ಚಿತ್ರಕೂಟ' (ಜನ್ನಾಪುರದ ತೋಟ)ದಲ್ಲಿ ಇದ್ದಿದ್ದು, 1960-70 ರ ದಶಕದ ರೈತಾಪಿ ಜೀವನದ ಎಲ್ಲಾ ಮಾತನ್ನು ರಾಜೇಶ್ವರಿಯವರಿಂದ ಹೊರಡಿಸಿ ದೆವು. ಅವರ ನೆನಪುಗಳು ಅದೆಷ್ಟು ಚೆಂದ ಹಾಗೂ ಇನ್ನೂ ತಾಜಾ ಆಗಿವೆಯೆಂದರೆ ರಾಜೇಶ್ವರಿಯವರು ಹಲವು ಬಾರಿ ನಾಚಿಕೊಂಡರು, ಉಲ್ಲಾಸದಿಂದ ನಕ್ಕು ನಮ್ಮೆಲ್ಲರ ಮನಸ್ಸು, ಹೃದಯತುಂಬಿ ಬರುವಂತೆ ಚಿತ್ರಣ ಕೊಟ್ಟರು. ಕೊನೆಗೆ ಹೊರಡುವಾಗ ನಾವು "ನಿಮ್ಮ ನೆನಪುಗಳನ್ನು ಬರೆಯಿರಿ, ಅದೊಂದು ಮಹತ್ವದ ದಾಖಲೆಯಾಗುತ್ತೆ" ಎಂದಾಗ, ಅವರ ಮನಸ್ಸಿನಲ್ಲಿ ಈಗಾಗಲೇ ಆ ವಿಚಾರ ಇತ್ತೆಂದು ಕಾಣುತ್ತದೆ, ಸ್ವಲ್ಪ ಹಿಂಜರಿಯುತ್ತಲೇ "ಬರೆಯೋಕೆ ಶುರು ಮಾಡಿದೇನೆ, ಹೇಗಾಗುತ್ತೊ ನೋಡಬೇಕು" ಅಂದರು.



ಅಂದು ರಾಜೇಶ್ವರಿಯವರು ನೆನಪಿಸಿಕೊಂಡ ಒಂದು ವಿಚಾರ ಹೇಳಬೇಕೆಂದರೆ.... ಅವರು 1958 ರಲ್ಲಿ ಫಿಲಾಸಫಿಯಲ್ಲಿ ಆನರ್ಸ್ ಓದಲು ಮೈಸೂರಿಗೆ ಹೋದಾಗ ಕ್ಯಾಂಪಸ್ ತುಂಬೆಲ್ಲಾ ತೇಜಸ್ವಿ ಬಗ್ಗೆಯೇ ಮಾತು. ಎತ್ತರಕ್ಕೆ ದಷ್ಟಪುಷ್ಟವಾಗಿ ಧೀರೋದಾತ್ತವಾಗಿ ಓಡಾಡಿಕೊಂಡಿರುತ್ತಿದ್ದ ತೇಜಸ್ವಿ ಬಗ್ಗೆ ಹುಡುಗಿಯರಿಗೂ ಕುತೂಹಲ. ಒಮ್ಮೆ ರಾಜೇಶ್ವರಿಯವರು ಲೇಡಿಸ್ ರೂಂನಲ್ಲಿ ಕುಳಿತಿದ್ದಾಗ ಅಲ್ಲಿದ್ದ ಅಷ್ಟೂ ಹುಡುಗಿಯರು ದಢದಢನೆ ಓಡಿ ಕಿಟಕಿಯಲ್ಲಿ ಇಣುಕಿಣುಕಿ ನೋಡತೊಡಗಿದರಂತೆ. ಇವರು 'ಏನದು' ಎಂದು ಕೇಳಿದಾಗ 'ತೇಜಸ್ವಿ ಈಗತಾನೆ ಈ ಕಡೆ ಹೋದರು' ಅಂತಾ ಕಣ್ಣರಳಿಸಿಕೊಂಡು ಖುಷ್‌ಖುಷಿಯಾಗಿ ಹೇಳಿದರಂತೆ.

"ನಾನು ಬೆಂಗಳೂರಿನಿಂದ ಹೋಗಿದ್ದವಳು. ಯಾರೋ ತೇಜಸ್ವಿ ಅಂತೆ, ಅವರ್‍ನ ಕಿಟಕಿಲಿ ನೋಡೋಕೆ ನಾನ್ಯಾಕೆ ಎದ್ದೋಗಲಿ. ಅಂತಾ ಅವತ್ತು ಹಾಗೇ ಕೂತಿದ್ದೆ" ಅಂದ ರಾಜೇಶ್ವರಿಯವರ ಮಾತಲ್ಲಿ ಹಿಗ್ಗು ತಂತಾನೇ ಧ್ವನಿಸುತ್ತಿತ್ತು, ಅವತ್ತು ಹಾಗೆ ಕೂತ ಜಾಗ ಬಿಟ್ಟು ಕದಲದೆ ಇದ್ದ ರಾಜೇಶ್ವರಿಯವರಿಗೆ ಆನಂತರ ಅನ್ನಿಸಿದ್ದೇನೆಂದರೆ "ಅವರು ನಡೆಯುತ್ತಾ ಬರುತ್ತಿದ್ದರೆ ಇಡೀ ವಾತಾವರಣವೇ "ತೇಜಸ್ವಿ ತೇಜಸ್ವಿ" ಎಂದು ಗುರ್ಯ್‌ಗುಡುತ್ತಿರುವಂತೆ ಭಾಸವಾಗುತ್ತಿತ್ತು, ಎಲ್ಲಿ ನೋಡಿದರೂ ಅವರೇ ಕಾಣಿಸುತ್ತಿದ್ದರು." ಇದನ್ನು ಕೇಳಿ ಗೌರಿ "ಅದಕ್ಕೆ ಲವ್ ಅಂತಾರೆ" ಎಂದಾಗ ರಾಜೇಶ್ವರಿಯವರು ನಕ್ಕರು. ಇಂತಹ ವಿಷಯಗಳೂ ಸೇರಿದಂತೆ ಅವರು ಆಮೇಲೆ ತೇಜಸ್ವಿ ಗೆಳೆತನ ಗಳಿಸಿದ್ದು ಹೇಗೆ ಎಂಬುದನ್ನೂ ಸೇರಿಸಿ ಇತ್ತೀಚಿನವರೆಗಿನ ವಿಚಾರಗಳನ್ನೆಲ್ಲಾ ಅವರು ಬರೆಯಲಿದ್ದಾರೆ.

ಅಂದಹಾಗೆ ಮೊನ್ನೆ ನಿರ್ಮಲರವರು ರಾಮದಾಸ್ ಬಗ್ಗೆ ಬರೆಯುತ್ತಾ ತಮ್ಮ ಮದುವೆ ವಿಚಾರ ಹೇಳಿದ್ದಾರೆ.

"ನಾನ್ ತುಂಬಾ ಕೋಪಿಷ್ಠ. ನನ್ ಮದುವೆ ಆಗ್ತೀರೇನ್ರಿ" ಅಂತಾ ಪ್ರಪೋಸ್ ಮಾಡಿದ್ದರಂತೆ ರಾಮದಾಸ್!

ಪ್ರೇಮ ನಿವೇದನೆಗೆ ಈ ಜಗತ್ತಿನಲ್ಲಿ ಅದಿನ್ನೆಷ್ಟು ವಿಧಾನಗಳಿವೆಯೋ?

-ಪಾರ್ವತೀಶ

ಎಲ್ಲಿಯವರೆಗೂ ಮಾನವನಲ್ಲಿ ವೈವಿಧ್ಯತೆ ಇರುತ್ತದೆಯೋ ಅಲ್ಲಿಯವರೆಗೂ ಪ್ರಜಾಪ್ರಭುತ್ವದಲ್ಲಿ ಹಲವಾರು ಅಭಿಪ್ರಾಯಗಳಿಗೆ ಆಸ್ಪದ ಇರಬೇಕು - ಯೂಜೀನ್ ಮ್ಯಾಕಾರ್ಥಿ

ಭಜರಂಗಿ ಕುಲಾಲ್‌ನ ಕಾಮಲೀಲೆ

ಮಂಗಳೂರು


ಮಹಿಳೆಯರನ್ನು ಮಾತೆಯರಂತೆ, ದೇವರಂತೆ ಕಾಣುವ ಭರತಖಂಡದ ಉನ್ನತ ಸಂಸ್ಕೃತಿಯ ರಕ್ಷಣೆಗಾಗಿ ಗುತ್ತಿಗೆ ಹಿಡಿದುಕೊಂಡವರಂತೆ ಹಣತೊಟ್ಟು, ಚೆಡ್ಡಿ ತೊಟ್ಟು ಹಗಲಿರುಳೂ ಹಾರಾಟ ನಡೆಸುತ್ತಿರುವ ಭಜರಂಗಿ ನಾಯಕರು ಆ ಕೆಲಸವನ್ನು ಎಷ್ಟು ಚೆನ್ನಾಗಿ ಮಾಡುತ್ತಿದ್ದಾರೆಂಬುದಕ್ಕೆ ಕರಾವಳಿಯ ಒಂದು ಘಟನೆಯೇ ಜ್ವಲಂತ ನಿದರ್ಶನವಾಗಿ ನಿಂತಿದೆ. ಕೇವಲ ಲಾಠಿಬೀಸುವುದರಲ್ಲಿ ಮಾತ್ರವಲ್ಲ, ಹುಡುಗಿಯರಿಗಾಗಿ ಬಲೆ ಬೀಸುವುದರಲ್ಲೂ ಅವರು ಎಷ್ಟೊಂದು ನಿಷ್ಣಾತರು ಎಂಬುದನ್ನು ಈ ಘಟನೆ ಎತ್ತಿತೋರಿಸುತ್ತದೆ.

ಬಡತನದ ಬೇಗೆಯಿಂದ ಬೇಯುತ್ತಿರುವ ದೇಶದ ಹಲವಾರು ಕುಟುಂಬಗಳ ಯುವಜನತೆ ಬದುಕಿಗೊಂದು ಆಸರೆಯನ್ನರಸುತ್ತಾ ನಗರಗಳ ಕಡೆ ಮುಖಮಾಡಿ ಬರುತ್ತಿರುವುದು ಇಂದಿನ ಸಾಮಾನ್ಯ ವಿದ್ಯಮಾನ. ಬಂದವರಲ್ಲಿ ಕೆಲವರ ಬದುಕು ಹಸನಾದರೆ ಮತ್ತೆ ಕೆಲವರ ಬದುಕು ಮೂರಾಬಟ್ಟೆಯಾಗಿ ಹೋಗುತ್ತದೆ. ಹುಡುಗಿಯರಾದರಂತೂ ಅಂಥವರನ್ನು ಮೋಡಿಯ ಬಲೆ ಬೀಸಿ ಬುಟ್ಟಿಗೆ ಹಾಕಿಕೊಂಡು ಅವರನ್ನು ಉಪಯೋಗಿಸಿ ಎಸೆಯುವ ವಿಕೃತ ಮನಸ್ಸುಗಳಿಗೇನೂ ನಗರಗಳಲ್ಲಿ ಕೊರತೆ ಇಲ್ಲ. ಇಂತಹ ವಿಕೃತಿಯ ಖಯಾಲಿ ಇರುವವರಲ್ಲಿ ಭಜರಂಗದಳದ ಮಹಾನ್ ದೇಶಭಕ್ತ ನಾಯಕರಲ್ಲಿ ಒಬ್ಬನಾದ ಲೋಕಲ್ ಲೀಡರ್ ರಾಜು ಕುಲಾಲ್ ಎಂಬ ಕಾಮಿಯೂ ಒಬ್ಬ ಎಂಬುದು ತಡವಾಗಿಯಾದರೂ ಬೆಳಕಿಗೆ ಬಂದಿದೆ. ಈ ಮೂಲಕ ಭಜರಂಗದಳದ ಬಗ್ಗೆ ಕೇವಲ ಧಾರ್ಮಿಕ ಅಲ್ಪಸಂಖ್ಯಾತರು ಮಾತ್ರವಲ್ಲ, ಇನ್ನು ಮುಂದೆ ಮಹಿಳೆಯರೂ ಎಚ್ಚರಿಕೆಯಿಂದಿರಬೇಕು ಎಂಬ ಸಂದೇಶವನ್ನು ನೀಡಿದಂತಾಗಿದೆ.



ನಿಜವಾದ ಪ್ರೇಮಿಗಳು

ಇವನ ತೀರದ ಕಾಮತೀಟೆಗೆ ಈವರೆಗೆ ಅದೆಷ್ಟು ಹುಡುಗಿಯರು ಬಲಿಯಾಗಿದ್ದಾರೋ ಪ್ರಾಯಶಃ ಅವನಿಗೇ ನೆನಪಿರಲಿಕ್ಕಿಲ್ಲ. ಇವನ ವಿಕೃತಿಗೆ ಬಲಿಯಾದ ಲೇಟೆಸ್ಟ್ ಬಲಿಪಶು ಎಂದರೆ ಉತ್ತರ ಕರ್ನಾಟಕದ ಶಿರಸಿ ಮೂಲದ ಶಾರದ (ಹೆಸರು ಬದಲಾಯಿಸಲಾಗಿದೆ) ಎಂಬ ಹುಡುಗಿ. ಮೊನ್ನೆ ಈಕೆಯೊಂದಿಗೆ ಅವನು



ಕುಲಾಲ್ ಹುಡುಗಿಯರನ್ನು ಮೋಡಿ ಮಾಡುವ ರೀತಿ

ಕಾಮಲೀಲೆಯಲ್ಲಿ ತೊಡಗಿರುವಾಗಲೇ ಸಂಘಪರಿವಾರದ ಮತ್ತೊಂದು ತುಂಡು ಶ್ರೀರಾಮ ಸೇನೆ ಎಂಬ ಸಂಘಟನೆಯವರು ಹಿಡಿದು ಬೀದಿಗೆ ತಂದಿದ್ದಾರೆ.

ಘಟನೆಯ ವಿವರ

ಕಿತ್ತುತಿನ್ನುವ ಬಡತನದ ದೆಸೆಯಿಂದ ಈಗ್ಗೆ ನಾಲ್ಕು ವರ್ಷಗಳ ಹಿಂದೆ ಉತ್ತರ ಕರ್ನಾಟಕದ ಶಿರಸಿಯಿಂದ ವಿದ್ಯೆ ಕೆಲಸವನ್ನರಸುತ್ತಾ ಮಂಗಳೂರು ಮಹಾನಗರಿಗೆ ಬಂದ ಬಡ ಬ್ರಾಹ್ಮಣ ಹುಡುಗಿ ಶಾರದ. ನಗರದಲ್ಲಿ ಅಲ್ಲೋ ಇಲ್ಲೋ ಅಲೆದು ಕೊನೆಗೆ ಯಾವುದೋ ಒಂದು ಬಾಲಿಕಾಶ್ರಮದಲ್ಲಿ ಆಶ್ರಯ ಪಡೆದು ಹಗಲಲ್ಲಿ ನಗರದ ಪಿ.ವಿ.ಎಸ್ ಸರ್ಕಲ್‌ನಲ್ಲಿರುವ 'ಸಿಟಿ ಬುಕ್‌ಸ್ಟಾಲ್' ಸೇಲ್ಸ್‌ಗರ್ಲ್ ಆಗಿ ದುಡಿಯುತ್ತಾ ಮತ್ತೊಂದೆಡೆ ರಾತ್ರಿ ಶಾಲೆಯೊಂದರಲ್ಲಿ ಓದುತ್ತಾ ಪರದಾಡುತ್ತಿದ್ದಳು. ಇವಳಂತೆಯೇ ಭವಿಷ್ಯದ ಹೊಂಗನಸುಗಳನ್ನು ಹೊತ್ತು ಮಂಗಳೂರು ಸೇರಿದವನು ಅದೇ ಜಾತಿಗೆ ಸೇರಿದ ಸುಳ್ಯದ ಹುಡುಗ ರಮೇಶ್ (ಹೆಸರು ಬದಲಾಯಿಸಲಾಗಿದೆ). ಇವರಿಬ್ಬರಿಗೂ ಹೇಗೋ ಪರಿಚಯವಾಗಿದೆ. ಮದುವೆಯ ಸಮಾರಂಭವೊಂದರಲ್ಲಿ ಅಚಾನಕ್ ಆಗಿ ಇಬ್ಬರೂ ಮತ್ತೆ ಭೇಟಿಯಾದಾಗ ತಾವಿಬ್ಬರೂ ದೂರದ ಸಂಬಂಧಿಗಳು ಎಂಬ ಸತ್ಯವೂ ಅರಿವಿಗೆ ಬಂದಿದೆ. ಹೀಗೆ ಅವರಿಬ್ಬರ ಸಂಪರ್ಕ ಸ್ನೇಹವಾಗಿ ಮತ್ತದು ಮುಂದುವರಿದು ಪ್ರೇಮವಾಗಿ ಮಾರ್ಪಟ್ಟಿದೆ. ಕೊನೆಗೆ ಅವರಿಬ್ಬರೂ ಮದುವೆಯಾಗಲು ನಿರ್ಧರಿಸಿದಾಗ ಇಬ್ಬರ ಮನೆಯವರೂ ಯಾವ ವಿರೋಧವನ್ನೂ ತೋರದೆ ಒಪ್ಪಿಕೊಂಡಿದ್ದೂ ಆಗಿದೆ. ಇದಕ್ಕೆ ಅವರಿಬ್ಬರೂ ಒಂದೇ ಜಾತಿಗೆ ಸೇರಿದ್ದೂ ಒಂದು ಕಾರಣವಿರಬಹುದು.

ದಿನಕಳೆದಂತೆ ರಮೇಶ ಶಾರದಾಳನ್ನು ತುಂಬಾ ಹಚ್ಚಿಕೊಂಡ. ಅವಳಿಗಾಗಿ ಮೊಬೈಲು, ಹಣ, ಬಟ್ಟೆ-ಹೀಗೆ ಕೇಳಿದ್ದೆಲ್ಲವನ್ನೂ ತಂದುಕೊಟ್ಟ. ಆಕೆ ಬೆಸೆಂಟ್ ಕಾಲೇಜಿನಲ್ಲಿ ಬಿ.ಕಾಂ. ಓದುತ್ತಿದ್ದಳಾದ್ದರಿಂದ ಅವಳ ಓದಿಗಾಗಿಯೂ ಹಣ ಖರ್ಚು ಮಾಡಿದ. ಒಟ್ಟಿನಲ್ಲಿ ಆಕೆಗಾಗಿ ಆಗಲೇ ಹುಚ್ಚನಂತಾಗಿ ಹೋಗಿದ್ದ ರಮೇಶ ಪ್ರಾಯಶಃ ಮುಂದೊಂದು ದಿನ ತಾನು ಇಂತಹದ್ದೊಂದು ಕೆಟ್ಟ ಸುದ್ದಿಯನ್ನು ಕೇಳಬೇಕಾಗಿ ಬರಬಹುದೆಂದು ಕನಸಿನಲ್ಲೂ ಎಣಿಸಿರಲಿಲ್ಲವೇನೋ.

ಸಂಚಕಾರಿ ಭಜರಂಗಿ ಸಂಚಾಲಕ

ಹೀಗೆ ರಮೇಶ ಮತ್ತು ಶಾರದಳ ನಡುವೆ ಸಂಚಕಾರಿಯಾಗಿ ಬಂದವನೇ ಭಜರಂಗದಳದ ಮಂಗಳೂರು ನಗರ ಸಂಚಾಲಕ ರಾಜು ಕುಲಾಲ್. ಈತ ವೃತ್ತಿಯಲ್ಲಿ ಪೇಪರ್ ಏಜೆಂಟ್. ಆದರೆ ಪ್ರವೃತ್ತಿಯಲ್ಲಿ ಹುಡುಗಿಯರನ್ನು ಬುಟ್ಟಿಗೆ ಹಾಕಿಕೊಂಡು ಉಪಯೋಗಿಸಿ ಎಸೆಯುವ ವಿಕೃತಕಾಮಿ. ತನ್ನ ಪ್ರವೃತ್ತಿಯನ್ನು ವೃತ್ತಿಗಿಂತಲೂ ನಿಷ್ಠೆಯಿಂದ ಮಾಡುವ ಘಟಿಂಗ. ಅದಕ್ಕಾಗಿ ಒಂದು ಸಣ್ಣ ಅವಕಾಶವನ್ನೂ ಮಿಸ್ ಮಾಡಿಕೊಳ್ಳದ ಚಾಲಾಕಿ.

ಈತ ತನ್ನ ಪೇಪರ್ ಏಜೆಂಟ್ ವೃತ್ತಿಯ ಪರಿಣಾಮವಾಗಿ ನಗರದ 'ಸಿಟಿ ಬುಕ್‌ಸ್ಟಾಲ್'ನಲ್ಲಿ ಸೇಲ್ಸ್ ಗರ್ಲ್ ಆಗಿ ಕೆಲಸ ಮಾಡುತ್ತಿದ್ದ ಶಾರದಳನ್ನು ಪರಿಚಯಿಸಿಕೊಂಡ. ಭಜರಂಗದಳದ ಲೀಡರ್ ಎನ್ನುವ ಅವನ ಪೋಜು, ಥಾಟಿಯಿಂದ ಈಕೆಯೂ ಮಾರುಹೋಗಿ ಅವನೊಂದಿಗೆ ಸ್ವಲ್ಪ ಸಲುಗೆಯಿಂದಲೇ ವರ್ತಿಸತೊಡಗಿದಳು. ಅಷ್ಟು ಸಾಕಿತ್ತು ಕುಲಾಲ್‌ಗೆ. ತನ್ನ ಪ್ರವೃತ್ತಿಯಲ್ಲಿ ಪಳಗಿದ ಕುಲಾಲ್‌ಗೆ ಈಕೆಯನ್ನು ಬುಟ್ಟಿಗೆ ಹಾಕಿಕೊಳ್ಳುವುದಕ್ಕೆ ಬಹಳ ಸಮಯ ಬೇಕಾಗಲಿಲ್ಲ.

ಶಾರದೆಗೆ ಒಬ್ಬ ಪ್ರಿಯತಮನಿದ್ದಾನೆಂದೂ, ಅವರಿಬ್ಬರೂ ಮದುವೆಯಾಗುತ್ತಾರೆಂದೂ ರಾಜು ಕುಲಾಲ್‌ಗೆ ಮೊದಲೇ ಗೊತ್ತಿತ್ತು. ಶಾರದ ಈತನನ್ನು ರಮೇಶ್‌ಗೂ ಪರಿಚಯಿಸಿದ್ದಳು. ರಮೇಶನ ಬರ್ತ್‌ಡೇಗೆ ಕುಲಾಲ್ ಗಿಫ್ಟನ್ನೂ ತಂದುಕೊಟ್ಟಿದ್ದ. ಮುಗ್ಧಬುದ್ಧಿಯ ರಮೇಶ್ ರಾಜು ಕುಲಾಲ್‌ನನ್ನು ಎಂದೂ ಸಂಶಯದಿಂದ ನೋಡಲಿಲ್ಲ. ಆದರೆ, ಕಾಮ ಕಣ್ಣಿನ ಕುಲಾಲ್‌ನ ಮನಸ್ಸಿನಲ್ಲಿ ಹೊರಳಾಡುತ್ತಿದ್ದ ಲೆಕ್ಕಾಚಾರವೇ ಬೇರೆ.

ಆಕೆ ಬುಕ್‌ಸ್ಟಾಲ್‌ನ ಕೆಲಸ ಬಿಟ್ಟು ಕಾರ್ ಸ್ಟ್ರೀಟ್‌ನ ಮೆಡಿಕಲ್ ಶಾಪ್ ಒಂದರಲ್ಲಿ ಕೆಲಸಕ್ಕೆ ಸೇರಿದಾಗಲೂ ಆಕೆಯ ಸಂಪರ್ಕ ತಪ್ಪಿಹೋಗದಂತೆ ಎಚ್ಚರಿಕೆ ವಹಿಸಿಕೊಂಡ ರಾಜು ಕುಲಾಲ್ ಅಲ್ಲೂ ಆಕೆಯ ಬೆನ್ನುಬಿದ್ದ. ತನ್ನಲ್ಲಿರುವ ಹಣ, ಬೈಕ್ ಮುಂತಾದವುಗಳನ್ನು ಬಳಸಿ ಆಕೆಯನ್ನು ಸುತ್ತಾಡಿಸತೊಡಗಿದ. ಆದರೆ, ಇವೆಲ್ಲವೂ ಗೊತ್ತಿದ್ದೂ ರಮೇಶ್ ಮಾತ್ರ ಅದನ್ನು ಅನ್ಯಥಾ ಭಾವಿಸಲಿಲ್ಲ. ಮೊನ್ನೆ ನಗರದ ಮಾಲೆಮಾರ್ ಎಂಬಲ್ಲಿ ಇವರಿಬ್ಬರೂ ಸರಸ ಸಲ್ಲಾಪದಲ್ಲಿ ತೊಡಗಿರುವಾಗಲೇ ಶ್ರೀರಾಮ ಸೇನೆಯವರು ರೆಡ್‌ಹ್ಯಾಂಡಾಗಿ ಹಿಡಿದು ಅದು ಪತ್ರಿಕೆಯಲ್ಲಿ ರೋಚಕ ಸುದ್ದಿಯಾಗಿ ಹೊರಬಂದು ಗಬ್ಬೆದ್ದು ಹೋದ ನಂತರವಷ್ಟೆ ಶಾರದ-ಕುಲಾಲ್ ನಡುವಿನ ಸಂಬಂಧ ಎಂಥದ್ದು ಎಂದು ರಮೇಶನಿಗೆ ಗೊತ್ತಾಗಿದ್ದು.

ನಡೆದದ್ದೇನು?

ನಗರದ ಮಾಲೆಮಾರ್ ಎಂಬಲ್ಲಿ ಕಳೆದ ಒಂದು ವರ್ಷದಿಂದ ಎರಡಂತಸ್ತಿನ ಬಂಗಲೆಯೊಂದು ಖಾಲಿ ಬಿದ್ದಿತ್ತು. ವಾಸ್ತವದಲ್ಲಿ ಅದು ಬಿ.ವಿ.ಕೆ ಪ್ರಭು ಎಂಬುವವರಿಗೆ ಸೇರಿದ ಬಂಗಲೆ. ಕೆಲಸದ ನಿಮಿತ್ತ ಅವರು ಮಹಾರಾಷ್ಟ್ರಕ್ಕೆ ಹೋಗಬೇಕಾಗಿ ಬಂದಾಗ ಮನೆಯನ್ನು ಬಾಡಿಗೆಗೆ ಕೊಡಲು ನಿರ್ಧರಿಸಿ ವಕೀಲರೊಬ್ಬರ ಕೈಯಲ್ಲಿ ಕೀ ಕೊಟ್ಟಿದ್ದರು. ಬಾಡಿಗೆದಾರರನ್ನು ಕುದುರಿಸುವ ಪ್ರಯತ್ನ ಅಥವಾ ನೆಪದಲ್ಲಿ ಅದು ಹೇಗೋ ಅದೇ ಏರಿಯಾದ ನಿವಾಸಿ ರಾಜು ಕುಲಾಲ್‌ನ ಕೈಸೇರಿತು. ವಾಸ್ತವದಲ್ಲಿ ಅದು ಅವನಿಗೆ ಬಯಸದೇ ಬಂದ ಭಾಗ್ಯವಾಗಿತ್ತು. ಏಕೆಂದರೆ ಹುಡುಗಿಯರನ್ನು ಪಳಗಿಸಿಕೊಂಡು ಉಪಯೋಗಿಸಿ ಎಸೆಯುವ ಖಯಾಲಿ ಇರುವ ಇವನಿಗೆ ಮಜಾ ಮಾಡುವುದಕ್ಕಾಗಿ ಹೊಸದೊಂದು ಅಡ್ಡೆ ಸಿಕ್ಕಂತಾಯಿತು. ಹೊತ್ತಲ್ಲದ ಹೊತ್ತಲ್ಲಿ ಬೇರೆ ಬೇರೆ ಹುಡುಗಿಯರೊಂದಿಗೆ ಬಂದು ಇಲ್ಲಿ ಮಜಾ ಮಾಡುವುದು ಇವನಿಗೆ ಮಾಮೂಲಿಯಾಗಿ ಹೋಯಿತು.

ಇದನ್ನೆಲ್ಲಾ ನೋಡಿದ ಸ್ಥಳೀಯ ಜನರು ನಿಜಕ್ಕೂ ಸುಸ್ತಾಗಿ ಹೋದರು. ಅವರನ್ನು ರೆಡ್‌ಹ್ಯಾಂಡ್ ಆಗಿ ಹಿಡಿಯುವ ಸ್ಕೆಚ್ ಹಾಕಿದರು. ಕೊನೆಗೊಂದು ದಿನ ಜುಲೈ 2ರಂದು ಅವರೆಲ್ಲರೂ ಶ್ರೀರಾಮ ಸೇನೆಯವರೊಂದಿಗೆ ಸೇರಿ ಅವನನ್ನು ರೆಡ್‌ಹ್ಯಾಂಡ್ ಆಗಿ ಹಿಡಿದೇ ಬಿಟ್ಟರು. ಆವತ್ತು ಅವನೊಂದಿಗೆ ಬಂದು ಸರಸಸಲ್ಲಾಪದಲ್ಲಿ ತೊಡಗಿದ ಹುಡುಗಿ ಬೇರೆ ಯಾರೂ ಆಗಿರದೇ ಶಾರದೆಯೇ ಆಗಿದ್ದಳು. ಅದು ಪತ್ರಿಕೆಗಳಿಗೂ ಬಿಸಿ ಬಿಸಿ ಸುದ್ದಿಯಾಗಿ ಇಡೀ ಕರಾವಳಿಯಲ್ಲಿಯೇ ಭಜರಂಗದಳದ ಮಾನಮರ್ಯಾದೆ ಬೀದಿಗೆ ಬಂದು ನಿಂತಿತು. ಭಜರಂಗಿಗಳೆಂದರೆ ಸೆಲ್ಯೂಟ್ ಹೊಡೆಯುವ ಕರಾವಳಿ ಪೊಲೀಸರು ಇಷ್ಟೊಂದು ಬೀದಿರಂಪವಾದ ನಂತರವೂ ಸುಮ್ಮನಿರುವುದು ತರವಲ್ಲ ಎಂದು ಎಣಿಸಿದರೋ ಏನೋ ಗೊತ್ತಿಲ್ಲ, ಅಂತೂ ಇಂತೂ ರಾಜುಕುಲಾಲ್ ಮೇಲೆ ಒಂದು ಕೇಸನ್ನೂ ಜಡಿದರು.

ಅಷ್ಟೊತ್ತಿಗೆ ಎಲ್ಲೆಡೆ ಗಬ್ಬುನಾಥ ಹರಡಿಹೋಗಿದ್ದರಿಂದ ಭಜರಂಗಿ ರಕ್ಷಕ ಮಂತ್ರಿ ನಾಗರಾಜ್ ಶೆಟ್ಟಿ ಫೋನಿಗೂ ಸಿಗದೆ ತಲೆಮರೆಸಿಕೊಂಡುಬಿಟ್ಟರು.



ಕುಲಾಲ್‌ನ ಜೊತೆಗಿದ್ದ ಹುಡುಗಿ

ಜಟ್ಟಿ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂದನಂತೆ. ಹಾಗೆ ರಾಜು ಕುಲಾಲ್ ಕೂಡ ನಾವಿಬ್ಬರೂ ಪ್ರೇಮಿಗಳು, ಮದುವೆ ಕೂಡ ಆಗುತ್ತೇವೆ ಎಂದು ಬಂಡಲ್ ಬಿಡಲಾರಂಭಿಸಿದ್ದಾನೆ. ಇವನು ಹಾಳು ಮಾಡಿದ ಹುಡುಗಿಯರನ್ನೆಲ್ಲಾ ಇವನಿಗೆ ಕಟ್ಟಿದ್ದರೆ ಇವನದೇ ಒಂದು ಹಿಂದು ರೆಡಿಯಾಗಿರುತ್ತಿತ್ತೋ ಏನೊ. ಇನ್ನೊಂದೆಡೆಗೆ ಇಷ್ಟೆಲ್ಲಾ ರಾದ್ಧಾಂತಕ್ಕೆ ಶ್ರೀರಾಮ ಸೇನೆಯವರೇ ಕಾರಣ ಎಂದು ಅವನ ಭಜರಂಗಿ ಭಂಟರ ಗ್ಯಾಂಗ್ ಇದೀಗ ಸ್ಥಳೀಯ ಶ್ರೀರಾಮ ಸೇನೆಯ ಕಾರ್ಯಕರ್ತರ ಮೇಲೆ ಮುಗಿಬಿದ್ದದ್ದು, ಕೊಲೆಬೆದರಿಕೆ ಒಡ್ಡಿದ್ದು ಹೇಸಿಗೆಗೆ ಕಲ್ಲುಹೊಡೆದಂತಾಗಿದೆ. ಒಟ್ಟಿನಲ್ಲಿ ಕರಾವಳಿಯಾದ್ಯಂತ ಈಗ ಇದರದ್ದೇ ಗಬ್ಬುನಾತ.

– ಭೂಮಿಕಾ

ಕುಲಾಲನ ಕುಚೇಷ್ಟೆಗಳು

ರಾಜು ಕುಲಾಲ್ ಆರ್.ಎಸ್.ಎಸ್ ತರಗತಿಗಳಲ್ಲಿ ನೀಟಾಗಿ ಲಾಠಿ ಬೀಸುವುದರಲ್ಲಿ ಪಳಗಿದವನು ಎಂಬ ಕಾರಣಕ್ಕೆ, ಈತನಿಗೆ ಭಜರಂಗದಳದ ಜಿಲ್ಲಾ ಸಂಚಾಲಕನ ಸ್ಥಾನ ಕೊಟ್ಟಿದ್ದರು. ಸಂಘಪರಿವಾರದ ಆಣತಿಯಂತೆ ಕರಾವಳಿಯಲ್ಲಿ ಕೋಮುಗಲಭೆ ಎಬ್ಬಿಸಿ ಮುಸ್ಲಿಮರ ಆಸ್ತಿ ಪಾಸ್ತಿಯನ್ನು ನಾಶಮಾಡಿದ ಕೀರ್ತಿಯೂ ಇವನಿಗೆ ಸೇರುತ್ತದೆ. ಅಷ್ಟೇ ಅಲ್ಲ, ಕಂಡಕಂಡಲ್ಲಿ ಹುಡುಗಿಯರನ್ನು ಚುಡಾಯಿಸುವುದು ಇವನ ಮಾಮೂಲಿ ಚಾಳಿಗಳಲ್ಲೊಂದು.

ಈತನ ಕಾಮತೀಟೆಗೆ ಬಲಿಪಶುಗಳಾದವರು ಕೇವಲ ಹುಡುಗಿಯರಲ್ಲ, ಅಮಾಯಕ ಹುಡುಗರೂ ಇದ್ದಾರೆ. ಮಂಗಳೂರಿನ ಬಸ್‌ಸ್ಟಾಂಡ್ ಬಳಿ ಪೇಪರ್ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಸ್ವಜಾತಿಯ ಹುಡುಗನೊಬ್ಬನ ಮೇಲೆ ಕಣ್ಣು ಹಾಕಿ ಗೋಳು ಹೊಯ್ದುಕೊಂಡಿದ್ದ. ಆಶ್ರಯ ಕೊಡುವ ನೆಪದಲ್ಲಿ ಆ ಹುಡುಗನಿಗೆ ರಾತ್ರಿ ಮಲಗಲು ತನ್ನ ರೂಮ್‌ಗೆ ಕರೆದುಕೊಂಡು ಹೋಗಿ ಆತನ ಮೇಲೆ ತನ್ನ ಕಾಮಚೇಷ್ಟೆಗಳನ್ನು ಶುರುವಿಟ್ಟುಕೊಂಡಿದ್ದೇ ತಡ ಆ ಹುಡುಗ ಎರಡೇ ದಿನದಲ್ಲಿ ಬಿದ್ದೆನೋ ಸತ್ತೆನೋ ಎಂದು ಅಲ್ಲಿಂದ ಓಡಿಹೋಗಿದ್ದ.

ಈಗ ಸಿಕ್ಕಿಬಿದ್ದಿರುವ ಶಾರದ ಒಂದು ಚಿಕ್ಕ ಉದಾಹರಣೆಯಷ್ಟೆ. ಅವಳಂತಹ ಅನೇಕ ಹುಡುಗಿಯರು ಇವನಿಂದ ವಂಚಿತರಾಗಿದ್ದರೂ ಅವರೆಲ್ಲರೂ ಮಾನ ಮರ್ಯಾದೆಗಂಜಿ ಎಲ್ಲೂ ಬಾಯಿಬಿಟ್ಟಿಲ್ಲ. ಅವರು ಮೌನವಾಗಿರುವುದೇ ಇವನು ತನ್ನ ಚಾಳಿಯನ್ನು ನಿರ್ಭೀತಿಯಿಂದ ಮುಂದುವರೆಸಲು ಒಂದು ಕಾರಣವಾಗಿದೆ.

ಚೆಡ್ಡಿದೋಸ್ತ್‌ಗಳೇಕೆ ತಿರುಗಿಬಿದ್ದರು?

ಇಲ್ಲಿ ಒಂದು ವಿಶೇಷ ಎಂದರೆ, ಭಜರಂಗದಳದ ಚೆಡ್ಡಿ ನಾಯಕನೊಬ್ಬ ಮಾಡಿದ ಘನಂಧಾರಿ ಕೆಲಸವನ್ನು ಹೊರಗೆಳೆಯಲು 'ಚೆಡ್ಡಿ ದೋಸ್ತರೇ' ಆಗಿರುವ ಶ್ರೀರಾಮ ಸೇನೆಯವರು ಮುಂದೆ ಬಂದಿದ್ದು. ಇದು ಅಚ್ಚರಿಯ ಸಂಗತಿ ಏನೂ ಅಲ್ಲ. ಈಗಾಗಲೇ ಕರಾವಳಿಯಲ್ಲಿ ಶ್ರೀರಾಮ ಸೇನೆಯವರಿಗೂ ಭಜರಂಗದಳದವರಿಗೂ ಮನಸ್ತಾಪ ಪ್ರಾರಂಭವಾಗಿ ಬಹಳ ದಿನಗಳೇ ಕಳೆದುಹೋಗಿವೆ. ಆದರೆ, ಇಲ್ಲಿಯತನಕ ಅದು ಒಳಗೊಳಗೇ ನಡೆಯುತ್ತಿರುವ ಮುಸುಕಿನ ಗುದ್ದಾಟವಾಗಿ ಮಾತ್ರ ಇತ್ತು.

ಬಾಬಾಬುಡನ್‌ಗಿರಿ ವಿಚಾರದಲ್ಲಿ ಭಜರಂಗದಳದವರು ಒಂದು ದಿನ ಬಂದ್‌ಗೆ ಕರೆ ನೀಡಿದರೆ, ಶ್ರೀರಾಮ ಸೇನೆಯವರು ಮತ್ತೊಂದು ಕರೆ ನೀಡುತ್ತಿದ್ದರು. ಒಬ್ಬರ ಹುಳುಕನ್ನು ತೆಗೆಯುವುದಕ್ಕೆ ಮತ್ತೊಬ್ಬರು ಸಮಯಾವಕಾಶ ನೋಡುತ್ತಿದ್ದರು. ಭಜರಂಗದಳದ ಮಂಗಳೂರು ನಗರದ ಸಂಚಾಲಕ ರಾಜು ಕುಲಾಲ್‌ನ ಕಾಮಚಾಳಿಯ ಬಗ್ಗೆ ಹಳೇ ಚೆಡ್ಡಿದೋಸ್ತರಾದ ಶ್ರೀರಾಮ ಸೈನಿಕರಿಗೆ ಗೊತ್ತಿತ್ತು. ಹಾಗಾಗಿ ಭಜರಂಗದಳಕ್ಕೆ ನೈತಿಕ ಏಟು ಕೊಡುವುದಕ್ಕೆ ಇದೇ ಸರಿಯಾದ ಮಾರ್ಗ ಅಂದುಕೊಂಡು ಸ್ಕೆಚ್ ಹಾಕತೊಡಗಿದರು. ಕೊನೆಗೂ ಅವರ ಪ್ಲಾನ್ ಯಶಸ್ಸು ಕಂಡಿತು.

ಮೊನ್ನೆ ಅವನು ಶಾರದಾಳೊಂದಿಗೆ ಸರಸಸಲ್ಲಾಪದಲ್ಲಿ ತೊಡಗಿದ್ದಾಗ ಎಲ್ಲರ ಎದುರು ರೆಡ್‌ಹ್ಯಾಂಡ್ ಆಗಿ ಹಿಡಿದು ಎಳೆದು ತಂದರು; ಹಿಂದೂಗಳಿಗೆ ಪವಿತ್ರವಾದ ಕೇಸರಿ ಬಟ್ಟೆಯನ್ನು ಹಾಸಿ ಅದರ ಮೇಲೆಯೇ ಈತ ಅವಳೊಂದಿಗೆ ಸರಸವಾಡುತ್ತಿದ್ದ ಎಂದು ಪ್ರಚಾರ ಮಾಡಿ ಹಿಂದೂಗಳ ಸಿಂಪಥಿಯನ್ನು ಗೆದ್ದರು. ತಾವು ನೈತಿಕವಾಗಿ ಅಧಃಪತನಗೊಂಡ ಯಾರನ್ನೇ ಆದರೂ ಬಿಡುವುದಿಲ್ಲ ಎಂದು ತೋರಿಸಿದರು. ಪ್ರತಿಯಾಗಿ ಭಜರಂಗಿಗಳು ಶ್ರೀರಾಮ ಸೇನೆಯ ಮೇಲೆ ಮುಗಿಬಿದ್ದರು; ಅವರಿಗೆ ಪ್ರಾಣ ಬೆದರಿಕೆ ಒಡ್ಡಿದರು.

ಒಟ್ಟಿನಲ್ಲಿ ಚೆಡ್ಡಿದೋಸ್ತರ ಮುಸುಕಿನ ಗುದ್ದಾಟ ಈ ಘಟನೆಯ ಕಾರಣದಿಂದ ಫುಲ್‌ಫ್ಲೆಜ್ಡ್ ಬೀದಿ ನಾಯಿಗಳ ಕಾಳಗದಂತಾಗಿದ್ದಂತೂ ದಿಟ.


ಸಗರದಲ್ಲಿ ಮಾರುತಿ ಮುತ್ಯಾನ
ಜನ ಮರುಳೋ-ಜಾತ್ರೆ ಮರುಳೋ


ಇತ್ತೀಚಿನ ಒಂದೆರಡು ವಾರಗಳಲ್ಲಿ ಗುಲ್ಬರ್ಗಾ ಜಿಲ್ಲೆಯ ಶಹಾಪುರ ತಾಲ್ಲೂಕಿನಲ್ಲಿರುವ ಸಗರ ಎಂಬ ಗ್ರಾಮಕ್ಕೆ ಹೋಗದವರೇ ಇಲ್ಲವೇನೋ ಅನ್ನುವಷ್ಟು ಜನ ಹೋಗುತ್ತಿದ್ದಾರೆ. ಹೈದ್ರಾಬಾದ್-ಕರ್ನಾಟಕದ ಜನಗಳಷ್ಟೇ ಅಲ್ಲದೆ ಮಹಾರಾಷ್ಟ್ರದ ಪೂನಾ, ಸೊಲ್ಲಾಪುರ, ಕೊಲ್ಹಾಪುರಗಳಲ್ಲದೆ ಹುಬ್ಬಳ್ಳಿ, ಬೆಂಗಳೂರು, ಬೆಳಗಾಂವ್, ಚಿತ್ರದುರ್ಗ, ಕೊಡಗು, ದಾವಣಗೆರೆ, ಮದ್ರಾಸ್, ಶಿರೂರ್ ಇಲಕಲ್‌ಗಳಿಂದಲೂ ಜನ ತಂಡೋಪತಂಡವಾಗಿ ಬರುತ್ತಿದ್ದಾರೆ. ಯಾಕೆ ಗೊತ್ತೆ?

ಈ ಸಗರ ಗ್ರಾಮದಲ್ಲಿ ಅಂದಾಜು ಅರವತ್ತರ ಪ್ರಾಯದ ಸವಿತಾ ಸಮಾಜಕ್ಕೆ ಸೇರಿದ ಮಾರುತಿ ಎಂಬ ಮಾಂತ್ರಿಕನಿದ್ದಾನೆ. ಈತನಿಗೆ ಫತ್ತರಗಿ ಭಾಗ್ಯವಂತಿ ದೇವಿಯ ಒಲುಮೆ ಆಗಿದೆ. ಹಾಗಾಗಿ ಈತನಿಗೆ ವಾಕ್ ಸಿದ್ಧಿ ಬಂದುಬಿಟ್ಟಿದೆ. ಈತ ಹೇಳಿದ ಯಾವುದೇ ವಾಕ್ಯಗಳು ಹುಸಿಹೋಗುವುದಿಲ್ಲ. ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕರುಣಿಸುತ್ತಾನೆ. ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುತ್ತಾನೆ. ಕಾಲಿಲ್ಲದವರಿಗೆ ಕಾಲು ಕೊಡುತ್ತಾನೆ. ಹೀಗೆ ಬೇಡಿ ಬಂದ ಭಕ್ತಾದಿಗಳಿಗೆ ಬೇಡಿದ್ದನ್ನು ಕರುಣಿಸುತ್ತಾನೆ ಎಂಬ ಪ್ರತೀತಿ ಎಷ್ಟೊಂದು ತೀವ್ರವಾಗಿ ಹಬ್ಬುತ್ತಿದೆಯೆಂದರೆ ಬಹುಶಃ ಇನ್ನೊಂದು ನಾಲ್ಕಾರು ತಿಂಗಳು ಕಳೆದರೆ ಈ ಮಾಂತ್ರಿಕ ಮಾರುತಿಯ ಸುದ್ದಿ ಸಮುದ್ರದಾಚೆಗೂ ಹಬ್ಬಬಹುದೇನೋ....

ಗುಲ್ಬರ್ಗಾ


ಇದೇನೆ ಇರಲಿ, ಶಹಾಪುರ ಕ್ಷೇತ್ರ ಮಂತ್ರಿ ಶರಣಬಸಪ್ಪ ದರ್ಶನಾಪುರದಿಂದ ಎಷ್ಟರಮಟ್ಟಿಗೆ ಪ್ರಸಿದ್ಧವಾಗಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ, ಅದಕ್ಕಿಂತಲೂ ಮಿಗಿಲಾದ ಪ್ರಸಿದ್ಧಿಯನ್ನು ಈ ಮಾರುತಿಯಿಂದಲೇ ಪಡೆಯುತ್ತಿದೆ ಎಂದರೆ ತಪ್ಪೇನಿಲ್ಲ, ಏಕೆಂದರೆ ಈ ಮಾರುತಿಯ ವಾಕ್‌ಸಿದ್ಧಿಯ ಪ್ರಭಾವವೇ ಅಂಥದ್ದು! ಈತ ಸುಮ್ಮನೆ ಊದಿನಕಡ್ಡಿಯ ಧೂಪ ತೋರಿಸಿದರೆ ಸಾಕು ಮುರಿದ ಕಾಲುಗಳು ಕೂಡಿಕೊಳ್ಳುತ್ತವೆ. ವೈದ್ಯನ ಸ್ಟೆತೋಸ್ಕೋಪ್‌ನಂತೆ ಎರಡು ಕಬ್ಬಿಣದ ಕೊಂಡಿಯನ್ನು ರೋಗಿಯ ಮೈಮೇಲೆ ತಾಗಿಸಿದರೆ ಸಾಕು ಮಕ್ಕಳಿಲ್ಲದವರಿಗೆ ಸಂತಾನಭಾಗ್ಯ ಪ್ರಾಪ್ತಿಯಾಗುತ್ತದೆ. ಭಂಡಾರಿ ಹಚ್ಚಿದರೆ ಸಾಕು ಜ್ವರರಿಂದ ಉರಿವ ಮೈ ತಣ್ಣಗಾಗುತ್ತದೆ. ನಿಮ್ಮನ್ನು ಕಾಡುವ ಕಿಡ್ನಿ ಫೇಲ್, ಏಡ್ಸ್, ಕ್ಯಾನ್ಸರ್, ಮಾನಸಿಕ ಅಸ್ವಸ್ಥತೆ- ಹೀಗೆ ಏನೇ ಇರಲಿ "ಆಯ್ತು ಹೋಗು! ನಿನಗೆ ಇನ್ನು ಮೇಲೆ ಯಾವುದೂ ಏನೂ ಮಾಡಲ್ಲ, ಚಿಂತೆಬಿಡು." ನಿನಗೆ ವಾಸಿಯಾದರೆ ಮುಂದಿನ ಮಂಗಳವಾರ ಇಲ್ಲವೇ ಶುಕ್ರವಾರ ಬಂದುಹೋಗು" ಎಂದುಬಿಡುತ್ತಾನೆ ಮಾರುತಿ!



ಬಸಪ್ಪಗೌಡ



ಶರ್ಮುದ್ದೀನ್ ಮುಲ್ಲಾ


ಅಮೀನರೆಡ್ಡಿ


ತನ್ನ ಸಂಗಡಿಗರೊಂದಿಗೆ ಮಾರುತಿ ಮುತ್ಯಾ


ಸಿದ್ದಿಂಗಪ್ಪಗೌಡ


ಗುರುಲಿಂಗಪ್ಪಗೌಡ


ಶ್ರೀನಿವಾಸಗೌಡ

ವಾರದ ಏಳು ದಿನಗಳಲ್ಲೂ ಈ ಮಲ್ಲಯ್ಯ ಸಗರದಲ್ಲಿದ್ದು ಆಗಾಗ ಮಾತ್ರ ದೇವದುರ್ಗಕ್ಕೊ ಬಳ್ಳಾರಿಗೋ ಹೋಗಿಬರುತ್ತಾನೆ. ಮಂಗಳವಾರ ಹಾಗೂ ಶುಕ್ರವಾರ ದೇವಿಯವಾರವಾದ್ದರಿಂದ ಆ ದಿನ ಮಾರುತಿಗೆ ವಿಶೇಷ ಶಕ್ತಿ ಬಂದಿರುತ್ತದೆ. ಕಾರಣ ಆತನನ್ನು ಹುಡುಕಿಕೊಂಡು ಜನ ಇರುವೆ ಸಾಲಿಟ್ಟಂತೆ ಬರುತ್ತಾರೆ. ಪಾದಚಾರಿಗಳಾಗಿ ಬರುತ್ತಾರೆ. ಮೋಟಾರು ಬೈಕುಗಳಲ್ಲಿ ಬರುತ್ತಾರೆ. ಜೀಪು-ಕಾರುಗಳಿಗೆ ಲೆಕ್ಕವಿಲ್ಲ, ಒಟ್ಟಾರೆಯಾಗಿ ಹೇಳಬೇಕಾದರೆ ಕಳೆದ ಒಂದು ವಾರದಿಂದ ಸಗರದಲ್ಲಿ ಜಾತ್ರೆಯೇ ನಡೆದಿದೆ.

ಇಲ್ಲಿನ ಇನ್ನೊಂದು ವಿಶೇಷವೇನೆಂದರೆ ಇಲ್ಲಿಗೆ ಬರುವವರಲ್ಲಿ ಹೆಚ್ಚುಪಾಲಿನ ಜನರು ವೈಟ್‌ಕಾಲರ್‌ನ ಜನಗಳೇ ಆಗಿರುತ್ತಾರೆ. ಬಹುಶಃ ಗುಲ್ಬರ್ಗಾ ಜಿಲ್ಲೆಯ ರಾಜಕಾರಣಿಗಳು ಇಲ್ಲಿಗೆ ಬರುತ್ತಿದ್ದಾರೆ. ಇತ್ತೀಚೆಗೆ ಬೆಂಗಳೂರು-ಬಳ್ಳಾರಿ ಜಿಲ್ಲೆಯ ರಾಜಕಾರಣಿಗಳೂ ಬರತೊಡಗಿದ್ದಾರೆ. ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್‌ರ ಸಹೋದರನ ಮಗ, ಮಾಜಿ ಮಂತ್ರಿಗಳಾದ ಮಾಲೀಕಯ್ಯ ಗುತ್ತೇದಾರ್, ಮದನಗೋಪಾಲನಾಯಕ, ಮಾಜಿ ಪೊಲೀಸ್ ಅಧಿಕಾರಿ ಸಂಗ್ರಾಮ್‌ಸಿಂಗ್‌ರ ಹೆಂಡತಿ, ಜಿಲ್ಲಾ ಉಸ್ತುವಾರಿ ಸಚಿವ ದರ್ಶನಾಪುರ ಮುಂತಾದವರು ಈ ಮಾರುತಿಯ ದರ್ಶನ ಪಡೆದು ಧನ್ಯರಾಗಿದ್ದಾರೆ. ಇವರ ದರ್ಶನ ಭಾಗ್ಯದಿಂದಲೇ ದರ್ಶನಾಪುರ ಮಂತ್ರಿಯಾದರು ಎಂಬ ಪುಕಾರುಗಳಿವೆ.

ಈ ಥರ ಘಟಾನುಘಟಿ ರಾಜಕಾರಣಿಗಳು ಹಾಗೂ ಬೆಂಗಳೂರು-ಮಂಗಳೂರಿನ ಐ.ಟಿ.ಬಿ.ಟಿ. ಉದ್ಯೋಗಿಗಳು ಹೀಗೆ ಸಾಲು ಹಿಡಿದು ಸಗರಕ್ಕೆ ಹೋಗಿಬರುವುದನ್ನು ನೋಡಿದ ಮೇಲಂತೂ ಜನಸಾಮಾನ್ಯರು ಹುಚ್ಚೆದ್ದು ಹೋಗಿದ್ದಾರೆ. ಇದೀಗ ವಾರದ ಪ್ರತಿ ದಿವಸವೂ 'ತೇರು' ಎಳೆಯೋದೊಂದೆ ಬಾಕಿ! ಅಷ್ಟೊಂದು ಜನಸಂದಣಿ ನೆರೆದಿರುತ್ತದೆ. ಕಾರು, ಜೀಪು, ಮೋಟಾರುಗಳ ಮೂಲಕ ಬಂದ ಆ ಜನರಿಗೆ ತಮ್ಮ ವಾಹನಗಳನ್ನು ಎಲ್ಲಿ ನಿಲ್ಲಿಸೋಣ ಎಂಬುದೇ ಒಂದು ದೊಡ್ಡ ಸಮಸ್ಯೆಯಾಗಿಬಿಟ್ಟಿದೆ.

ಈ ಎಲ್ಲ ಅಂತೆಕಂತೆಯ ಲೆಕ್ಕವಿಲ್ಲದಷ್ಟು ಗಾಳಿಸುದ್ದಿಯ ಬೆನ್ನು ಹತ್ತಿ ಮೊನ್ನೆ ಶುಕ್ರವಾರ ಸಗರದ ಮಾರುತಿ ಮುತ್ಯಾನನ್ನು ಕಂಡು ಆತನ ಸೇವಾ ಕಾರ್ಯ ಯಾವ ಮಾದರಿಯದೆಂಬುದನ್ನು ನಮ್ಮ ಓದುಗರಿಗೆ ಪರಿಚಯಿಸಬೇಕೆಂದು ಆ ಕಡೆ ಹೊರಟೆ. ಶಹಾಪುರ ಪಟ್ಟಣದಿಂದ **10-15** ಕಿ.ಮೀ. ದೂರ ಇರುವ ಸಗರಕ್ಕೆ ಹೊರಟಾಗ ಮಾರ್ಗಮಧ್ಯದಲ್ಲಿ ಬೈಕ್ ಪಂಕ್ಚರ್ ಆಯಿತು. ಇನ್ನೇನು ಮಾಡೋದು ಎಂದು ಕಾದಿರುವಂತೆಯೇ ಸದರಿ ಮಾರುತಿ ಮುತ್ಯಾನ ದರ್ಶನಕ್ಕೆಂದೇ ದೂರದ ಮದ್ರಾಸಿನಿಂದ ಹೊರಟಿದ್ದ ಕಾರೊಂದು ಬಂತು. ನಾವು ನಿಂತದ್ದನ್ನು ಕಂಡ ವೆಂಕಟಾಚಲ ಎಂಬ ವ್ಯಕ್ತಿ ಮುತ್ಯಾನ ವಿಳಾಸ ವಿಚಾರಿಸಿದ. "ಬನ್ನಿ ಹೋಗೋಣ. ನೀವೂ ಮಾರುತಿ ತಾತನಲ್ಲಿಗೆ ಹೊರಟಿದ್ದೀರಿ ತಾನೆ?" ಎಂದು ಕರೆದ.

ಆಗ ನನ್ನ ಗೆಳೆಯರಾದ ಹುಸನಪ್ಪ ಕಟ್ಟಿಮನಿ ಹಾಗೂ ಎ.ಎಂ. ಪಟೇಲ್ ಸೇರಿಕೊಂಡು ಅವರ ಕಾರೊಳಗೆ ಕೂಡುವುದು ಅನಿವಾರ್ಯವಾಯಿತು. ಆ ವಾಹನದಲ್ಲಿ ವೆಂಕಟಾಚಲ ಹಾಗೂ ಅವರ ತಾಯಿ ಇದ್ದರು. ಅವರಿಗೆ ಪಾರ್ಶ್ವರೋಗವಿದೆಯೆಂದು

ಫತ್ತರಗಿ ಭಾಗಮ್ಮನ ಬಗೆಗಿನ ಐತಿಹ್ಯ

ಗುಲ್ಬರ್ಗಾ ಜಿಲ್ಲೆಯ ಅಫ್ಜಲ್ಪುರ ತಾಲ್ಲೂಕಿನ ಕಟ್ಟಕಡೆಯ ಹಳ್ಳಿ ಘತ್ತರಗಿ. ಇಲ್ಲಿನ ಭಾಗಮ್ಮದೇವಿ ಉತ್ತರ ಕರ್ನಾಟಕದ ಹಳ್ಳಿಗಳಿಗೆಲ್ಲ ಪ್ರಸಿದ್ಧ. ಈ ದೇವತೆಗೆ ಹರಕೆ ಹೊತ್ತು ಆಡುವ 'ಸಿಡಿ'ಯಂತೂ ಇನ್ನು ಸುಪ್ರಸಿದ್ಧ. ಈ ದೇವತೆಯ ಬಗ್ಗೆ ಹಲವು ಹತ್ತು ವೈಚಿತ್ರ ಐತಿಹ್ಯಗಳಿವೆ.

ಅಫ್ಜಲ್ಪುರ-ಜೇವರ್ಗಿಯ ಸೀಮಾರೇಖೆಯಾಗಿ ಹರಿಯುವ ಭೀಮಾನದಿಯ ದಂಡೆಯ ಮೇಲೆ ಪ್ರಕೃತಿ ಸೊಬಗಿನ ಮೂಲೆಯೊಂದರಲ್ಲಿ ನೆಲೆಸಿರುವ ಭಾಗಮ್ಮನದು ಮೂಲತಃ ಹಂಪಿ. ಈಕೆ ಆನೆಗುಂದಿ ಅರಸನ ಅಥವಾ ವಿಜಯನಗರ ಸಾಮ್ರಾಜ್ಯದ ಕುಲದೇವತೆ. ಅಲ್ಲಿಯ ಅರಸನೊಬ್ಬ ಐಶ್ವರ್ಯ ಮದದಿಂದ ಬಂಗಾರದ ಚಪ್ಪಲಿ ಧರಿಸುತ್ತಿದ್ದ. ಇದರಿಂದ ಬೇಸರಗೊಂಡ ಭಾಗಮ್ಮ ಅಲ್ಲಿರೋದು ಅವಮಾನಕರವೆಂದು ಬಗೆದು ಯಾರಿಗೂ ತಿಳಿಯದ ಹಾಗೆ ಹಾವಾಗಿ ಹರಿದುಕೊಂಡು ದಾರಿಗಡ್ಡ ಬಂದ ಕೃಷ್ಣೆ-ಭದ್ರೆಯರನ್ನು ಸೀಳಿಕೊಂಡು ಸಿಂಧಗಿ ತಾಲ್ಲೂಕಿನ ಹೆಬ್ಬಾಳದ ಹಳ್ಳದಲ್ಲಿ ಬಂದು ಭೀಮೆಯನ್ನು ಸೇರಿಕೊಂಡಳು. ಅಲ್ಲಿಂದ ಮುಂದೆ ಎಲ್ಲಿಗೋಗಬೇಕೆಂದು ದಿಕ್ಕು ತೋಚದಾದಾಗ, ಅಲ್ಲೆ 'ಜಬ್ಬಲ ಬೆಳೆದ' (ಗೌಡಪ್ಪ ಗೌಡರ ಹೊಲ) ಹೊಂಡದಲ್ಲಿ ನೆಲೆ ನಿಂತಳು.


ಭಾಗ್ಯವಂತಿ ದೇವಿ

ಅಲ್ಲಿ ಈಕೆಯನ್ನು ಯಾರೂ ಗುರುತಿಸಲಿಲ್ಲ, ಆದರೆ ದನ ಕಾಯುವ ಹುಡುಗನೊಬ್ಬ ಈಕೆಯಿಂದ ವೃತ್ತಾಂತವನ್ನೆಲ್ಲ ಕೇಳಿ ಊರಲ್ಲಿ ಹೋಗಿ ಹೇಳಿದ. ಊರಿನ ಮುಖಂಡರೆಲ್ಲ ಸೇರಿ ಕಂಟದ ಆಕಾರದಲ್ಲಿದ್ದ ಭಾಗಮ್ಮನನ್ನು ತಮ್ಮ ಊರಾದ ಘತ್ತರಗಿಗೆ ಕೊಂಡೊಯ್ದು ಅಲ್ಲಿಯೇ ಒಂದು ಗುಡಿ ಕಟ್ಟಿಸಿದರಂತೆ! ಗುಡಿಯ ಬಾಗಿಲು ಉತ್ತರಕ್ಕಿದ್ದರೂ ಭಾಗಮ್ಮನ ಕಂಬದ ಮುಖದ ಮಾತ್ರ ದಕ್ಷಿಣಕ್ಕಿದೆ. ಗುಡಿಯ ಹಿಂದೆ ಒಂದು ಸಣ್ಣ ಕಿಂಡಿ ಇದ್ದು, ಆ ಕಿಂಡಿ ಮೂಲಕ ಭಾಗಮ್ಮ ತನ್ನ ತವರೂರ ಕಡೆಗೆ ನಿತ್ಯ ನೋಡುತ್ತ ನಿಂತಿದ್ದಾಳೆ ಎಂಬುದು ಅವಳ ಪೌರಾಣಿಕ ಐತಿಹ್ಯ.

ಆದರೆ ದಿನಗಳೆದಂತೆ ಈ ದೇವತೆಯ ಬಗ್ಗೆ ಹಲವಾರು ಆಧುನಿಕ ಕಥೆಗಳು ದಿನಕ್ಕೊಂದರಂತೆ ಹುಟ್ಟಿಕೊಳ್ಳುತ್ತಿವೆ. ಈಕೆ ಘತ್ತರಗಿಯಲ್ಲಿ ನೆಲೆಸದೆ ಅಲ್ಲಿಂದ ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ದಬರಾಬಾದ್ ಎಂಬ ಗ್ರಾಮದ ಗಿಡವೊಂದರಲ್ಲಿ ನೆಲೆಸಿದ್ದಾಳೆ ಎಂದು ಹೇಳುತ್ತಿದ್ದರು.

ಆಮೇಲೆ ಆಕೆ ಅಲ್ಲಿಂದ ಜಾಗ ಖಾಲಿ ಮಾಡಿ ಶಹಾಪುರದ ಬೆಟ್ಟದಲ್ಲಿ ಬಂದು ನೆಲೆಸಿದ್ದಾಳೆಂದೂ, ಇದೀಗ ಸಗರ ಗ್ರಾಮದಲ್ಲಿ ಬಂದಿದ್ದಾಳೆಂದೂ ಏನೇನೋ ಪುರಾಣ ಬಿಚ್ಚಿಡುತ್ತಿದ್ದಾರೆ.

ವಿಚಿತ್ರ ಹರಕೆಗಳು

'ಅಕ್ಕ ಸಾಯ್ಲಿ ಅಕ್ಕನ ಗಂಡ ನನಗಾಗ್ಲಿ' ಎಂದು ಯಾರೋ ಒಬ್ಬ ಹೆಣ್ಣುಮಗಳು ಬೇಡಿಕೊಂಡು 'ಸಿಡಿ' ಆಡಿದ್ದಳಂತೆ. ಆದು ನಿಜ ಕೂಡ ಆಯ್ತಂತೆ! ಹೀಗೆ ಒಳ್ಳೆಯದು-ಕೆಟ್ಟದು ಎರಡನ್ನೂ ಆಶೀರ್ವದಿಸುವ ಈ ಭಾಗಮ್ಮ ದೇವಿಯ ಹೆಸರು ಹೇಳಿ, ಇದೀಗ ಪೂಜಾರಿಗಳು ಹೇಳಿದ್ದು ಸುಳ್ಳಾದರೂ, ಸತ್ಯವನ್ನು ನಂಬಿಕೊಂಡು ಬಂದಿರುವ ಏಕೈಕ ದೇವತೆ ಫತ್ತರಗಿ ಭಾಗಮ್ಮ. ಆದರೆ ಈ ಭಾಗಮ್ಮನ ಗುಡಿಯಲ್ಲಿ ಹರಿಜನರನ್ನು ಇಂದಿಗೂ ಸೇರಿಸಿಕೊಳ್ಳುವುದಿಲ್ಲ.

ನಮ್ಮ ಮೈ-ಮನಸ್ಸುಗಳಿಗೆ ಅಂಟಿದ ಮೌಢ್ಯದ ಜಿಡ್ಡನ್ನು ಯಾವಾಗ ತೊಳೆದುಕೊಳ್ಳುವೆವೋ ಆ ಭಾಗಮ್ಮನೇ ಬಲ್ಲಳು?
ಭಾಗಮ್ಮನ ಸುತ್ತು ಸುತ್ತುವರಿದಿರುವ ಈ ಕಾಕಪೋಕರೆಲ್ಲ ಸೇರಿ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕುತ್ತಿದ್ದಾರೆ.

ಕಳ್ಳರನ್ನು ಹಿಡಿದು ಕಾನೂನುಕ್ರಮ ಜರುಗಿಸಿ ಕಳ್ಳತನದಿಂದ ಬಾಧಿತರಾದ ಜನರಿಗೆ ನ್ಯಾಯ ಒದಗಿಸಬೇಕಾದ ಪೊಲೀಸರೇ ವ್ಯವಸ್ಥಿತ ಕಳ್ಳತನಕ್ಕಿಳಿದಿದ್ದಾರೆ ಎಂದರೆ ನಂಬುತ್ತೀರಾ? ನೀವು ಏನಂತೀರೋ ಗೊತ್ತಿಲ್ಲ, ಆದರೆ ಕರಾವಳಿಯ ಜನ ಮಾತ್ರ ಇದನ್ನು ನಂಬುತ್ತಾರೆ. ಏಕೆಂದರೆ ಮೊನ್ನೆ ಶನಿವಾರ ಇಂತಹದ್ದೊಂದು ಘಟನೆ ಬೆಳಕಿಗೆ ಬಂದಿರುವುದನ್ನು ಅವರು ಕಂಡಿದ್ದಾರೆ. ಹೌದು. ಅಂತಹ ಕುಖ್ಯಾತಿಗೆ ಪಾತ್ರನಾದ ಧೀರ ಪೊಲೀಸ್ ಅಧಿಕಾರಿ ಈಗಾಗಲೇ ಕರಾವಳಿಯಲ್ಲಿ ಚಿರಪರಿಚಿತರಾಗಿರುವ ಮಂಗಳೂರಿನ ಪಾಂಡೇಶ್ವರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ವೆಂಕಟೇಶ್ ಪ್ರಸನ್ನ!

ಈ ಹೆಸರನ್ನು ಎಲ್ಲೋ ಕೇಳಿದಂತಿದೆಯಲ್ಲ ಎಂದು ನಿಮಗನ್ನಿಸುತ್ತಿರಬಹುದು. ನಿಜ, ಕೇಳಿಯೇ ಇರುತ್ತೀರಿ. ಕರಾವಳಿಯಲ್ಲಿ ಸಂಚಲನ ಉಂಟುಮಾಡಿದ ಮೂಲ್ಕಿ ರಫೀಕ್ ಎಂಬ ರೌಡಿಯನ್ನು ಬಂಧಿಸಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವುದನ್ನು ಬಿಟ್ಟು ಅವನನ್ನು ಸುಳ್ಳು ಎನ್‌ಕೌಂಟರ್‌ನಲ್ಲಿ ಕೊಂದ ಧೀರನೀತ. ಅಲ್ಲದೇ ಈತನಿಗೆ ಅದ್ಯಾವ ಪರಾಕ್ರಮಕ್ಕೋ ಗೊತ್ತಿಲ್ಲ, ರಾಷ್ಟ್ರಪತಿ ಪ್ರಶಸ್ತಿಯೂ ದೊರಕಿದೆ.

ಕಳ್ಳರ ಕಳ್ಳ ಪೊಲೀಸ್ ವೆಂಕಟೇಶ್ ಪ್ರಸನ್ನ

ಮೊನ್ನೆ ನಡೆದದ್ದೇನು?

ಮಂಗಳೂರು

ಆರು ತಿಂಗಳ ಹಿಂದೆ ಉಡುಪಿಯಲ್ಲಿ ಈತ ಒಂದು ಇಂಡಿಗೋ ಕಾರನ್ನು ಸೀಜ್ ಮಾಡಿದ್ದ. ಆ ಕಾರು ವಾಸ್ತವದಲ್ಲಿ ಮಹಾರಾಷ್ಟ್ರದ ಯಾವುದೋ ಒಬ್ಬ ವ್ಯಕ್ತಿಗೆ ಸೇರಿದ್ದು. ಅದನ್ನು ಕಾರುಗಳ್ಳರು ಕಳ್ಳತನ ಮಾಡಿಕೊಂಡು ಕೊನೆಗೆ ಉಡುಪಿಯಲ್ಲಿ ವೆಂಕಟೇಶ್ ಪ್ರಸನ್ನನ ಕೈಯಲ್ಲಿ ಸಿಕ್ಕಿಹಾಕಿಕೊಂಡಿದ್ದರು. ಹೊಸದಾಗಿ ಥಳಥಳಿಸುವ ಕಾರು ನೋಡಿದೊಡನೆ ಜೊಲ್ಲು ಸುರಿಸಲಾರಂಭಿಸಿದ ಈತ ಅದನ್ನು ಲಪಟಾಯಿಸಲು ಸಂಚು ರೂಪಿಸಿದ. ಕೊನೆಗೆ ಆ ಕಾರಿನ ಒರಿಜಿನಲ್ ನಂಬರ್ ಪ್ಲೇಟ್‌ನ್ನು ಕಿತ್ತೆಸೆದು ಅದಕ್ಕೆ ಹೊಸದಾಗಿ ಕೆಎ 02, 3911 ಎಂದು ಹೊಸ ನಂಬರ್ ಪ್ಲೇಟನ್ನು ಹಾಕಿ ತನ್ನ ತಮ್ಮ ಸುಬ್ರಮಣ್ಯ ಎಂಬುವವನಿಗೆ ಬಳಸುವುದಕ್ಕಾಗಿ ಕೊಟ್ಟುಬಿಟ್ಟ. ಸೋನಿ ಎರಿಕ್ಸನ್ ಮೊಬೈಲ್‌ನ ಡೀಲರ್ ಆಗಿ ಕೆಲಸ ಮಾಡುತ್ತಿರುವ ಸುಬ್ರಮಣ್ಯನಿಗೆ ಓಡಾಟಕ್ಕೊಂದು ಹಿಡಿಬಿಟ್ಟ ಕಾರು ಸಿಕ್ಕುಬಿಟ್ಟಿತು. ಹೇಳೋರು ಕೇಳೋರು ಯಾರೂ ಇಲ್ಲದೇ ಇಂತಹದ್ದೊಂದು ಘನಂಧಾರಿ ಕೆಲಸವನ್ನು ಮಾಡಿದ್ದರು ಈ ಮಹಾನುಭಾವ ಸಹೋದರರು.

ಈ ವಿಚಾರ ಗೊತ್ತಿದ್ದ ಕೆಲವರು ಗುಪ್ತವಾಗಿ ಬೆಂಗಳೂರಿನ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದರು. ಲೋಕಾಯುಕ್ತ ಪೊಲೀಸರು ನಡೆಸಿದ ಗುಪ್ತ ತನಿಖೆಯಲ್ಲಿ ತಿಳಿದುಬಂದಿದ್ದೇನೆಂದರೆ ಇಂಡಿಗೋ ಕಾರಿಗೆ ಹಾಕಿದ್ದ ಹೊಸ ನಂಬರ್ ಪ್ಲೇಟ್‌ನಲ್ಲಿನ ವಾಹನ ಸಂಖ್ಯೆ ಕೆ.ಎ. 02, 3911 ಬೆಂಗಳೂರಿನ ರಾಜಾಜಿನಗರದ ರಾಣಿ ಎಂಬುವವರ ಹೆಸರಿನಲ್ಲಿ ರಜಿಸ್ಟರ್ಡ್ ಆಗಿದೆ. ತಡಮಾಡದೇ ಬೆಂಗಳೂರಿನ ಲೋಕಾಯುಕ್ತ ಪೊಲೀಸರು ಸೀದಾ ಮಂಗಳೂರು ಪೊಲೀಸರಿಗೆ ಸುದ್ದಿಮುಟ್ಟಿಸಿ ಕಾರ್ಯಪ್ರವೃತ್ತರಾಗುವಂತೆ ಸೂಚಿಸಿಯೇ ಬಿಟ್ಟರು. ಮಂಗಳೂರು ಲೋಕಾಯುಕ್ತ ಪೊಲೀಸರೂ ತಡಮಾಡದೆ ಲೋಕಾಯುಕ್ತ ಎಸ್.ಪಿ. ಚಂದ್ರಶೇಖರ್ ಪ್ರಸಾದ್ ಮತ್ತು ಡಿವೈಎಸ್‌ಪಿ ಬಿ.ಜೆ. ಭಂಡಾರಿ ಎಂಬ ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯಾಚರಣೆಗಿಳಿದು ಪೊಲೀಸ್ ಇನ್ಸ್‌ಪೆಕ್ಟರ್ ವೆಂಕಟೇಶ್ ಪ್ರಸನ್ನನ ಮನೆಯ ಮೇಲೆ ರೇಡ್ ಮಾಡಿಯೇ ಬಿಟ್ಟರು. ಹೀಗೆ ಕೊನೆಗೂ ಕಳ್ಳತನ ಮಾಡಿದ್ದ ಕಾರನ್ನೇ ಕಳ್ಳತನ ಮಾಡಿದ್ದ ವೆಂಕಟೇಶ್ ಪ್ರಸನ್ನ ಸಿಕ್ಕಿಹಾಕಿಕೊಂಡ.

ವೆಂಕಟೇಶ್ ಪ್ರಸಾದ್ ಮೂಲತಃ ಚೆಡ್ಡಿ ರಾಜಕೀಯದವನು. ಕರಾವಳಿಯಲ್ಲಿ ಸಂಘಪರಿವಾರದ ಭಯೋತ್ಪಾದಕರು ನಡೆಸುತ್ತಿರುವ ಭಯದ ಅಭಿಯಾನಕ್ಕೆ ಪೊಲೀಸ್ ಇಲಾಖೆಯ ವತಿಯಿಂದ ಚೆಡ್ಡಿ ಕೊಟ್ಟು ಬೆಂಬಲಿಗನಾಗಿ ನಿಂತವನು. ಮೂಲ್ಕಿ ರಫೀಕ್ ಎಂಬ ಮುಸ್ಲಿಮ್ ರೌಡಿಯನ್ನು ಕಾನೂನುಬಾಹಿರವಾಗಿ ಸುಳ್ಳು ಎನ್‌ಕೌಂಟರ್‌ನಲ್ಲಿ ಕೊಂದು ಚೆಡ್ಡಿಗಳಿಂದ ಬೆನ್ನು ತಟ್ಟಿಸಿಕೊಂಡವನು. ಅಲ್ಲದೇ ಮಹಾ ಪ್ರಚಾರಪ್ರಿಯ. ಪತ್ರಿಕೆಗಳಲ್ಲಿ, ಟಿವಿಗಳಲ್ಲಿ ತನ್ನ ಹೆಸರು ಫೋಟೋ ಬರುತ್ತದೆಂದರೆ ಮಾಡೋ ಕೆಲಸ ಎಲ್ಲ ಬಿಟ್ಟು ಹಲ್ಲುಕಿರಿಯುತ್ತ ನಿಲ್ಲುತ್ತಿದ್ದ ಭಂಡ. ದುಡ್ಡು ಮಾಡುವುದಕ್ಕಾಗಿ ಎಂಥ ಹೇಸಿಗೆ ಕೆಲಸ ಮಾಡಲೂ ಸಿದ್ಧನಿರುವ ಮೂರೂ ಬಿಟ್ಟವನು. ತಮ್ಮ ಬೆಂಬಲಕ್ಕೆ ನಿಂತ ಇಂತಹ ಮಹಾಪರಾಕ್ರಮಿ ಕಳ್ಳನಿಗೆ ಈಗ ಚೆಡ್ಡಿಗಳು ಹೇಗೆ ಬೆಂಬಲಿಸುತ್ತಾರೋ ನೋಡಬೇಕು.


-ಪ್ರಕಾಶ್ ಪಿಂಟೊ

ತಿಳಿದುಬಂದಿತು. ನಾನವರಿಗೆ ಕೇಳಿದೆ. "ನಿಮ್ಮ ಮದ್ರಾಸ್‌ನಲ್ಲಿ ಬೇಕಾದಂಥ ವೈದ್ಯರುಗಳಿದ್ದಾರೆ. ಆದರೆ ನೀವು ಮಾತ್ರ ಅಷ್ಟು ದೂರದಿಂದ ಒಬ್ಬ ಹಳ್ಳಿಯ ಮುತ್ಯಾನನ್ನು ಹುಡುಕಿಕೊಂಡು ಹೊರಟಿದ್ದೀರಿ?"

"ನೋಡಿ, ನಾವು ಇಲ್ಲಿಗೆ ಬರುತ್ತಿರಲಿಲ್ಲ, ಬೆಂಗಳೂರಿನಲ್ಲಿರುವ ನಮ್ಮ ಸಂಬಂಧಿಕರು ಟೀವಿ 9 ನಲ್ಲಿ ಈ ಮುತ್ಯಾನ ಬಗ್ಗೆ ಬಂದಿರುವುದನ್ನು ನೋಡಿ ನನಗೆ ಫೋನಾಯಿಸಿದರು. ನಮ್ಮ ತಾಯಿಯನ್ನು ಡಾಕ್ಟರಿಗೆ ತೋರಿಸಿ ಸಾಕಾಗಿತ್ತು, ಇಲ್ಲಾದ್ರೂ ಕಡಿಮೆಯಾದೀತು ಅಂತ ನಾವು ಬಂದೀವಿ" ಎಂದು ಹೇಳಿದ ವೆಂಕಟಾಚಲ. ಅಷ್ಟರಲ್ಲಿ ಸಗರ ಬಂತು. ನಿರೀಕ್ಷಿಸಿದಂತೆ ನಮಗಿಂತ ಮೊದಲೇ ಬಂದು ನಿಂತಿದ್ದ ಹತ್ತಿಪ್ಪತ್ತು ಜೀಪುಗಳು, ಹತ್ತೆಂಟು ಕಾರುಗಳು, ನೂರಾರು ಬೈಕ್‌ಗಳು ಅಲ್ಲಿ ಗೋಚರಿಸಿದವು.

ಮಾರುತಿ ಮುತ್ಯಾ ಇಲ್ಲಿದ್ದಾನೆ ಬನ್ನಿ ಅಂತ ಯಾರೋ ನಮ್ಮನ್ನು ಕರೆದುಕೊಂಡು ಹೋದರು. ಮೊದಲು ದೇವಿಯ ದರ್ಶನ ಆಗಬೇಕೆಂದರು. ನಾನು ಆ ದೇವಿಯ ಕೋಣೆಯೊಳಗೆ ಪ್ರವೇಶಿಸಬೇಕಾದರೆ ವಿಪರೀತ ನೂಕುನುಗ್ಗಲು. ಅಂಗಿಯ ಗುಂಡಿ ಕಿತ್ತುಕೊಂಡು ಕೆದರಿದ ಕೂದಲಿನೊಂದಿಗೆ ಒಳಗಡೆ ಪ್ರವೇಶಿಸಿದಾಗ ಅಲ್ಲೆಲ್ಲ ಜನ ತುಂಬಿದ್ದರು. ಅವರುಗಳಲ್ಲಿ ದೂರದ ಮಂಗಳೂರು, ಬೆಂಗಳೂರು, ಹುಬ್ಬಳ್ಳಿಯಿಂದ ಬಂದಿದ್ದ ಜೆ.ವಿ. ಹೆಗಡೆ, ಪಾಂಡುರಂಗರಾವ್, ಮುತ್ತಣ್ಣ ದೊಡ್ಡಾ, ರಮೇಶ್, ಮಲ್ಲಪ್ಪ ಮುಂತಾದವರು ತಮ್ಮ ಹೆಂಡತಿ, ತಾಯಿ, ಮಕ್ಕಳನ್ನು ಕರೆತಂದು ದರ್ಶನಕ್ಕಾಗಿ ಕಾದು ಕುಳಿತಿದ್ದರು. ಬಹುತೇಕರು ನಾನಾ ರೋಗರುಜಿನಗಳಿಂದ ಬಳಲಿ ಬೆಂಡಾಗಿದ್ದರು.

ಗ್ರಾಮದ ಯುಕೆಪಿ ಕ್ಯಾಂಪಿನ ವಿಶಾಲವಾದ ಮೈದಾನದಲ್ಲಿ ಮಾರುತಿ ಮುತ್ಯಾನ ದರ್ಶನಕ್ಕಾಗಿ ಸಾವಿರಾರು ಜನ ಕ್ಯೂ ನಿಂತಿದ್ದರು. ಮುತ್ಯಾನ ಕೋಣೆಯೊಳಗೆ ಭಾಗ್ಯವಂತಿ ದೇವಿಯ ದೊಡ್ಡ ಭಾವಚಿತ್ರ ನೇತುಹಾಕಲಾಗಿತ್ತು. ಅದರ ಕೆಳಗಡೆಯ ಜಗುಲಿಯ ಮೇಲೆ ಮತ್ತೊಂದು ಸಣ್ಣ ಫೋಟೋ, ತಟ್ಟೆಯಲ್ಲಿ ಅರಿಶಿಣ, ಕುಂಕುಮವಿತ್ತು. ಜಗಲಿ ತುಂಬ ನಿಂಬೆಹಣ್ಣು, ಭಂಡಾರ, ಬೀಡಿ, ಸಾಜನ್ ಅಡಿಕೆಯ ಚೀಟುಗಳೇ ಕಾಣುತ್ತಿದ್ದವು. ಕೋಣೆಯ ತುಂಬ ಗೌಜು-ಗದ್ದಲ, ಊದುಬತ್ತಿಯ ವಾಸನೆ ತುಂಬಿಹೋಗಿತ್ತು. ಮೈಕಿನ ಆರ್ಭಟ, ದಲ್ಲಾಳಿಗಳ ಓಡಾಟ, ಹೆಣ್ಣುಮಕ್ಕಳ ಬಳೆಯ ಸಪ್ಪಳವಿತ್ತು.



ದರ್ಶನಕ್ಕಾಗಿ ದೂರದ ಊರುಗಳಿಂದ ಬಂದಿರುವ ವಾಹನಗಳು

ಆದರೆ ಮಾರುತಿ ಮುತ್ಯಾ ಕಾಣಿಸಲಿಲ್ಲ. ಅವರು ಎಲ್ಲಿದ್ದಾರೆ ಎಂಬುದೇ ನನಗೆ ಬೇಗ ಗೊತ್ತಾಗಲಿಲ್ಲ. ಆಗ ಅಲ್ಲಿಯೇ ಇದ್ದ ಗ್ರಾಮದ ದಳಪತಿ ಗುರುಲಿಂಗಪ್ಪ ಗೌಡ ಸಿಕ್ಕರು. "ನಿಮಗೆ ಮುತ್ಯಾನ ಭೇಟಿ ಮಾಡಿಸುತ್ತೇನೆ ಸ್ವಲ್ಪ ನಿಲ್ಲಿ" ಎಂದು ಹೇಳುವಷ್ಟರಲ್ಲಿ ಅಲ್ಲಿಯೇ ಇದ್ದ ಅಮೀನರಡ್ಡಿ, ಬನ್ನಪ್ಪಗೌಡ ಓಡಿಬಂದು "ನೀವು ಪೇಪರ್‌ನವರೇ?" ಎಂದು ಕೇಳಿದರು. ಅದಕ್ಕೆ ನಾನು ಹೌದು ಎಂದು ತಲೆ ಹಾಕಿದೆ. ಆಗ ಅವರು "ಪೇಪರಿನೋರಿಗೆ ನಮ್ಮ ಮುತ್ಯಾ ಪರ್ಸನಲ್ ಆಗಿ ಭೇಟಿ ಆಗಲಾರರು. ಈಗಾ ಗಲೇ ಶಹಾಪುರ ತಹಶೀಲ್ದಾರ್ ಡಾ. ಎಸ್.ಎಲ್. ವಣಕಿಹಾಳ್ ಹಾಗೂ ಇನ್ನಿತರ ಪತ್ರಕರ್ತರು ಬಂದು ಹೋಗ್ಯಾರ. ಮೇಲಾಗಿ ಈಗ ಮಂದಿ ಬಾಳ ನಿಂತಾರ" ಎಂದರು.



ದರ್ಶನಕ್ಕಾಗಿ ಸಾಲುಗಟ್ಟಿ ನಿಂತಿರುವ ಮಹಿಳೆಯರು

ಆಗ ಅಲ್ಲಿಯೇ ನಿಂತಿದ್ದ ಮಾಜಿ ತಾ.ಪಂ. ಸದಸ್ಯ ಸಿದ್ಲಿಂಗಪ್ಪಗೌಡ ಬಂದು "ಸ್ವಲ್ಪ ಹೊತ್ತು ನಿಲ್ರಿ, ನಿಮಗೆ ದರ್ಶನ ಆಗಬಹುದೇನೋ" ಎಂದು ಮುಂದೆ ಮುಂದೆ ನಡೆದರು. ನಾನು ಅವರನ್ನು ಹಿಂಬಾಲಿಸಿದೆ. ಭಾಗ್ಯವಂತಿ ದೇವಿಯ ಭಾವಚಿತ್ರದ ಕೆಳಗಡೆ ಜಗಲಿಯ ಮುಂದೆ ಕೃಶಕಾಯನಾದ ಕಪ್ಪಗಿನ, ಕುರುಚಲು ಗಡ್ಡದ ವ್ಯಕ್ತಿಯೊಬ್ಬ ಹಸಿರುಬಣ್ಣದ ಶಾಲು ಹೊದ್ದುಕೊಂಡು ಕುಳಿತಿದ್ದ. ಆತನ ಪಕ್ಕದಲ್ಲಿ ಒಬ್ಬ ಗಂಡಸು (ಮುತ್ಯಾನ ಮಗ), ಇಬ್ಬರು ಹೆಣ್ಣುಮಕ್ಕಳು ಕುಳಿತಿದ್ದರು.

ವಯಸ್ಸಾಗಿರುವ ಹೆಣ್ಣುಮಗಳು ಆತನ ಕಿವಿಯಲ್ಲಿ ಅದೇನೋ ಉಸಿರಿದಂತೆ ಮಾಡುತ್ತಿದ್ದಳು. ಮಲ್ಲಣ್ಣ, ಶರ್ಮುದ್ದೀನ್ ಮುಲ್ಲಾ, ಅಂಬರೀಷ ಗೌಡ ಮಲದಕಲ್ ಮುಂತಾದವರು ತಟ್ಟೆಯಲ್ಲಿಟ್ಟಿದ್ದ ನೂರರ, ಐದುನೂರರ, ಸಾವಿರದ ನೋಟುಗಳನ್ನು ಎಣಿಸುತ್ತಾ ಎಣ್ಣೆ ನಿಂಬೆಕಾಯಿ, ದಾಸೋಹ, ಹ್ಯಾಂಡ್‌ಬಿಲ್ ಎಂಬಿತ್ಯಾದಿಯಾಗಿ ಮಾತಾಡುತ್ತಿದ್ದರು. ನೋಡಲಿಕ್ಕೆ ಒಂಥರಾ ಇರುವ ಮಾರುತಿ ಮುತ್ಯಾ ಒಂದೇ ಸಮ ಕೆಮ್ಮುತ್ತಿದ್ದ, ದರ್ಶನ ನೀಡಿ ಬಳಲಿದಂತಿದ್ದ.

ಇಂಥವನು ಇನ್ನೊಬ್ಬರ ರೋಗವನ್ನು ಅದು ಹೇಗೆ ತಾನೆ ಗುಣಪಡಿಸುತ್ತಾನೆ ಎಂದೆನಿಸುತ್ತಿದ್ದರೂ ಸುಮ್ಮನಿದ್ದೆ. ಮತ್ತೆ ಆತನನ್ನು ಗಮನಿಸಿದೆ. ಮೈಮೇಲೆ ಮಾಸಿದ ಹಸಿರು ಶಾಲು, ಕೊಳೆಯಾದ ಬನಿಯನ್, ಅಷ್ಟೇ ಕೊಳೆಯಾದ ಧೋತರ. ಆತನ ಪಕ್ಕದಲ್ಲಿ ಹತ್ತಾರು ಬೀಡಿ ಕಟ್‌ಗಳು ಇದ್ದವು. ಒಂದು ಕಡೆ ಭಕ್ತರು ತಂದಿದ್ದ ನಿಂಬೆಕಾಯಿ, ಭಂಡಾರ ಮಂತ್ರಿಸಿದಂತೆ ಮಾಡಿ ಅವರಿಗೆ ಊದಿನಕಡ್ಡಿಯ ವಾಸನೆ ತೋರಿಸಿ 'ಸಿಡಿ' ಆಡುವ ಎರಡು ಕಬ್ಬಿಣದ ಕೊಂಡಿಗಳನ್ನು ಮೈಮೇಲೆ ಆಡಿಸುತ್ತಿದ್ದ.

ಈ ಮಾರುತಿ ಮುತ್ಯಾ ಬೀಡಿ ಸೇದುವುದಕ್ಕೆ ಲೆಕ್ಕವಿಲ್ಲ. ಆತನ ಸಮೀಪ ಹೋಗಿ ನಿಂತರೆ ಒಂಥರಾ ಕಮಟು ವಾಸನೆ. ಇದರಿಂದಾಗಿ ನನಗೆ ವಾಂತಿ ಬಂದಂತೆ ಆಯಿತು. ಸ್ವಲ್ಪ ದೂರ ಸರಿದು ನಿಂತುಕೊಂಡೆ. ಕ್ಯೂನಲ್ಲಿ ನಿಂತಿದ್ದ ರೋಗಿಗಳು ಒಬ್ಬೊಬ್ಬರಾಗಿ ಬರತೊಡಗಿದರು. ಮಾರುತಿ ಮುತ್ಯಾ ಅವರನ್ನು "ಏನಾಗಿದೆ ನಿಮಗೆ?" ಎಂದು ಕೇಳುತ್ತಿದ್ದ. ಅವರು ತಮ್ಮ ಕೀಲುನೋವು, ಮಂಡಿನೋವು, ಅಂಗವೈಕಲ್ಯ ಗುತ್ತಿಗೆ ಕೆಲಸದ ಬಗ್ಗೆ, ಗಂಡ ಬಿಟ್ಟ ಬಗ್ಗೆ, ಹೆಂಡತಿ ಓಡಿಹೋದ ಬಗ್ಗೆ ವಿವರಿಸುತ್ತಿದ್ದರು. ಆಗ ಮಾರುತಿ ಮುತ್ಯಾ ಅವರ ಮೈಯನ್ನು ಕೊಂಡಿಯಿಂದ ಸವರುತ್ತಾ "ಇನ್ನಮ್ಯಾಲ ನಿನಗೆ ಬಿಲ್‌ಕುಲ್ ಆರಾಮ ಆಗ್ತಾದ. ಈಗಾಗಲೇ ನಿನಗೆ ಪಾದನಸ್ಲಿಕತ್ಯಾದ ಹೌದಿಲ್ಲ?" ಎಂದು ಪ್ರಶ್ನಿಸುತ್ತಿದ್ದ. ಬಂದವರೆಲ್ಲರೂ ಹೌದೆಂದು ತಲೆಬಾಗಿ ಕೈಗೆ ಬಂದಷ್ಟು ಕಾಣಿಕೆ ಅರ್ಪಿಸಿ ಹೋಗುತ್ತಿದ್ದರು.

ಪಾದಮುಟ್ಟಿ ನಮಸ್ಕಾರ ಮಾಡಲು ಬಂದವರೆಲ್ಲರಿಗೂ "ನನಗಲ್ಲ್ಯಾಡ ಆ ಭಾಗವ್ವಾಯಿಗೆ ಮಾಡ್ರಿ" ಎಂದು ವಿನಯ ಪ್ರದರ್ಶಿಸುತ್ತಿದ್ದ. ಬಂದವರೆಲ್ಲರೂ ಭಂಡಾರ ಹಚ್ಚಿಕೊಂಡು ಜನಮರುಳೋ ಜಾತ್ರೆಮರುಳೋ ಎಂದು ಹೊರಡುತ್ತಿದ್ದರು.

-ವರದಿಗಾರ

ಮುಗ್ಧ ಮುತ್ಯಾನಿಗೆ ಗಂಟುಬಿದ್ದಿರುವ ಜಾಟಾ ಶಿಷ್ಯರು

ಮೂಲತಃ ಅಫ್ಜಲ್ಪುರ ತಾಲ್ಲೂಕಿನವರಾದ ಮಾರುತಿ ಹೊನ್ನಪ್ಪ ಹಡಪದ ವೃತ್ತಿಯಿಂದ ಕ್ಷೌರಿಕನಾಗಿದ್ದ. ಘತ್ತರಗಿ ಭಾಗ್ಯವಂತಿಯ ದೇವಸ್ಥಾನ ಇವರ ಗ್ರಾಮಕ್ಕೆ ಸಮೀಪವಿರುವುದರಿಂದ ಆ ಪ್ರಭಾವಕ್ಕೆ ಒಳಗಾಗಿದ್ದ ಈತ, ಈ ಮೊದಲು ಸಗರ ಗ್ರಾಮದ 'ಮರ್ಸನರ್' ಓಣಿಯಲ್ಲಿ ಸಣ್ಣ ಗುಡಿಯೊಂದನ್ನು ಕಟ್ಟಿಕೊಂಡು ಪೂಜೆ ಮಾಡಲು ಆರಂಭಿಸಿದ. ಬರುಬರುತ್ತಾ ದೇವಿಯ ಹೇಳಿಕೆ ಶುರು ಮಾಡಿದ. ಮಂಗಳವಾರ-ಶುಕ್ರವಾರದಂದು ಬೇರೆ ಊರಿನಿಂದ ಜನ ಬಂದು ಕೇಳಿಹೋಗುತ್ತಿದ್ದರು.

ಜನ ಹೋಗಿಬರುವುದನ್ನು ಕಂಡ ಇಲ್ಲಿನ ಸಿದ್ದಪ್ಪಜಾಯಿ, ಬಸವರಾಜಮರ್ಸ, ಮಂಜುನಾಥ ಉಪ್ಪಾರ, ಶಿವಲಿಂಗಪ್ಪಚಾರಗುಂಡ ಎಂಬ ಜಾಟಾದಿ ಶಿಷ್ಯರು ಮಾರುತಿಯ ಮುಗ್ಧತೆಯನ್ನು ದುರುಪಯೋಗಪಡಿಸಿಕೊಂಡರು. ಬಂದ ಭಕ್ತಾದಿಗಳ ಹತ್ತಿರ ನೂರು, ಐನೂರು, ಸಾವಿರ ಕೊಡಬೇಕೆಂದು ಕಾಡಿ-ಬೇಡುತ್ತಿದ್ದರು. ಇದು ಮುತ್ಯಾನಿಗೆ ಸರಿಕಾಣಿಸಲಿಲ್ಲ, ಆಗ ಆತನನ್ನು ಇಲ್ಲಿಂದ ಓಡಿಸಿದರು.

ಇದನ್ನು ಕಂಡ ಗ್ರಾಮದ ಕೆಲ ಪ್ರಮುಖರು ಸೇರಿ ಆತನನ್ನು ಯುಕೆಪಿ ಕ್ಯಾಂಪಿನಲ್ಲಿ ತಂದಿರಿಸಿದರು. ಆದರೆ ಇಲ್ಲಿಗೆ ಭಕ್ತಾದಿಗಳು ಬರುವುದು ಕಡಿಮೆಯಾಯ್ತು, ಹೀಗಾಗಿ ತಮ್ಮ ಕುಲ ಕಸುಬಾದ ಕ್ಷೌರಿಕ ವೃತ್ತಿಯನ್ನು ಮತ್ತೆ ಆರಂಭಿಸಿದ ಮುತ್ಯಾ. ಆಗ ಸಿದ್ಲಿಂಗಪ್ಪಗೌಡ ಮುಂತಾದವರು ಬೈಯ್ದು ಊರುಬಿಟ್ಟು ಹೊರಗಡೆ ಹೋಗದೆ ಇಲ್ಲಿಯೇ ದೇವಿಯ ಸೇವೆ ಮಾಡಿಕೊಂಡಿರಲು ಹೇಳಿದರು.

ಸುಮಾರು 10-15 ವರ್ಷಗಳಿಂದ ಹೇಳುವುದು-ಕೇಳುವುದು ಮಾಡುತ್ತಿದ್ದ ಮಾರುತಿಯ ಹತ್ತಿರ, ಗ್ರಾಮದ ಯಾರೊಬ್ಬರೂ ಹೋಗದಿರುವುದು ಆಶ್ಚರ್ಯ. ಆದರೆ ತೀರಾ ಇತ್ತೀಚೆಗೆ ಗ್ರಾಮದ ಕೆಲ ಮೈಗಳ್ಳರು, ಪುಢಾರಿ ಹುಡುಗರು ಸೇರಿಕೊಂಡು Tv 9 ಎಂಬ ತರಲೆಗಳಿಗೆ ಈ ಸುದ್ದಿ ಮುಟ್ಟಿಸಿವೆ. ಇಂಥದಕ್ಕಾಗಿ ಕಾದು ಕುಳಿತಂತಿರುವ ಅವರುಗಳು ಇಲ್ಲಿಯವರೆಗೆ ಬಂದು "ಹೀಗೂ ಉಂಟೆ?" ಎಂದು ರೋಚಕ ಕತೆ ಹೇಳಿದ್ದಾರೆ.

ಇದನ್ನು ಟಿವಿಯಲ್ಲಿ ಬಿತ್ತರಿಸಿದರಲ್ಲದೆ ಸಂಪರ್ಕಿಸುವ ವಿಳಾಸ, ಫೋನ್ ನಂಬರ್ ಕೊಟ್ಟಿದ್ದಾರೆ. 'ಜನ ಮರುಳೋ ಜಾತ್ರೆ ಮರುಳೋ' ಎಂಬಂತೆ ಜನ ತಂಡೋಪತಂಡವಾಗಿ ಗ್ರಾಮಕ್ಕೆ ಬರುತ್ತಿದ್ದಾರೆ. ಇದರಿಂದಾಗಿ ಶಹಾಪುರ-ಸುರಪುರ ಲಾಡ್ಜ್ ಹಾಗೂ ಹೋಟೆಲ್‌ಗಳು ಭರ್ತಿಯಾಗುತ್ತಿವೆ. ಮಾರುತಿ ಮುತ್ಯಾನ ಸ್ಥಳದಲ್ಲೀಗ ಕಾಯಿ-ಕರ್ಪೂರದ ಭರ್ಜರಿ ಮಾರಾಟ ನಡೆದಿದೆ.

ಇದಲ್ಲದೆ ಈಗಾಗಲೇ ಮುತ್ಯಾನ ಹೆಸರಿನ ಮೇಲೆ ಟ್ರಸ್ಟ್‌ವೊಂದು ರಚನೆಯಾಗಿದೆ. ಆ ಸಮಿತಿಯಲ್ಲಿ ಸಿದ್ಲಿಂಗಪ್ಪಗೌಡ, ಬನ್ನಪ್ಪಗೌಡ, ಶರ್ಮುದ್ದೀನ್, ಅಂಬರೀಶಗೌಡ, ಅಮೀನ್‌ರೆಡ್ಡಿ ಮುಂತಾದವರಿದ್ದಾರೆ. ಇದೀಗ ದಾಸೋಹದ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳುತ್ತಾರಾದರೂ ಕುಡಿಯಲು ನೀರಿನ ವ್ಯವಸ್ಥೆ ಮಾಡಿಲ್ಲ. ಸಿಕ್ಕಸಿಕ್ಕವರು ತಮ್ಮ ಕೈಗೆ ಬಂದಷ್ಟು ಹಣ ಬಾಚಿಕೊಳ್ಳುತ್ತಿದ್ದಾರೆ. ದಿನವೊಂದಕ್ಕೆ ಹತ್ತಿಪ್ಪತ್ತು ಸಾವಿರ ಕಾಣಿಕೆ ಜಮೆಯಾಗುತ್ತಿದೆ. ಆದರೆ ಮಾರುತಿ ಮುತ್ಯಾನ ಜಾಟಾದಿ ಶಿಷ್ಯರು 'ಉಬ್ಬ ಮುಂದೇ ಮುದ್ದೇಲಿ ಉಂಡವನೇ ಜಾಣ' ಎಂಬಂತೆ ವರ್ತಿಸುತ್ತಿದ್ದಾರೆ. ಇಂಥ 'ಸಮಾಜ ವಂಚನೆ' ಕೆಲಸಕ್ಕೆ ಪೊಲೀಸ್ ಕಾವಲು ಬೇರೆ ಕೇಡು!

ಬಾಗ್ದಾದ್ ಬೆಂಕಿ

ಇರಾಕ್ ಹಾಗೂ ಅಫಘಾನಿಸ್ತಾನದಲ್ಲಿ ಎಷ್ಟು ಜನ ಸತ್ತಿದ್ದಾರೆಂಬುದನ್ನು ಕೇವಲ ಸಂಖ್ಯೆ ಲೆಕ್ಕದಲ್ಲಿ ಸುದ್ದಿ ಬರೆಯುವ ಪತ್ರಿಕೆಗಳಿಗೂ, ಮತ್ತದನ್ನಷ್ಟೇ ಓದಿ ಮರೆತುಬಿಡುವ ಜನರಿಗೂ ಅಲ್ಲಿನ ಭೀಕರ ಪರಿಸ್ಥಿತಿಗಳ ಅಂದಾಜು ಇರಲಿಕ್ಕಿಲ್ಲ. ಅಮೆರಿಕಾದ ಆಕ್ರಮಣದ ನಂತರ ಸಕಾಲದಲ್ಲಿ ವೈದ್ಯಕೀಯ ಚಿಕಿತ್ಸೆ ಸಿಗದೆ ಸತ್ತವರ ಸಂಖ್ಯೆಯೇ ಆರೂವರೆ ಲಕ್ಷ ಎಂದು ಇಂಗ್ಲೆಂಡಿನ 'The Lancet' ಎಂಬ ವೈದ್ಯಕೀಯ ಪತ್ರಿಕೆ ಅಂದಾಜು ಮಾಡಿದೆ. ಕೇವಲ ಬಾಗ್ದಾದ್ ಒಂದರಲ್ಲೇ ಅರ್ಧಕ್ಕಿಂತಾ ಹೆಚ್ಚು ವೈದ್ಯರು ಅಮೆರಿಕಾ-ಇಂಗ್ಲೆಂಡ್ ಸೈನಿಕರ ಕಾಟ ತಾಳಲಾರದೆ ದೇಶ ಬಿಟ್ಟು ಹೋಗಿದ್ದಾರೆ. "ನೀವು ಇರಾಕಿ ಹೋರಾಟಗಾರರಿಗೆ ಚಿಕಿತ್ಸೆ ನೀಡುತ್ತಿದ್ದೀರಾ" ಎಂಬ ನಿತ್ಯ ಕಿರುಕುಳ, ಶಿಕ್ಷೆಯ ಭೀತಿ ಅಲ್ಲಿ ಅಂತಾ ಅಮಾನವಿಯ ಸ್ಥಿತಿ ಸೃಷ್ಟಿಸಿದೆ. ಹಾಗಾಗಿ ಅಲ್ಲಿ ತಮ್ಮ ವೃತ್ತಿ ನಡೆಸಲಾಗದ ಎರಡು ಸಾವಿರ ವೈದ್ಯರು ಈಗ ಇಂಗ್ಲೆಂಡಿಗೆ ವಲಸೇ ಹೋಗಿ ನೆಲೆಸಿದ್ದಾರೆ. ಗ್ಲಾಸ್ಗೋ ಬಾಂಬಿಂಗ್ ಆರೋಪಿ ಡಾ. ಬಿಲಾಲ್ ಅಹಮದ್ ಕೂಡ ಅಂತವರಲ್ಲಿ ಒಬ್ಬನಾಗಿದ್ದಾನೆ. ಇರಾಕಿಗೆ ಪ್ರಜಾಪ್ರಭುತ್ವ ದಯಪಾಲಿಸಲು ಕಾಲಿಟ್ಟ ಅಮೆರಿಕಾ-ಇಂಗ್ಲೆಂಡ್‌ಗಳು ಇದುವರೆಗೂ 10 ಲಕ್ಷ ಇರಾಕಿಗಳಿಗೆ ಸಾವಿನ ದಾರಿ ತೋರಿಸಿವೆ. ಒಂದು ಕಾಲದಲ್ಲಿ ಸೆಕ್ಯುಲರ್ ಹಾಗೂ ಸಂಪತ್ಭರಿತ ದೇಶವಾಗಿದ್ದ ಇರಾಕ್ ಈಗ ರೌರವ ನರಕವಾಗಿ ಬದಲಾಗಿದೆ.

ಜನ ರೊಚ್ಚಿಗೇಳಲು, ಸೂಯಿಸೈಡ್ ಬಾಂಬರ್‌ಗಳಾಗಿ ರೂಪಾಂತರಗೊಳ್ಳಲು ಇಂತಾ ನೂರು ಕಾರಣಗಳನ್ನು ಅಮೆರಿಕಾ ಅಲ್ಲಿ ಸೃಷ್ಟಿಸಿದೆ.

ಬೇವು ಬಿತ್ತಿ ಮಾವು ಬೆಳೆಯಲಾಗದೆಂಬ ಸತ್ಯ ನಮಗೂ ಗೊತ್ತಿರಬೇಕು ತಾನೆ? ಈ ಎಲ್ಲಾ ವಿದ್ಯಮಾನಗಳನ್ನು ಅರ್ಥ ಮಾಡಿಕೊಂಡಿದ್ದ ಕಫೀಲ್ ಬೆಂಗಳೂರಿಗೆ ಬಂದಾಗ ಒಮ್ಮೆ ಚೆಚೆನ್ಯಾ ಮುಸ್ಲಿಮರ ಸ್ಥಿತಿಗತಿ ಬಗ್ಗೆ ಸಭೆ ನಡೆಸಿ, ಭಾಷಣ ಮಾಡಿದ್ದ ಎನ್ನಲಾಗಿದೆ. ಬೆಂಗಳೂರು ಪೊಲೀಸರಿಗೆ ಆತಂಕವಾಗುತ್ತಿರುವುದು ಈ ಕಾರಣಗಳಿಗೇನೆ. ಈ ರೀತಿಯ **indoctrination** ಗಳು ಇಲ್ಲಿನ ಮುಸ್ಲಿಂ ಯುವಕರಿಗೂ ಜೆಹಾದಿನ ದಾರಿ ತೋರಿಸಿದರೆ ಅದನ್ನು ನಿಯಂತ್ರಿಸಲಾದೀತೆ?

ರಾಜ್ಯ ಪೊಲೀಸರ ಎದಿರು ಈಗ ಎರಡು ಮುಖ್ಯ ಜವಾಬ್ದಾರಿಗಳಿವೆ. ಅದರಲ್ಲಿ ಮೊಟ್ಟ ಮೊದಲನೆಯದು ಯಾವುದೆಂದರೆ ಮುಸ್ಲಿಮರ ವಿರುದ್ಧ ವಿನಾಕಾರಣ ದೌರ್ಜನ್ಯ ನಡೆಸುತ್ತಾ ಬಲಿಪಶುಗಳನ್ನಾಗಿಸುತ್ತಿರುವ ಇಲ್ಲಿನ ಸಂಘ ಪರಿವಾರದ ಫ್ಯಾಸಿಸಂಗೆ ಕಡಿವಾಣ ಹಾಕುವುದು. ಇನ್ನೊಂದು ಜಿಹಾದಿಯೊಂದೇ ಮುಸ್ಲಿಮರ ಆಯ್ಕೆಯಾಗದಂತೆ ಅವರಲ್ಲಿ ಭರವಸೆ ಮೂಡಿಸುವುದು.

ಇನ್ನು ಮೂರು ತಿಂಗಳಲ್ಲಿ ಬಿಜೆಪಿಗಳ ಕೈಗೆ ಅಧಿಕಾರ ಹೋಗಲಿರುವ ಈ ಸಂದರ್ಭದಲ್ಲಿ ಈಗ ಇದೇ ತುರ್ತಿನ ಸಂಗತಿಯಾಗಿದೆ.



ವಿಶೇಷ ಸಂದರ್ಶನ

ತಾಯಿಯ ರೋಧನ

ಮಕ್ಕಳು ದಾರಿ ತಪ್ಪಿದ್ದೆಲ್ಲಿ?





ದೂರದ ಇರಾಕಿನಲ್ಲಿ ಅಮೆರಿಕಾ-ಇಂಗ್ಲೆಂಡ್‌ಗಳು ಹಚ್ಚಿರುವ ಬೆಂಕಿ ವಿಶ್ವದ ಯಾವ ಮೂಲೆಯಲ್ಲೂ ನೆಮ್ಮದಿ ಉಳಿಸುವ ಕಾಣುತ್ತಿಲ್ಲ. ಸ್ವತಃ ಅಷ್ಟೆಲ್ಲಾ ಸೈನಿಕ ಬಲ, ಆಧುನಿಕ ರಕ್ಷಣಾ ತಂತ್ರಜ್ಞಾನಗಳಿದ್ದರೂ ನಿತ್ಯ ಭೀತಿಯ ನೆರಳಲ್ಲೇ ಬದುಕಬೇಕಾಗಿ ಬಂದಿರುವ ಇವೆರಡು ದೇಶಗಳ ಜನರ ಪಾಲಿಗಂತೂ ನೆಮ್ಮದಿ ಎಂಬುದು ಸದ್ಯದ ಭವಿಷ್ಯದಲ್ಲಿ ಇಲ್ಲ.

ಜೂನ್ 30 ರ ಗ್ಲಾಸ್ಗೋ ಏರ್‌ಪೋರ್ಟ್ ಮೇಲಿನ ದಾಳಿ ಇದಕ್ಕೆ ಇನ್ನೊಂದು ಸಾಕ್ಷಿಯಾಗಿದೆ. ಈ ದಾಳಿಯಲ್ಲಿ ಮುಗ್ಧ ಜನರ್‍ಯಾರಿಗೂ ಹಾನಿಯಾಗಲಿಲ್ಲ ಎಂಬುದು ಒಂದೆಡೆಯಾದರೆ ಆ ದಿನ ಹತ್ತಿಕೊಂಡು ಉರಿದ ಜೀಪಿನ ಬೆಂಕಿ ನಮ್ಮ ಬೆಂಗಳೂರಿನಲ್ಲಿ ಬದುಕುತ್ತಿದ್ದ ಕುಟುಂಬವೊಂದರ ನೆಮ್ಮದಿಯನ್ನು ಸುಟ್ಟು ಹಾಕಿದೆ.

ಕಫೀಲ್ ಹಾಗೂ ಡಾ. ಸಬೀಲ್ ಎಂಬ ಇನ್ನು ಮುವತ್ತೂ ತಲುಪಿರದ ಈ ಸಹೋದರರು ಈಗ ಗ್ಲಾಸ್ಗೋ ದಾಳಿ ಹಾಗೂ ಅದಕ್ಕೂ 36 ಗಂಟೆ ಮೊದಲು ಲಂಡನ್ ನಗರದಲ್ಲಿ ಕಾರ್ ಬಾಂಬ್ ಸ್ಫೋಟಕ್ಕೆ ಸಂಚು ನಡೆಸಿದ ಆರೋಪ ಹೊತ್ತು ಈಗ ಬಂಧನದಲ್ಲಿದ್ದಾರೆ. ಜುಲೈ 7 ರ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ದಾಳಿ ನಡೆಸಿದ ಚೆರೋಕಿ ಜೀಪ್ ಓಡಿಸುತ್ತಿದ್ದಾತ ಬೆಂಗಳೂರಿನ ಕಫೀಲ್ ಅಲ್ಲ ಬದಲಾಗಿ ಲೆಬನಾನಿನ ಕಬೀಲ್ ಅಹಮದ್ ಇರಬಹುದು ಎಂದಿದೆಯಾದರೂ ಈಗ ಬಹುತೇಕ ಸಾಂದರ್ಭಿಕ ಸಾಕ್ಷ್ಯಗಳು ಕಫೀಲ್ ಸುತ್ತಲೇ ಸುತ್ತುತ್ತಿವೆ.

ಈ ಶಂಕಿತ ಯುವಕರ ಹಿನ್ನೆಲೆ, ಕುಟುಂಬದವರ ಜೀವನ ಕ್ರಮಗಳನ್ನು ಸ್ಟಡಿ ಮಾಡಿದರೆ ಜಿಹಾದಿ ಇವರ ಆದ್ಯತೆಯಾಗಿರಲಿಕ್ಕಿಲ್ಲ ಎನಿಸುತ್ತದೆ. ಆದರೆ ಈ ಕೃತ್ಯದಲ್ಲಿ ಇವರಿಬ್ಬರ ಕೈವಾಡ ಇದೆಯೆಂದು ಇಂಗ್ಲೆಂಡ್ ಪೊಲೀಸರು ಹುಡುಗಾಟಕ್ಕೆ ಸಾಬೀತು ಮಾಡಲು ಹೊರಟಿಲ್ಲ ಎಂಬುದು ಖಚಿತ. ವಸ್ತುಸ್ಥಿತಿ ಹೀಗಿರುವಾಗ ಇವರು ಬೆಳೆದ ಪರಿಸರ ಹಾಗೂ ಇತ್ತೀಚೆಗೆ ಬದಲಾಗಿರಬಹುದಾದ ಮನೋಭಾವಕ್ಕೆ ಕಾರಣಗಳನ್ನು

ಬಿಳಿದಾಳೆ ಈಶ

ಹುಡುಕಿ ಅರ್ಥೈಸುವುದೂ ಅಷ್ಟೇ ಮುಖ್ಯವಾಗುತ್ತದೆ.

ಭಾರತದ ಮೀಡಿಯಾಗಳು ಇವರ ಕುಟುಂಬದ ಪ್ರತಿಯೊಬ್ಬರೂ ಟೆರರಿಸ್ಟ್‌ಗಳೆಂಬಂತೆ ಈಗಾಗಲೇ ತೀರ್ಪು ನೀಡಿ ಬಿಟ್ಟಿವೆ. ಆದರೆ ಬೆಂಗಳೂರು ಪೊಲೀಸರು ಮಾತ್ರ ಮೀಡಿಯಾಗಳ ತಾಳಕ್ಕೆ ಕುಣಿಯದೆ ಸಂಯಮ ಕಾಪಾಡಿಕೊಂಡಿದ್ದಾರೆ. ಆದರೆ ನಗರದಲ್ಲೂ ಇಸ್ಲಾಮಿಕ್ ಉಗ್ರರ ನೆಟ್‌ವರ್ಕ್ ಬೇರು ಬಿಡುತ್ತಿದೆಯಾ ಎಂಬ ಆತಂಕ ಅವರಿಗಿದ್ದು ಆ ದಿಕ್ಕಿನಲ್ಲಿ ತನಿಖೆ ಮುಂದುವರೆದರೆ ಅದು ಸಹಜ ಹಾಗೂ ಅಗತ್ಯ ಕೂಡ.

ಒಂದು ಜನಾಂಗವಾಗಿ ಮುಸ್ಲಿಮರನ್ನು ವಿಶ್ವಾದ್ಯಂತ ಬೇಟೆಯಾಡಲಾಗುತ್ತಿದೆ ಎಂಬ ಕಹಿ ಬೆಳೆಯುತ್ತಿರುವಾಗ ಒಬ್ಬ ಆತ್ಮಹತ್ಯಾ ಬಾಂಬರ್ ತೋರಿಸಿಕೊಟ್ಟ ದಾರಿಯಲ್ಲೇ ಹೋಗಲು ಮತ್ತಿನ್ಯಾರೋ ರೆಡಿಯಾಗುತ್ತಿರುತ್ತಾರೆ. ಇದೊಂದು ರೀತಿ ರಿಲೇ ಓಟದಂತೆ, ಒಬ್ಬ ಶುರು ಮಾಡಿದ ಓಟವನ್ನು ಇನ್ನೊಬ್ಬ ಆಮೇಲೆ ಮತ್ತೊಬ್ಬ ಮುಂದುವರೆಸುವಂತೆ.

ದಮನಕ್ಕೊಳಗಾದವನು ಪ್ರತೀಕಾರ ತೆಗೆದುಕೊಳ್ಳುವ ಹಕ್ಕೂ ಹೊಂದಿರುತ್ತಾನೆಂಬ ಆಕ್ರೋಶದಿಂದ ಹುಟ್ಟುವ ಕಿಚ್ಚದು.

ಬೆಂಗಳೂರಿನ ಈ ಸುಶಿಕ್ಷಿತ, ಅಪ್ಪರ್ ಮಿಡಲ್ ಕ್ಲಾಸಿನ ಸಹೋದರರು ಒಳ್ಳೆಯ ಕೆಲಸ, ಕೈತುಂಬಾ ಸಂಬಳ ಹಾಗೂ ನೆಮ್ಮದಿಯ ಜೀವನದ ಹಾದಿ ಬಿಟ್ಟು ಈ ಜಿಹಾದಿ ಹಾದಿ ಆರಿಸಿಕೊಂಡರೇಕೆ ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೊರಟ 'ಲಂಕೇಶ್' ಅವರ ಕುಟುಂಬದವರೊಂದಿಗೂ ದೀರ್ಘ ಕಾಲ ಮಾತನಾಡಿದೆ.

ಅದನ್ನಿಲ್ಲಿ ನಿರೂಪಿಸಲಾಗಿದೆ.

ಅವರದು ಸುಶಿಕ್ಷಿತ ಕುಟುಂಬ

ಕಫೀಲ್-ಸಬೀಲ್‌ರ ತಂದೆ ಡಾ. ಮಕ್ಬೂಲ್ ಬೇಲೂರಿನ ನಾಗೇನಹಳ್ಳಿಯವರಾದರೆ ತಾಯಿ ಡಾ. ಜಕಿಯಾ ಮೈಸೂರಿನವರು. ಮದುವೆ ನಂತರ ಕೆಲಕಾಲ ತುಮಕೂರಿನಲ್ಲಿ ಖಾಸಗಿ ಕ್ಲಿನಿಕ್ ನಡೆಸಿಕೊಂಡಿದ್ದು 1979 ರಲ್ಲಿ ಕಫೀಲ್ ಹುಟ್ಟಿದ. ನಂತರ ಭಾರತ-ಇರಾನ್ ಸರ್ಕಾರ ಒಪ್ಪಂದದನ್ವಯ 1980 ರಲ್ಲಿ ಇರಾನಿಗೆ ಹೋದ ಈ ದಂಪತಿ ಅಲ್ಲಿ ಮೂರು ವರ್ಷ ವೈದ್ಯರಾಗಿ

ಮುಸ್ಲಿಮರು-ದಲಿತರು ಯಾರನ್ನು ನಂಬಬೇಕು

ಗ್ಲಾಸ್ಗೋ ಬಾಂಬಿಂಗ್ ಆರೋಪಿಗಳಾಗಿರುವ ಕಫೀಲ್ ಹಾಗೂ ಡಾ. ಸಬೀಲ್ ಭಾರತೀಯರೆಂಬುದನ್ನು ನೆನಪಿಟ್ಟುಕೊಂಡೇ ನಾವು ಈ ಮೇಲಿನ ಪ್ರಶ್ನೆ ಹಾಕಿಕೊಳ್ಳಬೇಕಿದೆ. ಇವತ್ತು ಭಯೋತ್ಪಾದಕರಾಗಿರುವವರೆಲ್ಲಾ ಮುಸ್ಲಿಮರೆಂದು ಎಲ್ಲಾ ಮುಸ್ಲಿಮರನ್ನು **corner** ಮಾಡಲಾಗುತ್ತಿದೆ. ಅದೇರೀತಿ ಸಾಮಾಜಿಕ ನ್ಯಾಯ, ಸಮಾನತೆಯ ಪ್ರಶ್ನೆ ಬಂದಾಗಲೆಲ್ಲಾ, ಪ್ರತಿಭೆ, ದೇಶದ ಪ್ರಗತಿ ಎಂದು ದಲಿತ-ದಮನಿತರ ದನಿಯನ್ನು ಹತ್ತಿಕ್ಕಲಾಗುತ್ತಿದೆ. ಇವೆರಡಕ್ಕೂ ಬಹುಪಾಲು ಪ್ರಚೋದನೆ ನೀಡುತ್ತಿರುವುದು ಬಿಜೆಪಿ ಹಾಗೂ ಸಂಘಪರಿವಾರ. ನಮಗೆ ನೆನಪಿರುವಂತೆ 1992 ರಲ್ಲಿ ಬಾಬರಿ ಮಸೀದಿ ಕೆಡವುವ ಮುನ್ನ ಭಾರತದಲ್ಲಿ ಇಸ್ಲಾಮಿಕ್ ಟೆರರಿಸಂನ ಅಸ್ತಿತ್ವ ಇರಲಿಲ್ಲ, ಅಲ್ಲಲ್ಲಿ ಹಿಂದೂ-ಮುಸ್ಲಿಂ ಗಲಭೆಗಳಾಗುತ್ತಿದ್ದವಾಗಲೀ ಬಾಂಬ್ ದಾಳಿಗಳು, ಪ್ರತೀಕಾರದ ಘಟನೆಗಳಾಗಲೀ ಇರಲಿಲ್ಲ, ಮುಸ್ಲಿಮರು ಭಾರತೀಯ ಸಮಾಜದ ಮುಖ್ಯವಾಹಿನಿಯಿಂದ ಎಂದೂ ಬೇರ್ಪಟ್ಟಿರಲಿಲ್ಲ. ಆದರೆ ಬಾಬ್ರಿ ಮಸೀದಿ ನಾಶ, ಗುಜರಾತ್ ಹತ್ಯಾಕಾಂಡಗಳೆಂಬ ಹಿಂದೂ ಫ್ಯಾಸಿಸ್ಟರ ನೀಚ ಕೃತ್ಯಗಳು ಮುಸ್ಲಿಮರಲ್ಲಿ ಆಳವಾದ ಅಭದ್ರತೆಯ ಭಾವನೆ ಬೆಳೆಯಲು ಕಾರಣವಾದವು. ಒಂದು ಸೆಕ್ಯುಲರ್ ದೇಶದೊಳಗೇ ಪ್ರಜಾಸತ್ತಾತ್ಮಕ ಸರ್ಕಾರವೇ ಮುಂದೆ ನಿಂತು ಸಾವಿರಾರು ಮುಸ್ಲಿಮರ ಕಗ್ಗೊಲೆ ನಡೆಸಿ, ಅತ್ಯಾಚಾರ, ಲೂಟಿ, ದೌರ್ಜನ್ಯಗಳನ್ನು ಎಸಗಿದರೆ ಕೆಲವರ ಮನಸ್ಸಿನಲ್ಲಾದರೂ ಕ್ರೋಧ ಹುಟ್ಟಿಸುತ್ತದೆ. ಅಂತವರಲ್ಲಿ ಯಾರಾದರೂ ಪ್ರತೀಕಾರಕ್ಕಿಳಿದರೆ ಈಗ ತಾನೆ ಇದೆಲ್ಲಾ ಶುರುವಾಗಿದೆ ಎಂಬಂತೆ ಬಿಂಬಿಸುತ್ತಾ ಮುಸ್ಲಿಮರೆಲ್ಲಾ ಭಯೋತ್ಪಾದಕರೆಂಬ ಭಾವನೆ ಬೆಳೆಸಲಾಗುತ್ತಿದೆ. ಭಾರತದಲ್ಲಿ ಮುಸ್ಲಿಮರ ಮಾರಣಹೋಮ ಶುರುವಾದ ನಂತರ ಅದರ ಪ್ರತಿಕ್ರಿಯೆಯಾಗಿ ಕೆಲವರು ಉಗ್ರಗಾಮಿ ಚಟುವಟಿಕೆಗಿಳಿಯುತ್ತಿದ್ದಾರೆಂಬುದನ್ನು ಉದ್ದೇಶಪೂರ್ವಕವಾಗಿ ಮರೆಮಾಚಲಾಗುತ್ತಿದೆ.

ಕರ್ನಾಟಕದ ಉದಾಹರಣೆಯನ್ನೇ ನೋಡಿ. ಕಳೆದ ಆರೆಂಟು ವರ್ಷಗಳಿಂದ ಕರಾವಳಿ ಭಾಗದಲ್ಲಿ ಬಿಜೆಪಿಯ ಸಂಘ ಪರಿವಾರವು ಮುಸ್ಲಿಮರ ವಿರುದ್ಧ ನೂರಾರು ದೌರ್ಜನ್ಯಗಳನ್ನು ನಡೆಸಿದೆ. ಅದು ಈಗಲೂ ಮುಂದುವರೆಯುತ್ತಿದೆ. ಸೆಕ್ಯುಲರ್ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಆಗಲಿ ಇಲ್ಲಾ ಜಾತ್ಯತೀತ ದಳವಾಗಲಿ ಎಂದೂ ಬಿಜೆಪಿಗಳ ಈ ದೌರ್ಜನ್ಯಗಳನ್ನು ಖಂಡಿಸಲಿಲ್ಲ, ಮುಸ್ಲಿಂ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡಲಿಲ್ಲ. **KFD (Karnataka Forum For Dignity)** ಹುಟ್ಟಿಕೊಂಡಿದ್ದು ಆಗಲೇ. ತಮ್ಮನ್ನು ಯಾವ ಪೊಲೀಸು, ಸರ್ಕಾರಗಳೂ ಖಂಡಿತಾ ರಕ್ಷಿಸುವುದಿಲ್ಲ ಎಂಬ ಕಹಿಸತ್ಯ ಗೊತ್ತಾದ ನಂತರವೇ ಮುಸ್ಲಿಮರೀಗ KFD ಸೇರಿಕೊಳ್ಳುತ್ತಿದ್ದಾರೆ.

ಕರ್ನಾಟಕ ಪೊಲೀಸರಿಗೆ ಚಟಪಟಿಕೆ ಶುರುವಾಗಿದ್ದೇ ಆವಾಗ ಇದುವರೆಗೂ ಮುಸ್ಲಿಮರನ್ನು ಕೊಚ್ಚಿ ಹಾಕುತ್ತಾ, ಆಸ್ತಿಪಾಸ್ತಿ ವ್ಯಾಪಾರ ವಹಿವಾಟುಗಳಿಗೆ ಹಾನಿ ಮಾಡುತ್ತಾ ಬಂದಿರುವ ಯಾವನೇ ಭಜರಂಗಿ, ಆರ್‌ಎಸ್‌ಎಸ್, ಬಿಜೆಪಿಗಳ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳದ ಪೊಲೀಸರು ಈಗ KFD ವಿರುದ್ಧ ಹರಿಹಾಯುತ್ತಿದ್ದಾರೆ. ಅದು ಸಿಮಿಯ ಇನ್ನೊಂದು ರೂಪ ಎಂದು ಆರೋಪಿಸುತ್ತಿದ್ದಾರೆ.

ಇದರರ್ಥ ಇಷ್ಟೇ: ಯಾವುದೇ ಕಾರಣಕ್ಕೂ ಮುಸ್ಲಿಮರು ಸಂಘಟಿತರಾಗಕೂಡದು, ಕನಿಷ್ಠ ಪ್ರಜಾಸತ್ತಾತ್ಮಕ ರೂಪದ ಪ್ರತಿರೋಧವನ್ನೂ ತೋರಕೂಡದು ಎಂದು. ಮತ್ತೊಂದೆಡೆ ಸಂಘಪರಿವಾರದ ಹಿಂದೂ ಫ್ಯಾಸಿಸ್ಟರು ಯಾವ ಕಾನೂನನ್ನು ಬೇಕಾದರೂ ಉಲ್ಲಂಘಿಸಬಹುದು. ಯಾರ ಮೇಲಾದರೂ ದೌರ್ಜನ್ಯ ನಡೆಸಬಹುದು. ಅಂತಾದಕ್ಕೆಲ್ಲಾ ತಡೆ ಉಂಟು ಮಾಡಬಾರದೆಂಬುದು ಇದುವೆರಗೂ ಜನರಿಗೆ ಕಾಣಿಸಿರುವ ಸತ್ಯಗಳು.



ಆದಿ ಉಡುಪಿಯಲ್ಲಿ ಹಸನಬ್ಬ ಹಾಗೂ ಹಾಜಬ್ಬ ಎಂಬ ಇಬ್ಬರು ಬಡ ಮುಸ್ಲಿಂ ವ್ಯಾಪಾರಿಗಳನ್ನು ಬಿಜೆಪಿ ಪರಿವಾರ ಬೆತ್ತಲುಗೊಳಿಸಿ ಹಲ್ಲೆ ನಡೆಸಿದಾಗ ಕರ್ನಾಟಕ ಪೊಲೀಸರು ತಮ್ಮ ಕರ್ತವ್ಯಪಾಲನೆ ಮಾಡಲಿಲ್ಲವೆಂಬುದು ಈ ನಾಡಿನ ಪ್ರತಿ ಮುಸ್ಲಿಮನಿಗೂ ಗೊತ್ತಿದೆ.

ಈಗ ಯೋಚಿಸಿ ನೋಡಿ ನಮ್ಮ ನಿಮ್ಮಂತೆಯೇ ನೆಮ್ಮದಿಯ ಜೀವನ ಆಶಿಸುವ ಮುಸ್ಲಿಮರು ಜಿಹಾದಿಗಳಾಗಲು 'ಉಗ್ರರಾಗಲು' ಸೂಸೈಡ್ ಬಾಂಬರ್ ಗಳಾಗಲು ಪ್ರಚೋದನೆ ಕೊಡುತ್ತಿರುವವರು, ಅವರನ್ನು **corner** ಮಾಡುತ್ತಿರುವವರು ಯಾರು?

ಪ್ರಜಾಪ್ರಭುತ್ವದಲ್ಲಿ ಒಬ್ಬ ಒಳ್ಳೆಯ ರಾಜಕಾರಣಿಗಾಗಿ ಹುಡುಕುವುದು ಒಬ್ಬ ಪ್ರಾಮಾಣಿಕ ಕಳ್ಳನಿಗೆ ಹುಡುಕುವುದಕ್ಕೆ ಸಮ -ಎಚ್. ಎಲ್. ಮೆನ್‌ಕೆನ್

...ರ ಮಾಡಿ ನಂತರ ಬೆಂಗಳೂರಿಗೆ ಬಂದಿದ್ದರು. ...ಮತೆ 1981 ರಲ್ಲಿ ಬೆಂಗಳೂರಿಗೆ ಬಂದು ಹೋಗುವ ...ಯ ಇಲ್ಲೇ ಎರಡನೇ ಮಗ ಸಬೀಲ್‌ಗೆ ಬಸವನ ...ಡಿಯಲ್ಲಿನ ಗುಣಶೀಲಾ ನರ್ಸಿಂಗ್ ಹೋಮ್‌ನಲ್ಲಿ ...ನ್ಮ ನೀಡಿದ್ದರು. ನಂತರ 1984 ರಲ್ಲಿ ಕೆಲಸ ...ಡುಕಿಕೊಂಡು ಸೌದಿ ಅರೇಬಿಯಾಗೆ ಹೋದ ...ಕ್ಬೂಲ್ ಕುಟುಂಬ 11 ವರ್ಷ ಅಲ್ಲೇ ಉಳಿದಿತ್ತು. ...ಲ ಪತ್ರಿಕೆಗಳಲ್ಲಿ ಇವರೆಲ್ಲಾ ಸೌದಿ ರಾಷ್ಟ್ರೀಯರು, ...ಕಿಸ್ತಾನದವರೆಂಬ ಅಸಂಬದ್ಧ ಚರ್ಚೆ ನಡೆದಿದೆ. ಡಾ. ...ಕ್ಬೂಲ್ ಕುಟುಂಬ ನೂರಕ್ಕೆ ನೂರು ಭಾರತೀಯರಷ್ಟೇ ...ಲ್ಲ ಕನ್ನಡಿಗರೂ ಹೌದು. ಇದೆಲ್ಲಕ್ಕೂ ಮುನ್ನ ಆಗಿನ ...ದಿರಾ ಗಾಂಧಿ ಸರ್ಕಾರ ತುರ್ತು ಪರಿಸ್ಥಿತಿ ಹೇರಿದ್ದಾಗ ...ಡಾ. ಮಕ್ಬೂಲ್‌ರನ್ನು ಬಂಧಿಸಿ 18 ತಿಂಗಳು ಸೆರೆಯ...ಟ್ಟಿತ್ತು. ಮಕ್ಬೂಲ್ ಜಮಾತೆ ಇಸ್ಲಾಮಿ ಸದಸ್ಯರೆಂಬ ...ರಣದಿಂದ. ಇವರು ಸೌದಿಯಲ್ಲಿದ್ದಾಗಲೇ ಕುವೈತ್ ...ಕ್ರಮಣ, ಕೊಲ್ಲಿಯುದ್ಧಗಳು ನಡೆದವು. ಸೌದಿ ...ರೇಬಿಯಾ ಆಗ ಸದ್ದಾಂ ವಿರುದ್ಧ ಅಮೆರಿಕಾಗೆ ನೆರವಾ...ತ್ತು. ಬಹುಶಃ ಇದನ್ನೆಲ್ಲಾ ನೋಡಿಕೊಂಡೇ ಬೆಳೆದ ...ಫೀಲ್ ಹಾಗೂ ಸಬೀಲ್‌ಗೆ ಆಗಲೂ ರಾಜಕಾರಣ, ...ಜಿಹಾದ್‌ಗಳ ಬಗ್ಗೆ ಗಮನ ಇರಲಿಲ್ಲ ಎನ್ನುತ್ತಾರೆ ತಾಯಿ ...ಜಕಿಯಾ.

1994 ರಲ್ಲಿ ಮರಳಿ ಬೆಂಗಳೂರಿಗೆ ಬಂದ ಇವರು ...ರಪ್ಪನಪಾಳ್ಯದಲ್ಲಿ ಸ್ವಲ್ಪ ಜಾಗ ಖರೀದಿಸಿ ನೋಬೆಲ್ ...ರ್ಸಿಂಗ್ ಹೋಂ ಕಟ್ಟಿಕೊಂಡರು. ಆದರೆ ಆನಂತರ ...ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕೆಂದು 2004 ರ ಸುಮಾರಿಗೆ ...ದನ್ನು ಮಾರಿಕೊಂಡಿದ್ದಾರೆ. ಅದಿರಲಿ, ಡಾ. ಜಕಿಯಾ ...ಎಂತಾ ಧರ್ಮ ಶ್ರದ್ಧೆ ಹೊಂದಿದ್ದ ವೈದ್ಯೆಯೆಂದರೆ ...ಮ್ಮೇಡಿ ವೃತ್ತಿ ಜೀವನದಲ್ಲಿ ಒಂದೇ ಒಂದು ಅಬಾ...ರ್ಷನ್ ನಡೆಸಿಲ್ಲ ಅಥವಾ ಹಣದ ಆಸೆಗೆ ಬಿದ್ದು ...ಮ್ಮ ethics ಬಿಟ್ಟುಕೊಟ್ಟಿಲ್ಲ, ಅದನ್ನವರು ಈಗಲೂ ...ಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಈ ಮಧ್ಯೆ ಕಫೀಲ್ ...ನಶಂಕರಿಯ ಅರಬಿಂದೋ ಶಾಲೆಗೂ, ಸಬೀಲ್ ...ಕ್ಸ್‌ಫರ್ಡ್ ಶಾಲೆಗೂ ಸೇರಿ ಬಸವನಗುಡಿ ನ್ಯಾಷನಲ್ ...ಲೇಜಿಗೆ ಸೇರಿ ನಂತರ ಬೇರೆಬೇರೆ ದಾರಿ ಹಿಡಿದಿದ್ದಾರೆ. ...ಗಲೇ ಕಫೀಲ್ ಇಂಜಿನಿಯರಿಂಗ್ ಓದಲು ದಾವಣ...ರೆಗೆ ಹೋದರೆ ಸಬೀಲ್ ವೈದ್ಯಕೀಯ ಓದಲು ...ಅಂಬೇಡ್ಕರ್ ಮೆಡಿಕಲ್ ಕಾಲೇಜ್ ಸೇರಿಕೊಂಡ. ಮೆಕಾನಿ...ಕಲ್ ಇಂಜಿನಿಯರಿಂಗ್ ಓದುತ್ತಿದ್ದ ಕಫೀಲ್ ಎಂತಾ ...ಬುದ್ಧಿಶಾಲಿಯೆಂದರೆ ಈಗಲೂ ದಾವಣಗೆರೆ ಬಾಪೂಜಿ ...ಕಾಲೇಜಿನ ವಿದ್ಯಾರ್ಥಿಗಳು ಅವನು ರೆಡಿ ಮಾಡಿಟ್ಟಿದ್ದ ...ನೋಟ್ಸ್‌ಗಳನ್ನೇ ಓದುತ್ತಿದ್ದಾರೆ. ಬಹುಶಃ ಆಗಲೂ ಕಫೀಲ್‌ಗೆ ತನ್ನ ಓದು, ಕೆರಿಯರ್, ಉದ್ಯೋಗ ಬಿಟ್ಟು ಬೇರೆ ಯೋಚನೆ ಬಂದಿರಲಿಲ್ಲ. 2001 ರ ಸೆಪ್ಟೆಂಬರ್ 11 ರಂದು ಅಮೆರಿಕಾ ಮೇಲೆ ಆಲ್ ಖೈದಾ ಉಗ್ರರು ದಾಳಿ ನಡೆಸುವ ಮುನ್ನ ಕಫೀಲ್ ವಿದೇಶಿ ಯೂನಿವರ್ಸಿಟಿಗಳಲ್ಲಿ ಉನ್ನತ ವ್ಯಾಸಂಗಕ್ಕಾಗಿ ಅರ್ಜಿ ಹಾಕುವುದರಲ್ಲಿ ಮುಳುಗಿ ಹೋಗಿದ್ದ. ಇಂಗ್ಲೆಂಡ್, ಫ್ರಾನ್ಸ್ ಮತ್ತಿತರ ಕಡೆ ಅವನಿಗೆ ಅವಕಾಶಗಳು ಸಿಕ್ಕವಾದರೂ ಕೊನೆಗೆ



ಕಫೀಲ್ ಆರಿಸಿಕೊಂಡಿದ್ದು ಇಂಗ್ಲೆಂಡಿನ ಕ್ವೀನ್ಸ್ ವಿವಿಯನ್ನು. ಅಮೆರಿಕದ ಮೇಲೆ ದಾಳಿ ನಡೆದಾಗ ವಿವಿಗಳು ತನಗೆಲ್ಲಿ ಪ್ರವೇಶವನ್ನು ನಿರಾಕರಿಸುತ್ತಾವೋ ಎಂಬ ಚಿಂತನೆ ಕಫೀಲ್‌ನನ್ನು ಕಾಡುತ್ತಿತ್ತೆ. ಆದರೂ ಅದೇ 2001 ಸೆಪ್ಟೆಂಬರ್ ತಿಂಗಳು 31ರಂದು ಆತ ಇಂಗ್ಲೆಂಡಿಗೆ ಹಾರಿ ಹೋದ. Computational Fluid Dynamics ನಲ್ಲಿ ಪಿಎಚ್‌ಡಿ ಮಾಡಲು ಹೋಗಿದ್ದ ಕಫೀಲ್ ಅಲ್ಲಿ ಎಷ್ಟು ಬೇಗ ಎಲ್ಲರ ವಿಶ್ವಾಸ ಗಳಿಸಿದನೆಂದರೆ ತನ್ನ ವಿವಿ ಪರವಾಗಿ ವಿದ್ಯಾರ್ಥಿಗಳ ಸಂದರ್ಶನ ನಡೆಸಲು ವಿವಿಯ ಹಿರಿಯ ಅಧಿಕಾರಿಗಳೊಂದಿಗೆ ದೆಹಲಿ, ಮುಂಬೈ, ಬೆಂಗಳೂರಿಗೂ ಹಲವು ಬಾರಿ ಬಂದು ಹೋಗಿದ್ದಾನೆ. ಈ ಮಧ್ಯೆ ತನ್ನ ವೈದ್ಯಕೀಯ ಅಧ್ಯಯನ ಮುಗಿಸಿದ ಡಾ. ಸಬೀಲ್ ಕೂಡ ಇಂಗ್ಲೆಂಡಿನಲ್ಲಿ ಕೆಲಸ ಮಾಡಲು ಹೊರಟ. ಮಕ್ಕಳ ಶಿಕ್ಷಣಕ್ಕಾಗಿ ಬನಶಂಕರಿಯ ಮನೆಯನ್ನೇ ಒತ್ತೆಯಿಟ್ಟು ಸಾಲ ಎತ್ತಿ ಕೊಟ್ಟ ಡಾ. ಮಕ್ಬೂಲ್ ಕುಟುಂಬಕ್ಕೆ ಬಹುಶಃ ಇಲ್ಲಿಂದಾಚೆಗೆ prosperity ಬರುತ್ತಿತ್ತೇನೋ. ಆದರೆ ಅದೀಗ ಮುಗಿದ ಕನಸು.

ಕಫೀಲ್ ವಿದೇಶಿ ಸಂಪರ್ಕಗಳು

ಸ್ವಲ್ಪ ಅಂತರ್ಮುಖಿ ಸ್ವಭಾವದ ಕಫೀಲ್‌ಗೆ ಇನ್ನಿತರ ಮುಸ್ಲಿಂ ದೇಶಗಳಲ್ಲಿ ಅನೇಕ ಸ್ನೇಹಿತರಿದ್ದರು. ಇಂಗ್ಲೆಂಡಿಗೆ ಹೋದ ನಂತರವಂತೂ ಸಹಜವಾಗೇ ಜಗತ್ತಿನ ವಿದ್ಯಮಾನಗಳು, ಅರಬ್ ಜಗತ್ತಿನಲ್ಲಿ ಅಮೆರಿಕಾ-ಇಂಗ್ಲೆಂಡುಗಳು ನಡೆಸುತ್ತಿರುವ ದೌರ್ಜನ್ಯಗಳ ಬಗ್ಗೆ ತಿಳುವಳಿಕೆ ಬಂದಿರಲಿಕ್ಕೂ ಸಾಕು. ಆದರೆ ಮೊನ್ನೆ ಮೇ 5 ರಂದು ಕಫೀಲ್ ಬೆಂಗಳೂರಿನಿಂದ ಲಂಡನ್‌ಗೆ ಹೊರಡುವ ಮೊದಲು ತನಗಾಗಿ ಒಂದು ಆಕ್ಸೆಂಟ್ ಕಾರ್ ಖರೀದಿಸಿ ಬಿಟ್ಟುಹೋಗಿದ್ದಾನೆ. ತಮ್ಮ ಡಾ. ಸಬೀಲ್‌ನ ವಿಸಾ ಅವಧಿ ಮುಗದಿತ್ತಾದ್ದರಿಂದ ರಿನೀವಲ್‌ಗೂ ಅರ್ಜಿ ಹಾಕಿಕೊಂಡಿದ್ದ. ಇಬ್ಬರೂ ಮಕ್ಕಳು ತಮ್ಮ ಕೆಲಸ, ಕೆರಿಯರ್ ಬಗ್ಗೆ ಗಮನ ಕೇಂದ್ರೀಕರಿಸಿದ್ದರೆಂದು ತಂದೆ ತಾಯಿಯರೂ ನೆಮ್ಮದಿಯಾಗೇ ಇದ್ದರು. ನಿತ್ಯ ಫೋನ್ ಮಾಡಿ ತಾಯಿಯೊಂದಿಗೆ ಮಾತಾಡುವ ಪರಿಪಾಠವಿಟ್ಟುಕೊಂಡಿದ್ದ ಸಹೋದರರ ಮನಸ್ಸಿನಲ್ಲೇ ಯಾವುದೋ ಆಕ್ರೋಶವೊಂದು ಬೆಳೆಯುತ್ತಿದೆ ಎಂಬುದು ಇಲ್ಲಿ ಬೆಂಗಳೂರಲ್ಲಿ ಕುಳಿತಿದ್ದ ವೃದ್ಧ ತಾಯಿಗೆ ತಾನೇ ಹೇಗೆ ಗೊತ್ತಾಗಬೇಕು?

ಜೂನ್ 29 ರ ಶನಿವಾರ ತಾಯಿಗೆ ಫೋನ್ ಮಾಡಿದ ಕಫೀಲ್ ತಾನೊಂದು ಕೆಲಸ ಮಾಡಲು ಹೊರಟಿದ್ದು "It is just like an exam, pray for me. ದುವಾ ಕರೋ ಅಮ್ಮ" ಎಂದಿದ್ದಾನೆ.

"ಹಾ ಬೇಟಾ" ಎಂದು ಫೋನ್ ಕೆಳಗಿಟ್ಟ ತಾಯಿಗೆ ಮಗನ ಮನದಿಂಗಿತ ಅರ್ಥವಾಗಿತ್ತಾ? ಗೊತ್ತಿಲ್ಲ.

ಇನ್ನು ದುರಂತವೇನೆಂದರೆ ಶನಿವಾರ ಸಂಜೆ ಗ್ಲಾಸ್ಗೋ ಏರ್‌ಪೋರ್ಟಿನಲ್ಲಿ ಜೀಪೊಂದು ಬೆಂಕಿ ಕಾರುತ್ತಾ ನುಗ್ಗಿದ್ದನ್ನು ಬಿಬಿಸಿ ನ್ಯೂಸ್‌ನಲ್ಲಿ ತಾಯಿ ಜಕಿಯಾ ನೋಡುತ್ತಿರುವಾಗಲೇ ತನ್ನ ಎರಡನೇ ಪುತ್ರ ಸಬೀಲ್‌ನೊಂದಿಗೆ ಫೋನ್‌ನಲ್ಲಿ ಮಾತನಾಡಿದ್ದಾರೆ. ಆ ಕೂಡಲೇ "ಬೇಟಾ, ಇಂಗ್ಲೆಂಡಿನಲ್ಲಿ ಏನಾಗುತ್ತಿದೆ?" ಎಂದು ಪ್ರಶ್ನಿಸಿದ್ದಾರೆ. ಆ ಕಡೆಯಿಂದ ಸಬೀಲ್ "ಯಾಕಿಂತ ಪ್ರಶ್ನೆ?" ಎಂದು ಕೇಳಿದಾಗ "ಟಿವಿಯಲ್ಲಿ ಕಾರ್ ಬೆಂಕಿಹತ್ತಿ ಉರಿಯುತ್ತಿರುವುದನ್ನು ತೋರಿಸುತ್ತಿದ್ದಾರೆ. ನೀನು ಹುಷಾರಾಗಿರು" ಎಂದು ಎಚ್ಚರಿಸಿದ್ದಾರೆ. ತಾಯಿ ಹೇಳಿದ್ದರ ಬಗ್ಗೆ ತನ್ನ ಲಾಪ್‌ಟಾಪ್‌ನಲ್ಲೇ ನ್ಯೂಸ್ ನೋಡಿದ ಸಬೀಲ್ "Something is burning ಅಮ್ಮಿ" ಎಂದೂ ಪ್ರತಿಕ್ರಿಯಿಸಿದ್ದಾನೆ.

ಆ ಜೀಪಿನಲ್ಲಿ ಸಿಕ್ಕಿ ಜೀವಂತವಾಗಿ ಉರಿದು ಹೋಗುತ್ತಿದ್ದ ವ್ಯಕ್ತಿ ತಮ್ಮ ಕುಟುಂಬದವನೇ (ಅದು ಕಫೀಲ್ ಎಂಬುದು ನಿಜವೇ ಆದರೆ) ಎಂಬುದು ತಮಗೆ ಗೊತ್ತಿಲ್ಲ ಎನ್ನುತ್ತಾರೆ ತಾಯಿ ಡಾ. ಜಕಿಯಾ.

ಇಷ್ಟನ್ನು ಮಾತಾಡುತ್ತಿದ್ದಾಗಲೇ ಡಾ. ಮಕ್ಬೂಲ್ ಬಂದು ಪ್ರಾರ್ಥನೆಗೆ ಸಮಯವಾಯಿತೆಂದು ನೆನಪಿಸಿದರು. ಒಳಗೆ ಹೋದ ಕೆಲ ಕ್ಷಣಗಳಲ್ಲೇ ಕಫೀಲ-ಸಬೀಲ್‌ರ ತಾಯಿಯ ಹೃದಯ ವಿದ್ರಾವಕ ರೋಧನ ನಮ್ಮ ಕಿವಿಗೆ ಬಿತ್ತು. "ಯಾ ಅಲ್ಲಾ-ನನಗ್ಯಾಕಿಂತಾ ಪರೀಕ್ಷೆ ಒಡ್ಡಿದೆ" ಎನ್ನುತ್ತಿದ್ದ ಆ ಶೋಕಕ್ಕೆ ನಮ್ಮ ಬಳಿ ಉತ್ತರ ಇರಲಿಲ್ಲ.

ಸುನಾಮಿ ಮತ್ತು ಸಬೀಲ್

ವಿಚಿತ್ರವೆಂದರೆ ಕಫೀಲ್‌ಗೆ ಹೋಲಿಸಿದರೆ ಡಾ. ಸಬೀಲ್ ಮಾಡಿದ ಸ್ವಭಾವದವ. ತನ್ನ ಸಹಪಾಠಿ ವಿದ್ಯಾರ್ಥಿಗಳಿಗೆ ನೆರವಾಗುವುದು, ಅವರ ಫೀಸ್ ಕಟ್ಟುವುದು, ಬಂಧುಗಳಿಗೆ ಸಹಾಯ ಮಾಡುವ ಮನೋಭಾವ ಆತನದ್ದು. 2001 ರಲ್ಲಿ ಸುನಾಮಿ ದುರಂತ ನಡೆದಾಗಲೂ ಸಬೀಲ್ ಒಂದಷ್ಟು ಪರಿಹಾರ ಸಾಮಾಗ್ರಿ ಸಂಗ್ರಹಿಸಿ ರಾತ್ರೋರಾತ್ರಿ ಚೆನ್ನೈಗೆ ಹೋಗಿ ನೊಂದವರಿಗೆ ಹಂಚಿ ನೆರವಾಗಿದ್ದಾನೆ. ಗುಜರಾತ್‌ನಲ್ಲಿ ಬಿಜೆಪಿಗಳು ಮುಸ್ಲಿಮರ ಮಾರಣಹೋಮ ನಡೆಸಿದಾಗಲೂ ಮಕ್ಬೂಲ್ ಕುಟುಂಬ ಒಂದಷ್ಟು ಧನ ಸಹಾಯ ಮಾಡಿದೆ. ಅಷ್ಟೇ ಅಲ್ಲ ಪಾಕಿಸ್ತಾನದ ಜುಬೈಲ್‌ನಲ್ಲಿ ಭೂಕಂಪವಾದಾಗಲೂ ಡಾ. ಸಬೀಲ್ ಅಲ್ಲಿಗೂ ಹೋಗಿ ಗಾಯಾಳುಗಳಿಗೆ ಚಿಕಿತ್ಸೆ ನೀಡಿ ನೆರವಾಗಲು ಬಯಸಿದ್ದ. ಆದರೆ ಅದೇ ಸಮಯಕ್ಕೆ ಆತನಿಗೆ ವಿಸಾ ಸಿಕ್ಕಿ ಬ್ರಿಟನ್ನಿಗೆ ಹೊರಡಬೇಕಿದ್ದರಿಂದ ಅದು ಸಾಧ್ಯವಾಗಿರಲಿಲ್ಲ.

ಇಷ್ಟೆಲ್ಲಾ ಅಂತಃಕರಣ, ಮರಗುವ ಸ್ವಭಾವವಿದ್ದ ಸಬೀಲ್ ಕೂಡಾ ರೊಚ್ಚಿಗೇಳಲು, ಇಂಗ್ಲೆಂಡಿನಲ್ಲಿ ವಿಧ್ವಂಸಕ ಕೆಲಸ ಮಾಡಲು ಮುಂದಾದನೆಂಬುದನ್ನು ಹೇಗೆ ಅರ್ಥೈಸುವುದು.

ಮೀಡಿಯಾ ಭಯೋತ್ಪಾದನೆ

ಇದನ್ನು ವಿಷಾದ ಮತ್ತು ಬೇಸರದಿಂದಲೇ ದಾಖಲಿಸಬೇಕಿದೆ.

ಜೂನ್ 30 ರಂದು ಇಂಗ್ಲೆಂಡಿನ ಗ್ಲಾಸ್ಗೋ ಏರ್‌ಪೋರ್ಟ್ ಮೇಲೆ ನಡೆದ ಆತ್ಮಹತ್ಯಾ ದಾಳಿಯಲ್ಲಿ ಬೆಂಗಳೂರಿನ ಇಬ್ಬರು ಸಹೋದರರು ಭಾಗಿಯಾಗಿದ್ದಾರೆಂಬ ಸುದ್ದಿ ಕೇಳಿಬರುತ್ತಿದ್ದಂತೆಯೇ ಬನಶಂಕರಿಯ ಅವರ ಮನೆ ಮುಂದೆ ಜಮೆಯಾದ ಮೀಡಿಯಾ ಮಂದಿ ಅತ್ಯಂತ ಅಮಾನವೀಯವಾಗಿ ವರ್ತಿಸಿದ್ದಾರೆ. ಇಡೀ ಘಟನೆಯ ಪೂರ್ಣ ವಿವರ ತಿಳಿದುಕೊಳ್ಳುವಷ್ಟು ಸಹನೆ ತೋರದೆ ಕಫೀಲ್-ಸಬೀಲ್ ಸೋದರರ ಇಡೀ ಕುಟುಂಬವನ್ನೇ ಟೆರರಿಸ್ಟ್‌ಗಳೆಂದು ಬಿಂಬಿಸಿ ತಮ್ಮ ವೃತ್ತಿಧರ್ಮಕ್ಕೆ ತಾವೇ ಅಪಚಾರ ಮಾಡಿಕೊಂಡಿದ್ದಾರೆ. ಗ್ಲಾಸ್ಗೋ ಘಟನೆ ನಂತರ, ತಮ್ಮ ಮಕ್ಕಳಿಬ್ಬರನ್ನು ಲಂಡನ್ ಪೊಲೀಸರು ಅರೆಸ್ಟ್ ಮಾಡಿದ್ದಾರೆಂದು ತಿಳಿದ ಮೇಲೂ ಸಹ, ಅವರ ಪೈಕಿ ಹಿರಿಯ ಮಗ ಕಫೀಲ್‌ಗೆ ಶೇ. 90 ರಷ್ಟು ಸುಟ್ಟ ಗಾಯಗಳಾಗಿರಬಹುದೆಂಬ ವರದಿಗಳಿದ್ದಾಗಲೂ ಕೂಡಾ ಡಾ. ಮಕ್ಬೂಲ್ ಹಾಗೂ ಡಾ. ಜಕಿಯಾ ಮೀಡಿಯಾಗಳೊಂದಿಗೆ ಮಾತನಾಡಲು ಹಿಂಜರಿದಿರಲಿಲ್ಲ.

ಆದರೆ ಮೀಡಿಯಾಗಳ ಹಸಿವು ಅದರಲ್ಲೂ ನ್ಯಾಷನಲ್ ಟಿವಿ ಚಾನಲ್‌ಗಳ 'ಸೆನ್ಸೇಷನಲ್ ನ್ಯೂಸ್'ನ ಹಸಿವು ಅಷ್ಟಕ್ಕೇ 'ತೃಪ್ತಿ'ಯಾಗುವಂತಿರಲಿಲ್ಲ. ಹಾಗಾಗಿ ಈ ಅಪ್ರಬುದ್ಧ ಪತ್ರಕರ್ತರು ತಮ್ಮ ಮನಸ್ಸಿಗೆ ತೋಚಿದ ತರ್ಕಗಳನ್ನೆಲ್ಲಾ ಸತ್ಯಸಂಗತಿಗಳೆಂಬಂತೆ ವರದಿ ಮಾಡತೊಡಗಿಬಿಟ್ಟರು. 'ಕಫೀಲ್‌ನೇ ಬಾಂಬರ್' ಎಂದು ತಂದೆ ಮಕ್ಬೂಲ್ ಒಪ್ಪಿಕೊಂಡಿದ್ದಾರೆಂದು ಆಜ್‌ತಕ್ ಎರಡು ದಿನಗಳ ಕಾಲ ಒಂದೇ ಸಮನೆ ಚೀರಿಕೊಂಡಿತು. ಆದರೆ ಈಗಾಗಲೇ ನಿವೃತ್ತ, ವಯೋವೃದ್ಧ ಮಕ್ಬೂಲರಿಗೆ Alzheimers (ಮರೆವಿನ ಕಾಯಿಲೆ) ಇದ್ದು ಅವರು ಏನನ್ನೂ ಗ್ರಹಿಸುವ ಅಥವಾ ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿಲ್ಲ ಎಂದು ಕುಟುಂಬದವರು ಎಷ್ಟು ಹೇಳಿದರೂ ಮೀಡಿಯಾಗಳು ಕಿವಿಗೆ ಹಾಕಿಕೊಳ್ಳಲಿಲ್ಲ. ಇದರೊಂದಿಗೆ ಸಬೀಲ್ ಕುಟುಂಬದವರಿಗೆ ಇಸ್ಲಾಂ ಉಗ್ರರ ನಂಟು, ಬೆಂಗಳೂರಲ್ಲಿ ಆಲ್ ಖೈದಾ ನೆಟ್‌ವರ್ಕ್, ಸಬೀಲ್ ಸೋದರಿ ಕೋಲಾರದಿಂದ ನಾಪತ್ತೆ, ಸಬೀಲ್ ತಂದೆಗೆ ಸೌದಿ ದುಡ್ಡು ಬರುತ್ತಿತ್ತು, ಡಾ. ಮಕ್ಬೂಲ್ ಮನೆಗೆ ಪಾಲೆಸ್ಟೈನ್ ಉಗ್ರರ ಭೇಟಿ... ಹೀಗೆ ಪುಂಖಾನು ಪುಂಖವಾಗಿ ಸ್ವಕಪೋಲಕಲ್ಪಿತ ವರದಿಗಳನ್ನು ಬಿತ್ತರಿಸುತ್ತಾ ಮೀಡಿಯಾ ಟೆರರಿಸಂ ಮುಂದುವರೆಸಿಬಿಟ್ಟರು. ಇದಕ್ಕೆ ಕಳಶವಿಟ್ಟಂತೆ ಡಿಸಿಪಿ ರವಿಕಾಂತೇಗೌಡ ಇವರ ಮನೆಗೆ ಭೇಟಿ ನೀಡಿ ಪೊಲೀಸರಿಗೆ ಅಗತ್ಯವಿರುವ ಮಾಹಿತಿ ಕೇಳಿ ಪಡೆದು ಹೋದರೆ 'ಇನ್ನೇನು ಕುಟುಂಬದವರ ಬಂಧನವಾಗಲಿದೆ' ಎಂಬ hype ಸೃಷ್ಟಿಸಲಾಯಿತು. ಸಿಟಿ ಪೊಲೀಸ್ ಕಮಿಷನರ್ ನೀಲಂ ಅಚ್ಯುತರಾವ್ ಡಾ. ಮಕ್ಬೂಲ್ ಕುಟುಂಬದವರ ವಿಚಾರಣೆ ನಡೆಸಲು ತಮ್ಮ ಕಚೇರಿಗೆ ಕರೆಸಿಕೊಂಡರೆ 'ಬಂಧಿಸಿ ಅಜ್ಞಾತ ಸ್ಥಳಕ್ಕೆ ಕರೆದೊಯ್ಯಲಾಗಿದೆ' ಎಂದು ಬಿಂಬಿಸಲಾಯಿತು.

ಹೀಗೆ ಪತ್ರಕರ್ತರೆನಿಸಿಕೊಂಡವರು ಕೋಣಬ ಹೊಕ್ಕವರಂತೆ ಪರದಾಡುತ್ತಾ ತಮ್ಮ ವರದಿಗಳಿಗೆ ತಾವೇ ದಿಕ್ಕು ಹೊಡೆದುಕೊಳ್ಳುತ್ತಾ ಹೊಸ ಅವಾಂತರಗಳನ್ನು ಸೃಷ್ಟಿಸುವುದನ್ನು ನೋಡಿ ನೋಡಿ ಬೇಸತ್ತ ಮಕ್ಬೂಲ್ ಕುಟುಂಬ 'ಇನ್ನು ಮೀಡಿಯಾಗಳೊಂದಿಗೆ ಮಾತಾಡುವುದು ಅನವಶ್ಯಕ' ಎಂದು ತೀರ್ಮಾನಿಸಿದರು. ಅವತ್ತೇ ಮನೆ ಗೇಟಿಗೆ ಬೀಗ ಬಿತ್ತು. ಅಲ್ಲಿಂದಾಚೆಗೆ ಪತ್ರಕರ್ತರಿಗೆಂದು ಅವರು ಬಾಗಿಲು ತೆರೆದಿದ್ದು 'ಲಂಕೇಶ್'ಗೆ ಮಾತ್ರ.

ಪತ್ರಕರ್ತರ ಎಡವಟ್ಟು ವರದಿಗಳು ಹೇಗಿವೆ ಎಂಬುದಕ್ಕೆ ಜುಲೈ 7 ರ ವಿಜಯ ಕರ್ನಾಟಕ ಪುಟ 10 ರಲ್ಲಿ ಪ್ರಕಟಿಸಲಾಗಿರುವ ಈ ವರದಿಯನ್ನೇ ಗಮನಿಸಿ.

'ಡಾ. ಸಬೀಲ್ ಸೋದರಿಗೆ ಹುಡುಕಾಟ' ಎಂಬ ತಲೆಬರಹದಡಿ ವಿಕ ಒಂದು ವರದಿ ಪ್ರಕಟಿಸಿ ಗ್ಲಾಸ್ಗೋ ಬಾಂಬಿಂಗ್ ಆರೋಪಿ ಡಾ. ಸಬೀಲ್‌ನ ಸೋದರಿ ಸಾದಿಯಾ ಕೋಲಾರದ ದೇವರಾಜ ಅರಸ್ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದು ಈಗ ನಾಪತ್ತೆಯಾಗಿದ್ದಾಳೆ, ಪೊಲೀಸರು ಅವಳಿಗಾಗಿ ತೀವ್ರ ಶೋಧ ನಡೆಸುತ್ತಿದ್ದಾರೆ, ಜೊತೆಗೆ ಆವಳ ಕ್ಲಾಸ್‌ಮೇಟ್‌ಗಳಿಬ್ಬರು (ಮುಸ್ಲಿಮರೇ) ಸಹ ನಾಪತ್ತೆಯಾಗಿದ್ದಾರೆಂದು ಕಂಡು ಹಿಡಿದಿತ್ತು. ವಿಪರ್ಯಾಸ ಏನು ಗೊತ್ತೆ?

ಅದೇ ವರದಿಯ ಪಕ್ಕ ವಿಕ ಒಂದು ಫೋಟೋ ಹಾಕಿ ಸಾದಿಯಾ ತನ್ನ ತಾಯಿಯೊಂದಿಗೆ ಕಮಿಷನರ್ ಅಚ್ಯುತರಾವ್ ಭೇಟಿಗೆ ಹೋಗುತ್ತಿರುವುದಾಗಿಯೂ ಪ್ರಕಟಿಸಿತ್ತು. ಹಾಗಾದರೆ ಸಾದಿಯಾ ಪರಾರಿ, ನಾಪತ್ತೆ ಎಂಬ ವರದಿಗೆ ಏನರ್ಥ?

ಪತ್ರಕರ್ತರೆನಿಸಿಕೊಂಡವರಿಗೆ ಹೊಣೆಗಾರಿಕೆ ಇರಬೇಡವೆ!

ಇನ್ನು ಈ ಸಂಜೆ, ಪ್ರಜಾವಾಣಿಯ ದಾವಣಗೆರೆಯ ಬಾಲಕ ವರದಿಗಾರ ಸಂತೋಷ್ ಕುಮಾರ್ 'ಡಾ. ಮಕ್ಬೂಲ್ ಮೂಲ ಪಾಕಿಸ್ತಾನದಲ್ಲಿದೆ, ಸಬೀಲ್ ಸೌದಿ ಪ್ರಜೆ, ಕಫೀಲ್‌ಗೆ ಬೇಲೂರಿನ ಲಿಂಕ್' ಎಂಬಿತ್ಯಾದಿ ಅಸಂಬದ್ಧಗಳನ್ನು ಬರೆದು ತಾವೂ ಒಂದಿಷ್ಟು ಸಮಾಜ



ಸೇವೆ ಮಾಡಿದ್ದಾರೆ.

ಡಾ. ಮಕ್ಬೂಲ್‌ರ ಅನಾರೋಗ್ಯ, ಡಾ. ಜಕಿಯಾರ ಸಂಕಟ, ಶಾಕ್ ಹಾಗೂ ಮಗಳು ಸಾದಿಯಾರ ಅಸಹಾಯಕತೆ ಇವ್ಯಾವುದನ್ನೂ ಕೇರ್ ಮಾಡದೆ ಮನೆ ಕಾಂಪೌಂಡ್ ಹಾರಿ ಕಲ್ಲೆಸೆದು ಕಿಟಕಿ ಬಾಗಿಲು ಜಜ್ಜುತ್ತಾ ಮೀಡಿಯಾ ಭಯೋತ್ಪಾದನೆ ನಡೆಸಿರುವ ಜನ ಈಗಾಗಲೇ ಈ ಪ್ರಕರಣದ ನ್ಯಾಯಾಧೀಶರೂ ಆಗಿಹೋಗಿದ್ದಾರೆ.

ಸ್ವತಃ ದಾಳಿಗೊಳಗಾದ ಇಂಗ್ಲೆಂಡ್ ಶಂಕಿತರ ವಿಚಾರಣೆ ನಡೆಸುತ್ತಿದೆ. ಕಫೀಲ್ ಹಾಗೂ ಸಬೀಲ್ ವಿರುದ್ಧ ಇನ್ನೂ ಯಾವುದೇ ಆರೋಪ ಹೊರಿಸಿಲ್ಲ. ಇತ್ತ ಬೆಂಗಳೂರು ಪೊಲೀಸರು ತಮ್ಮ ವ್ಯಾಪ್ತಿಯ ತನಿಖೆ ನಡೆಸುತ್ತಾ ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆದರೆ ಮೀಡಿಯಾಗಳು ಮಾತ್ರ ಕಫೀಲ್-ಸಬೀಲ್‌ರ ತಂದೆ-ತಾಯಿ, ತಂಗಿ, ಬಂಧುಗಳು ... ಸಮೋ... ಭಯೋತ್ಪಾದಕರ ಪಟ್ಟಿಗೆ ಸೇರಿಸಿಬಿಟ್ಟಿವೆ.

ಮೀಡಿಯಾಗಳ ... ಬೇಸತ್ತ ... "We are hurt."


ಬ್ರೈನ್‌ವಾಶ್ ಸೈಬರ್ ಜಿಹಾದ್



ಜೈಲಿನಲ್ಲೇ ಕೊರಂಗು ಗ್ಯಾಂಗ್ ಮಾಡಿದ ಕೊಲೆ

ರೌಡಿ ಕೊರಂಗು ಪಡೆ ಜೀವಭಯದಿಂದ ನರಳುತ್ತಿದೆಯಾ? ಮೊನ್ನೆ ಚಿತ್ರದುರ್ಗದ ಜೈಲಿನಲ್ಲಿ ತಿಪ್ಪೇಸ್ವಾಮಿ ಎಂಬಾತನ ಮೇಲೆ ಕೊರಂಗು ಸಹಚರರು ಮಾಡಿರುವ ಮರ್ಡರ್ ಅಟ್ಯಾಕ್ ಇಂಥ ಪ್ರಶ್ನೆಯೊಂದನ್ನು ಹುಟ್ಟು ಹಾಕಿದೆ.

ಕಳೆದ ಸೆಪ್ಟೆಂಬರ್‌ನಲ್ಲಿ ಹಿರಿಯೂರಿನ ಜವಗೊಂಡನಹಳ್ಳಿ ಡಾಬಾ ಬಳಿ ಹೆಬ್ಬೆಟ್ ಮಂಜನ ಗ್ಯಾಂಗು ಮುರಕೊಂಡು ಬಿದ್ದ ಪರಿಗೆ ಕೊರಂಗು ಗ್ಯಾಂಗ್ ತತ್ತರಿಸಿ ಹೋಗಿತ್ತು. ಸ್ವತಃ ಕೊರಂಗು ಕೈ ಕಳೆದುಕೊಂಡರೆ ದೀಪು ಎಂಬ ಸಹಚರನ ಎದೆಗೆ ತೂರಿದ ಕಾಡತೂಸುಗಳು ಆತನನ್ನು ನಿಂತಲ್ಲೇ ನೆಲಕ್ಕೊರಗಿಸಿದ್ದವು. ಈ ಘಟನೆಯ ನಂತರ ಹೆಬ್ಬೆಟ್ ಮಂಜನನ್ನು ಹಿಡಿದು ಜೈಲಿಗೆ ತಳ್ಳಲಾಯಿತಾದರೂ ಕೊರಂಗು ಪಡೆ ಮಾತ್ರ ಯಾವ ಕ್ಷಣದಲ್ಲಾದರೂ ತಮ್ಮ ಮೇಲೆ ನಡೆಯಬಹುದಾದ ದಾಳಿಯ ಸಾಧ್ಯತೆಯ ಬಗ್ಗೆ ಎಕ್ಸ್‌ಟ್ರಾ ಕೇರ್ ವಹಿಸುತ್ತಿತ್ತು.




ವೀರಭದ್ರಪ್ಪ


ಜೈಲಿನಲ್ಲೇ ಕುಳಿತು ಮೊಬೈಲಿನಿಂದಲೇ ತನ್ನ ದಂಧೆಗಳನ್ನೆಲ್ಲಾ ನಿಭಾಯಿಸಲಾರಂಭಿಸಿದ ಕೊರಂಗು ತನ್ನ ಶತ್ರುಶೇಷ ಮುಗಿಸಲು ಕೂಡಾ ಹೆಣಗಾಡುತ್ತಿದ್ದ. ಅದು ಕೈಗೂಡದಿದ್ದರಿಂದಲೇ ಕೊರಂಗು ಪಡೆಗೆ ಇನ್‌ಸೆಕ್ಯುರಿಟಿ ಎಂಬುದು ನಿರಂತರವಾಗಿ ಕಾಡುತ್ತಿತ್ತು.

ಇದರ ಪರಿಣಾಮ ಇಡೀ ಚಿತ್ರದುರ್ಗದ ಜೈಲನ್ನು ಕೊರಂಗು ಮತ್ತವರ ಸಹಚರರು ತಮ್ಮ ತೆಕ್ಕೆಗೆ ತೆಗೆದುಕೊಂಡರು. ಜೈಲು ಅಧಿಕಾರಿಗಳು-ಪೊಲೀಸರು ಕೊರಂಗು ಪಡೆಯ ಏಜೆಂಟರಾಗಿ ಬದಲಾದರು. ಕೊರಂಗು ಪಡೆಯ ಎಲ್ಲಾ ಅಗತ್ಯಗಳನ್ನು ಪೂರೈಸಲಾರಂಭಿಸಿದರು.

ಜೈಲ್ ವಾರ್ಡರುಗಳಾದ ಮಲ್ಲಿಕಾರ್ಜುನ, ಶಿವಣ್ಣ, ಸುರೇಶ್‌ಬಾಬು, ರಫೀಕ ಎಂಬ ದಲ್ಲಾಳಿಗಳು ಕೊರಂಗು ಪಡೆಗೆ ಬೇಕಾದ ಮೊಬೈಲು, ಎಲೆಕ್ಟ್ರಿಕ್ ಸ್ಟೌವ್, ಎಟಿಎಂ ಕಾರ್ಡುಗಳು, ಸಿಗರೇಟು-ಗಾಂಜಾ, ಮಾಂಸ-ಮದ್ಯ ಎಲ್ಲವನ್ನೂ ಪೂರೈಸುತ್ತಿದ್ದರು. ಇದನ್ನೆಲ್ಲಾ ಕೊರಂಗು ಪಡೆಗೆ ಹೆದರಿ ಮಾಡುತ್ತಿರಲಿಲ್ಲ. ಕೊರಂಗು ಪಡೆ ಎಂಜಲು ರೂಪದಲ್ಲಿ ಕೊಡುತ್ತಿದ್ದ ಆಮದನಿ ಜೈಲು ಅಧಿಕಾರಿಗಳನ್ನು ಗುಲಾಮರನ್ನಾಗಿ ಮಾಡಿಬಿಟ್ಟಿತ್ತು. ಜೈಲು ಪೊಲೀಸ್ ಅಧಿಕಾರಿಗಳ ಕೆಲಸ ಹಾಜರಾತಿ ಹಾಕುವುದಕ್ಕೆ, ಉತ್ಸವಮೂರ್ತಿಗಳಂತೆ ಕುಳಿತುಕೊಳ್ಳಲಿಕ್ಕೆ ಸೀಮಿತವಾಯಿತು. ಜೈಲಿನಲ್ಲಿ ಯಾವ ಅಡುಗೆ ಮಾಡಬೇಕು? ಯಾರು ಮಾಡಬೇಕು? ಯಾವ ಖೈದಿಯನ್ನು ಯಾವ ಸೆಲ್‌ಗೆ ಕಳುಹಿಸಬೇಕು? ವಿಚಾರಣಾಧೀನ ಖೈದಿಗಳು ಸಂಬಂಧಿಕರನ್ನು ಭೇಟಿ ಮಾಡುವಾಗ ಯಾವ ರೀತಿ ಎಚ್ಚರಿಕೆ ವಹಿಸಬೇಕು? ಹೀಗೆ ಪ್ರತಿಯೊಂದನ್ನು ಕೊರಂಗು ಪಡೆ ನಿಯಂತ್ರಿಸುತ್ತಿತ್ತು.



ತಿಪ್ಪೇಸ್ವಾಮಿಯ ಹೆಂಡತಿ



ಚಿತ್ರದುರ್ಗದ ಕಾರಾಗೃಹಕ್ಕೆ ಹೋಗಿ ಬಂದ ಪ್ರತಿ ವಿಚಾರಣಾ ಖೈದಿಯೂ ಕೊರಂಗು ಸಹಚರರ ಈ ಅಂದಾದುಂಧಿ ದರ್ಬಾರಿನ ಸಾಕ್ಷಾತ್ ದರ್ಶನವಾಗಿದೆ. ಜೊತೆಗೆ ಜೈಲು ಅಧಿಕಾರಿಗಳ ಹೇತ್ಲಾಂಡಿತನವೂ ಗೊತ್ತಾಗಿದೆ. ಮತ್ತೆ ಕೆಲವರು ಕೊರಂಗು ಪಡೆಯ ಒದೆಗಳ ರುಚಿಯನ್ನೂ ನೋಡಿದ್ದಾರೆ. ಒಟ್ಟಾರೆ ಕೊರಂಗು ಪಡೆ ತಮಗಿರುವ ಅಭದ್ರತೆ-ಭಯದ ಕಾರಣದಿಂದಲೇ ಇಷ್ಟೆಲ್ಲಾ ಸರ್ಕಸ್ಸು ಮಾಡುತ್ತಿತ್ತೆಂಬುದು ಬಹಿರಂಗವಾಗಿ ಹೋಗಿತ್ತು. ಹೇಳೋರು-ಕೇಳೋರು ಇಲ್ಲದ ಬಂದೀಖಾನೆಯಲ್ಲಿ ಕೊರಂಗು ಪಡೆ ತನ್ನ ದರ್ಬಾರನ್ನು ಮುಂದುವರಿಸುತ್ತಲೇ ಇತ್ತು.

ಅಲರ್ಟ್ ಆದರು


ಕಳೆದ 26 ರಂದು ದರೋಡೆ ಹಾಗೂ ಅಕ್ರಮ ಶಸ್ತ್ರಾಸ್ತ್ರ ಹೊಂದಿದ್ದ ತಿಪ್ಪೇಸ್ವಾಮಿ ಮತ್ತು ಒಂಭತ್ತು ಜನ ಸಹಚರರನ್ನು (ರಾಯಲಸೀಮೆ ಫ್ಯಾಕ್ಷನ್ನೊಂದರ ಜೊತೆ ಗುರುತಿಸಿಕೊಂಡಿದ್ದವರು) ಬಳ್ಳಾರಿ ಜೈಲಿನಿಂದ ಚಿತ್ರದುರ್ಗ ಜೈಲಿಗೆ ಯಾವಾಗ ಶಿಫ್ಟು ಮಾಡಿದರೋ ಆ ಕ್ಷಣದಿಂದಲೇ ಕೊರಂಗು ಪಡೆ ಅಲರ್ಟ್ ಆಗಿದೆ. ಬಳ್ಳಾರಿ ಜೈಲಿನಲ್ಲಿರುವ ತಮ್ಮ ಶತ್ರುಪಡೆಯ ಬಳ್ಳ, ವಿಜಿ ಮುಂತಾದವರು ಈ ಗ್ಯಾಂಗ್‌ಗೆ ಸುಪಾರಿ ಕೊಟ್ಟು ತಮ್ಮ ಮೇಲೆ ದಾಳಿ ನಡೆಸಲಿಕ್ಕೆಂದೇ ಕಳುಹಿಸಿದೆ ಎಂದು ಸಂಶಯಿಸಿದೆ.

ತಿಪ್ಪೇಸ್ವಾಮಿ ಸಹಚರರಿಗೆ ಆ ಉದ್ದೇಶವಿತ್ತೋ ಇಲ್ಲವೋ, ಅಂತೂ ತಿಪ್ಪೇಸ್ವಾಮಿ ಮೊಬೈಲಿನಲ್ಲಿ ಹೊರಗಿನವರೊಂದಿಗೆ ನಡೆಸುತ್ತಿದ್ದ ಸಂಭಾಷಣೆ ಕೊರಂಗುಪಡೆಯ ಸಂಶಯದ ಬೇರಿಗೆ ನೀರೆರೆದಿದೆ. 30 ರಂದು ರಾತ್ರಿ ತಿಪ್ಪೇಸ್ವಾಮಿ ಮೊಬೈಲಿನಲ್ಲಿ ಮಾತನಾಡುವಾಗಲೇ ಗಲಾಟೆ ಆಗಿದೆ. ಒಂದನೇ ತಾರೀಖು ಮಧ್ಯಾಹ್ನ ಕೊರಂಗು ಪಡೆ ತಿಪ್ಪೇಸ್ವಾಮಿಯನ್ನು ಮೊಬೈಲ್ ಕೇಳುವ ನೆಪದಲ್ಲಿ ಅಟಕಾಯಿಸಿಕೊಂಡು ಹಿಗ್ಗಾಮುಗ್ಗಾ ಬಾರಿಸಿದೆ. ಅರೆಪ್ರಜ್ಞಾವಸ್ಥೆಗೆ ಹೋಗಿದ್ದ ತಿಪ್ಪೇಸ್ವಾಮಿಯನ್ನು ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದಾರೆ. ತಿಪ್ಪೇಸ್ವಾಮಿ ಪರಿಸ್ಥಿತಿ ತೀರ ಬಿಗಡಾಯಿಸಿದ್ದರಿಂದ ಡಾಕ್ಟರುಗಳಿಗೆ ನಿಮ್ಹಾನ್ಸ್‌ಗೆ ಕರೆದುಕೊಂಡು ಹೋಗುವಂತೆ ಹೇಳಿ ಕೈತೊಳೆದುಕೊಂಡಿದ್ದಾರೆ. ಹಾಗೆ ಮಾರ್ಗ ಮಧ್ಯದಲ್ಲಿ ಹೋಗುವಾಗ ತಿಪ್ಪೇಸ್ವಾಮಿ ಸಾವನ್ನಪ್ಪಿದ್ದಾನೆ.

ಇದು ಜೈಲಿನಲ್ಲಿ ಕೊರಂಗು ಪಡೆ ನಡೆಸಿದ ದೌರ್ಜನ್ಯದಿಂದಲೇ ಸಂಭವಿಸಿರುವ ಸಾವು ಎಂದು ಸಾಬೀತಾದರೆ ನಾವೆಲ್ಲ ಶಾಶ್ವತವಾಗಿ ಮನೆ ಸೇರಿಕೊಳ್ಳಬೇಕಾಗುತ್ತದೆ ಎಂದು ತರ್ಕಿಸಿದ ಪೊಲೀಸರು ತಿಪ್ಪೇಸ್ವಾಮಿಗೆ ವಿಪರೀತ ಜ್ವರ ಬಂದಿತ್ತು, ಬಾತ್‌ರೂಮಿನಲ್ಲಿ ಬಿದ್ದು ತಲೆಗೆ ಪೆಟ್ಟಾಗಿ ಸತ್ತುಹೋಗಿದ್ದಾನೆಂದು ಕತೆ ಕಟ್ಟಿದ್ದಾರೆ. ತಿಪ್ಪೇಸ್ವಾಮಿ ಕುಟುಂಬದವರು ನೂರಾರು ಸಂಖ್ಯೆಯಲ್ಲಿ ಬಂದು ಪ್ರಕರಣದ ತನಿಖೆಗೆ ಒತ್ತಾಯಿಸಿರುವುದು ಕೂಡಾ ಜೈಲು ಅಧಿಕಾರಿಗಳು ಹಾಗೂ ಕೊರಂಗು ಪಡೆಗೆ ಆತಂಕ ಹುಟ್ಟಿಸಿದೆ. ಈ ನಡುವೆ ಕೆಲ ಜೈಲು ವಾರ್ಡರುಗಳ ಮಧ್ಯಸ್ಥಿಕೆಯೊಂದಿಗೆ ಕೊರಂಗು ಪಡೆ ತಿಪ್ಪೇಸ್ವಾಮಿ ಮನೆಯವರಿಗೆ ಐದು ಲಕ್ಷ ರೂ. ಆಫರು ಕೊಟ್ಟು ಪ್ರಕರಣ ಮುಂದುವರಿಸದಂತಿರಲು ನೋಡಿಕೊಳ್ಳುವ ತಂತ್ರ ಮಾಡಿದ್ದಾರೆ. ಕೆಲ ಮೂಲಗಳ ಪ್ರಕಾರ ಈ ಡೀಲು ಮುಗಿದಿದೆ. ಇದರ ಸುತ್ತ ಅಂತೆ-ಕಂತೆಗಳು ಮುಂದುವರಿದಿವೆ.

ಗೃಹ ಸಚಿವರು, ಸಂಬಂಧಪಟ್ಟ ಇಲಾಖೆಯ ಸಚಿವರು ಜೈಲು ಸೂಪರಿಂಟೆಂಡೆಂಟ್ ಎ. ವೀರಭದ್ರಪ್ಪ ಹಾಗೂ ವಾರ್ಡರುಗಳಾದ ಮಲ್ಲಿಕಾರ್ಜುನ, ರೇವಣ್ಣ, ಸುರೇಶ್ ಬಾಬು, ರಫೀಕ್ ಇವರುಗಳನ್ನು ಮನೆಗೆ ಕಳುಹಿಸಿ ಕೊರಂಗು ಪಡೆಯನ್ನು ಹದ್ದುಬಸ್ತಿನಲ್ಲಿಡುವ ಖಡಕ್ ಅಧಿಕಾರಿಗಳನ್ನು ಇಲ್ಲಿ ನೇಮಿಸದೇ ಹೋದರೆ ತಿಪ್ಪೇಸ್ವಾಮಿಯಂಥವರ ಹೆಣಗಳು ಬೀಳುತ್ತಲೇ ಇರುತ್ತದೆ. ಜೈಲುಗೋಡೆಗಳು ರಕ್ತಸಿಕ್ತವಾಗುತ್ತಲೇ ಇರುತ್ತವೆ.

-ವರದಿಗಾರ




ಕೊಲೆಯಾದ ಅಫ್ಜಲ್

ಬನಶಂಕರಿ ಸುತ್ತಮುತ್ತಲ ಮುಸ್ಲಿಂ ಏರಿಯಾಗಳಾದ ಯಾರಬ್‌ನಗರ, ಇಲಿಯಾಸ್ ನಗರ, ಸರಬಂಡೆ ಪಾಳ್ಯ ಭೈರಸಂದ್ರ, ತಿಲಕ್‌ನಗರಗಳಲ್ಲಿ ಅದ್ಯಾವತ್ತು ಗ್ಯಾಂಗ್‌ವಾರ್ ಭುಗಿಲೇಳುತ್ತೋ ಗೊತ್ತಿಲ್ಲ. ಜಯನಗರದ ಕಿರಾತಕ ಭೈರಸಂದ್ರದ ಅಸಗರ್ ಕೋಲಾರ ಜೈಲಿನಿಂದ ಎಸ್ಕೇಪಾದಾಗಿನಿಂದ ಈ ಭಾಗದ ಮುಸ್ಲಿಮರ್‍ಯಾರಿಗೂ ನೆಮ್ಮದಿಯಿಲ್ಲ. ಹಾಗೇ ಜೂನ್ 30 ರಂದು ಮೈ ಹುಷಾರಿಲ್ಲ ಎಂದು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆಂದು ಮತ್ತೊಬ್ಬ ಪಾತಕಿ ಪಂಟರ್ ಖಲೀಂನ ಜೊತೆ ಬಂದ ಅಸಗರ್, ವಾಪಸ್ಸು ಕೋಲಾರ ಜೈಲಿಗೆ ಹೋಗುವಾಗ ಬೆಂಗಾವಲಿಗಿದ್ದ ಪೊಲೀಸರನ್ನು ಡಾಬಾಕ್ಕೆ ಕರೆದೊಯ್ದು ಕಂಠಮಟ್ಟ ಕುಡಿಸಿ ಎಸ್ಕೇಪಾಗಿದ್ದಾನೆ. ಅಂದು ಆತನ ಎಸ್ಕೇಪಿಗೆ ನೆರವಾದ ಇಬ್ಬರೂ ಪೊಲೀಸ್ ಪೇದೆಗಳನ್ನು ಕೋಲಾರದ ಎಸ್ಪಿ ರವೀಂದ್ರ ಪ್ರಸಾದ್ ಜೈಲಿಗೆ ಹಾಕಿದ್ದಾರೆ. ಕೋಲಾರ ಜೈಲಿನ ಖೈದಿಗಳೆಲ್ಲ ಇವತ್ತು ಬೆಂಗಳೂರಿನ ಅಸಗರ್ ತಂಡದ ರೋಫ್‌ಗ
ಜಯನಗರ ಪೊಲೀಸರು ಬ
ಯಲು ಹೋಗಿ ಆತ ಪೊಲೀ
ಜೊತೆಗಿನ ಕಾಳಗದಲ್ಲಿ ಸ
ಹೋದ.

ಆವತ್ತು ಸೆರೆಸಿಕ್ಕ ಅಸಗ
ನನ್ನು ಕೋಲಾರ ಜೈಲಿಗೆ ಕಳ
ತ್ತಿದರೆ ಈಗ ಅಲ್ಲಿಂದಲೇ ಎ
ಹಾಗಿದ್ದಾನೆ. ಅಷ್ಟಕ್ಕೂ ಅಸಗ
ಮತ್ತು ಆತನ ಬಂಟ ಖಲೀ
ಸುಮ್ಮನೇ ಎಸ್ಕೇಪಾಗಿಲ್ಲ. ಅವ
ತಮ್ಮಿಂದ ಕೊಲೆಯಾದ ಅಫ್ಜಲ
ತಮ್ಮ ಕೇಬಲ್ ರಿಜ್ವಾನ್‌ನ
ಕೊಲ್ಲುವ ಶಪಥಗೈದೇ ಜೈಲಿ
ತಪ್ಪಿಸಿಕೊಂಡಿದ್ದಾರೆ. ರಿಜ್ವಾ
ಸಿಗದೇ ಹೋದರೆ ಅಫ್ಜಲ್‌ನ ಬಾಮೈದ ಬಾಬುವ
ಮುಗಿಸುತ್ತೇವೆಂದು ಹೇಳಿದ್ದಾರೆ. ಏಕೆಂದರೆ ಅಫ್ಜ
ಕೊಲೆ ಕೇಸಿಗೆ ಇವರೇ ಪ್ರತ್ಯಕ್ಷ ಸಾಕ್ಷಿಗಳು. ಇ
ಜುಲೈ 17ಕ್ಕೆ ಅಫ್ಜಲ್ ಹತ್ಯೆ ಕೇಸಿಗೆ ಕೋರ್ಟಿ
ಬಂದು ಇವರು ಸಾಕ್ಷಿ ಹೇಳಿಬಿಟ್ಟರೆಂದರೆ ಇಡೀ ಅಸಗ
ಗ್ಯಾಂಗ್ ಜೀವನ ಪರ್ಯಂತ ಜೈಲಲ್ಲಿರಬೇಕು!

ಬನಶಂಕರಿ ಮುಸ್ಲಿಮರಿಗೆ ಅಸಗರ್‌ನೇ ಸೈತಾನ!



ಅಫ್ಜಲ್‌ನ ಪತ್ನಿ ಶಾತಾಜ್ ಜೊತೆ ಮಗ ಅಜರ್

ರೌಡಿಗಳ ವಿರುದ್ಧ ಪ್ರತಿಭಟಿಸುತ್ತಿದ್ದಾರೆಂದರೆ ಅದಕ್ಕಿರುವ ಕಾರಣಗಳಲ್ಲಿ ಅಸಗರ್‌ನ ಎಸ್ಕೇಪ್ ಮತ್ತು ಪೊಲೀಸರಿಗಾದ ಗತಿಯೂ ಒಂದು.

ಬೆಂಗಳೂರಿನ ಹೀನಾತಿಹೀನ ಪಾತಕಿ ನಸ್ರುನನ್ನು ಪೊಲೀಸರು ಗುಂಡಿಟ್ಟು ಕೊಲ್ಲದೇ ಹೋಗಿದ್ದರೆ ಆತ ಯಾವತ್ತೋ ಈ ಅಸಗರ್‌ನನ್ನು ಮುಗಿಸಿಬಿಡುತ್ತಿದ್ದ. ನಸ್ರು, ಆತನ ಅಣ್ಣ ಜಬಿ, ಬಂಟ ಜಮೀಲ್, ಶಿಷ್ಯ ಮುಸ್ತಫಾ ಮುಂತಾದ ರೇಪಿಸ್ಟ್ ಹಿಂಡನ್ನು ಹುಟ್ಟುಹಾಕಿದ್ದೇ ಭೈರಸಂದ್ರ ಅಸಗರ್. ಇವರೆಲ್ಲರಿಗೂ ಗುರುವಾಗಿದ್ದಾತ ರೋಫ್. ಮೊದಮೊದಲು ಒಟ್ಟೊಟ್ಟಿಗೇ ರಾಬರಿ, ಬ್ಯಾಂಡ್ ಹುಡುಗಿಯರ ರೇಪ್ ಮಾಡಿಕೊಂಡಿದ್ದರು. ಅದೊಮ್ಮೆ ಅಸಗರ್ ನಸ್ರು ಅಣ್ಣ ಜಬಿಯನ್ನು ಹಿಡಿದು ಚಚ್ಚಿದ. ಅಷ್ಟಕ್ಕೇ ನಸ್ರು ಗುರು ಅಸಗರ್‌ನ ಕೈಯನ್ನೇ ಕತ್ತರಿಸಿದ್ದ. ಅಲ್ಲಿಗೆ ಅಸಗರ್ ಕತೆ ಮುಗಿಯಿತೆಂದೇ ಎಲ್ಲರೂ ಭಾವಿಸಿದರೆ, ಆತನ ಕೈ ಹಿಡಿದವನು ಲ್ಯಾಂಡ್ ರೌಡಿ ಮಾಹಿನ್!



ಅಲೋಕ್ ಕುಮಾರ್

ಅದೇ ಹೊತ್ತಿಗೆ ನಸ್ರು ಗ್ಯಾಂಗ್ ಜೈಲು ಪಾಲಾಗಿತ್ತಲ್ಲ; ಅಸಗರ್ ಜಯನಗರದ ಮತ್ತೊಬ್ಬ ಪಂಟರ್ ಕೇಬಲ್ ರಿಜ್ವಾನ್‌ನ ಅಣ್ಣ ಅಫ್ಜಲ್‌ನನ್ನು ಪೀಡಿಸಲಾರಂಭಿಸಿದ. ಅವಲಹಳ್ಳಿಯಲ್ಲಿ ಮನೆ ಕಟ್ಟಿಸುತ್ತಿದ್ದ ಅಫ್ಜಲ್ ಆ ಹೊತ್ತಿಗೆ ಕಾಂಗ್ರೆಸ್ ಮುಖಂಡ. ಆತನ ಪತ್ನಿ ಶಾತಾಜ್ ಬೇಗಂ ಇಲಿಯಾಸ್ ನಗರ ವಾರ್ಡಿನಲ್ಲಿ ಪಾಲಿಕೆಯ ಚುನಾವಣೆಗೆ ನಿಂತಿದ್ದಳು. ಇಬ್ಬರು ಮಕ್ಕಳಿದ್ದರು. 'ಮನೆ ಕಟ್ಟಿಸುತ್ತಿದ್ದೀಯಲ್ಲಾ ಐವತ್ತು ಸಾವಿರ ರೂಪಾಯಿ ರೋಲ್‌ಕಾಲ್ ಮಡಗು' ಎಂದು ಅಸಗರ್ ಪೀಡಿಸಿದ್ದಾನೆ. ಕೊಟ್ಟಿದ್ದರೆ ಅಫ್ಜಲ್ ಬದುಕುತ್ತಿದ್ದ. ಸ್ವಾಭಿಮಾನಕ್ಕೆ ಬಿದ್ದು ಅನ್ಯಾಯವಾಗಿ ಸತ್ತ.


ಐವತ್ತು ಸಾವಿರ ರೂಪಾಯಿ ರೋಲ್‌ಕಾಲ್ ಕೊಟ್ಟಿಲ್ಲ ಎಂಬ ಒಂದೇ ಕಾರಣಕ್ಕೆ ಇಲಿಯಾಸ್ ನಗರದ ನೂರಾನಿ ಮಸದೀಯ ಬಳಿ 2005ರ ಮಾರ್ಚ್ 16 ರಂದು ಅಸಗರ್, ಪಂಟರ್ ಖಲೀಂ, ಆಲಿ, ಕೈಸ್ ಮತ್ತು ರೋಫ್ ಸೇರಿಕೊಂಡು ಮುಗ್ಧ ಅಫ್ಜಲ್‌ನನ್ನು ಕೊಚ್ಚಿ ಕೊಂದರು. ಅಫ್ಜಲ್ ಪತ್ನಿ ಆ ಹೊತ್ತಿಗಾಗಲೇ ಪೊಲೀಸ್ ರಕ್ಷಣೆ ಕೋರಿದ್ದಳು. ಅದಕ್ಕೂ ಮುನ್ನ ಈದು ಎಂಬುವವನನ್ನು ಅಸಗರ್ ಕೊಂದಿದ್ದ. ಅಫ್ಜಲ್‌ನ ಬಾಮೈದ ಬಾಬು ಮನೆ ಮೇಲೆಯೇ ಅಸಗರ್ ದಾಳಿ ನಡೆಸಿ ಹೆಂಗುಸರ ಕೈಕಾಲು ಕತ್ತರಿಸಿದ್ದ. ಹಾಗೇ ಒಂದರ ಮೇಲೊಂದು ಕೊಲೆ ಮಾಡಿ ತಲೆಮರೆಸಿಕೊಂಡು ಕಾಟಕೊಡುತ್ತಿದ್ದ

ಅದರಿಂದ ಬ
ವಾಗಬೇಕೆಂದರೆ ಉ
ದಿರುವ ದಾರಿಯೊಂದ
ರಿಜ್ವಾನ್ ಮತ್ತು ಬಾ
ವನ್ನು ಮುಗಿಸಿಬಿಡ
ವುದು!

ಹಾಗಂಥ ಕೇಬಲ್
ರಿಜ್ವಾನ್ ಸುಮ್ಮನೇ
ಕೂತಿಲ್ಲ. ತನ್ನ ತಮ್ಮನ
ಕೊಲೆಗೆ ಪ್ರತಿಕಾರ
ಹೇಳಲೆಂದೇ ಎಸ್ಕೇಪಾ
ಅಸಗರ್‌ನನ್ನು ಹುಡುಕುತ್ತಾ ಫೀಲ್ಡಿಗಿಳಿದಿದ್ದಾನೆ. ಆದ
ಸುಲಭಕ್ಕೆ ಅಸಗರ್ ಸಿಗಬೇಕಲ್ಲ. ಯಾರ್‍ಯಾರು ಕೇಬಲ
ರಿಜ್ವಾನ್‌ನನ್ನು ಬೆಂಬಲಿಸುತ್ತಾರೋ ಅವರನ್ನೆಲ್ಲ ಮುಗಿ
ತ್ತೇನೆಂದು ಧಮಕಿ ಕೊಟ್ಟಿದ್ದಾನೆ. ಬನಶಂಕರಿ ಸುತ್ತಮುತ್ತ
ಮುಸ್ಲಿಂ ಶ್ರೀಮಂತರಿಗೆಲ್ಲ ಫೋನ್ ಮಾಡಿ ದುಡ್ಡಿಗಾ
ಧಮಕಿ ಹಾಕುತ್ತಲೇ ಇದ್ದಾನೆ. ಇದಿಷ
ಆಗಿದ್ದರೆ ಪರವಾಗಿರಲಿಲ್ಲ. ಆದರೆ ಅಸಗ
ಬೆನ್ನಿಗಿರುವವನು ಮಹಾನ್ ಪಾತ
ಮಾಹಿನ್. ಆತ ಎಲ್ಲಲ್ಲಿ ಲ್ಯಾಂಡಿಗೆ ಕೈಹ
ದ್ದಾನೋ ಅಲ್ಲೆಲ್ಲ ಮಾಹಿನ್‌ನ ವಿರೋ
ಗಳನ್ನು ಅಸಗರ್ ಮುಗಿಸುತ್ತಾನೆ. ಹಾಗ
ಬನಶಂಕರಿಯ ಮುಸ್ಲಿಮರು ಥರಗುಟ
ತ್ತಿದ್ದಾರೆ.

ಎಲ್ಲಕ್ಕೂ ಮಿಗಿಲಾಗಿ ಡಿಸಿಪಿ ಅಲೋಕ್ ಕುಮಾರ್‌ಗೆ ಅಸಗರ್ ಎಸ್ಕೇಪಾದಾಗಿನಿಂದ ನಿದ್ದೆಯೆಂಬುದಿಲ್ಲ. ಅಸಗರ್ ಸಿಗುವ ತನಕ ಅವರು ವಿರಮಿಸುವುದಿಲ್ಲ. ಏಕೆಂದರೆ ಅಸಗರ್ ಸತ್ತ ನಸ್ರುನ ಮತ್ತೊಂದು ರೂಪ.

-ವರದಿಗಾರ



ಕೈಗಾರಿಕೆಗೆ ಬಲಿಯಾಗುತ್ತಿರುವ ರೈತರ ಭೂಮಿ!

ಕೊಪ್ಪಳ

ಕೈಗಾರಿಕೆ ಹೆಸರಲ್ಲಿ ಕೊಪ್ಪಳದ ರೈತರ ಭೂಮಿಯನ್ನು ...ದ ಬೆಲೆಗೆ ಕಿತ್ತುಕೊಳ್ಳುತ್ತಿರುವ ಕಾರ್ಖಾನೆಗಳು ಈಗ ...ರು. ಬಡವರು, ಭೂಹೀನರು ಸಾಗುವಳಿ ...ಮಾಡುತ್ತಿದ್ದ ಸರ್ಕಾರಿ ಭೂಮಿಗೆ ಬಾಯಿ ಹಾಕಿವೆ. ...ತಲಾಂತರದಿಂದ ಸಾಗುವಳಿ ಮಾಡುತ್ತಿದ್ದ ಇಲ್ಲಿನ ...ಗಿಣಿಗೇರಾ, ಬಸಾಪುರ, ರೆಡದಾಳ, ಅಲ್ಲಾನಗರದ ಭೂ...ತ ಕೃಷಿಕರ ಬದುಕು ಈಗ ಬೀದಿಗೆ ಬರುತ್ತಿದೆ. ...ಜೊತೆಗೆ ಬಸಾಪುರದ ಸರ್ವೆ ನಂ. 143 ರ 44 ...ಕರೆಯ ಕೆರೆಯನ್ನು ಎಂಎಸ್‌ಪಿಎಲ್ ನುಂಗಲು ...ಹೊರಟಿದೆ. ಇದನ್ನು ವಿರೋಧಿಸಿ ಕರ್ನಾಟಕ ರೈತ ...ಘ ಸರ್ವೆ ನಂ.16 ರಲ್ಲಿ ಆರಂಭಿಸಿರುವ ...ಅನಿರ್ದಿಷ್ಟ ಧರಣಿ 35 ದಿನ ದಾಟಿದ್ದರೂ ...ಇದುವರೆಗೂ ಕೊಪ್ಪಳ ಶಾಸಕ ಬಸವರಾಜ ...ಹಿಟ್ನಾಳ್, ಸಂಸದ ವಿರುಪಾಕ್ಷಪ್ಪ, ಸಚಿವ ...ಇಕ್ಬಾಲ್ ಅನ್ಸಾರಿ ಯಾರೊಬ್ಬರೂ ಇತ್ತ ಹಾಯ್ದಿಲ್ಲ. ...ಗೆ ಬಸಾಪುರ ಗ್ರಾಮದ 186, ಗಿಣಿಗೇರಾ 350, ...ರೆಡದಾಳನ 30, ಅಲ್ಲಾನಗರದ 395 ಎಕರೆಯಲ್ಲಿ ...ಭೂರಹಿತರು, ದಲಿತರು, ಸಾಗುವಳಿ ಮಾಡಿಕೊಂಡಿದ್ದ ...ವಿರಗಟ್ಟಲೆ ಎಕರೆ ಭೂಮಿಯನ್ನು ಕಾರ್ಖಾನೆಗೆ ...ಕಿತ್ತುಕೊಳ್ಳಲಾಗುತ್ತಿದೆ. 30 ವರ್ಷಗಳಿಂದ ಈ ಭೂಮಿ ...ಸಾಗುವಳಿದಾರರಿಗೆ ಪಟ್ಟಾ ನೀಡುವಂತೆ ಆಗ್ರಹಿಸು...ತ್ತಿದ್ದರೂ ಯಾರೂ ಕ್ಯಾರೇ ಅಂದಿಲ್ಲ, ಈಗ ಇವರ ...ಬದುಕು ಕತ್ತಲಮಯವಾಗುತ್ತಿದೆ. ಎತ್ತಲಿಂದಾದರೂ ...ಯಾವುದೇ ಭರವಸೆಯ ಬೆಳಕು ಕಾಣುತ್ತಿಲ್ಲ.

ಬಲ್ಡೋಟನ ಎಂಎಸ್‌ಪಿಎಲ್‌ಗೆ ಬೇಕಾಗಿರೋದು ...034 ಎಕರೆ ಭೂಮಿ. ಅದಕ್ಕೆ ದಲಿತರ, ಭೂಹೀನರ ...ಸಾಗುವಳಿಯ ಸರ್ಕಾರಿ ಭೂಮಿ ನುಂಗಲು ಹೊರಟಿ...ರುವ ಕಂಪನಿ ಈಗ ನೂರಾರು ಎಕರೆಗೆ ನೀರುಣಿಸುವ ...ಗಿಣಿಗೇರಾ ಕೆರೆ ನುಂಗಲು ಹೊಂಚು ಹಾಕಿದೆ. ಕೆರೆಗೆ ...ನೀರು ಹರಿದು ಬರುವ ಪ್ರದೇಶವನ್ನೇ ಖರೀದಿಸಿ, ...ಕೆರೆಯನ್ನು ನೀರಿಲ್ಲದಂತೆ ಒಣಗಿಸಿ ನುಂಗುವುದು ಅದರ ...ಹೊಂಚು. ಅದಕ್ಕಾಗಿ ಕೆರೆಯ ಹಿಂಭಾಗದಲ್ಲಿ ಕಂಪನಿ ...ಂತ ಏರೋಡ್ರಮ್ ನಿರ್ಮಿಸಿಕೊಂಡಿದೆ. ಈಗ ಉಳಿದಿ...ರುವುದು ಕೆರೆ ನುಂಗುವ ಕಾಯಕ ಮಾತ್ರ.

ಪಶ್ಚಿಮ ಬಂಗಾಳದ ಸಿಂಗೂರಿನಲ್ಲಿ ಒದೆಸಿಕೊಂಡು ...ದಾ ಧಾರವಾಡದ ಬಳಿ ಟಾಟಾ ಕಾರ್ಖಾನೆ ಬಂದು ಬಿದ್ದಿದ್ದರೆ, ಕೊಪ್ಪಳಕ್ಕೆ ಎಲ್ಲೆಲ್ಲಿವ್ರೋ ಕಾರ್ಖಾನೆಗಳು ತಾವೇ ಬಂದು ಬೀಳುತ್ತಿವೆ. ಅಲ್ಟ್ರಾಟೆಕ್ ಸಿಮೆಂಟ್ ಕಂಪನಿ ಕೂಡ ಗಿಣಿಗೇರಿಯ ದಾಸಪ್ಪ, ಮಂಜುನಾಥ ಮಠಪತಿಯವರ ಜಮೀನು ಕಿತ್ತುಕೊಂಡಿದೆ. ವರ್ಷದ ಒಂದೆಕರೆಗೆ ಒಂದು ರೂಪಾಯಿಯಂತೆ ಲೀಸ್ ಮೇಲೆ 99 ವರ್ಷಗಳ ಕಾಲ ಭೂಮಿ ಪಡೆಯುವ ಕಾರ್ಖಾನೆಗಳಿಗೆ KIADB ಯೇ ಮುಂದು ನಿಂತು ಭೂಮಿ ಪರಭಾರೆ ಮಾಡುತ್ತಿದೆ. ಇನ್ನು ಕೆಲವೇ ತಿಂಗಳಲ್ಲಿ ಇಲ್ಲಿರುವ 1664 ಎಕರೆ ಸರ್ಕಾರಿ ಭೂಮಿ ಕಾರ್ಖಾನೆಗಳ ಪಾಲಾದರೂ ಆಶ್ಚರ್ಯವಿಲ್ಲ. ಇದಕ್ಕಾಗಿ ಶಾಸಕ ಪಡೆಯುತ್ತಿರುವ ಕಮಿಷನ್ ಎಷ್ಟು?


ಸರ್ಕಾರಿ ಭೂಮಿಯನ್ನು ಕಾರ್ಖಾನೆಗಳಿಗೆ ನೀಡುವುದನ್ನು ವಿರೋಧಿಸಿ ಪ್ರತಿಭಟಿಸುತ್ತಿರುವುದು

ಪ್ರತಿವರ್ಷ ಮುಂಗಾರು ಆರಂಭಕ್ಕೆ ಸಂತಸದಿಂದ ಬಿತ್ತನೆಗೆ ತೊಡಗುತ್ತಿದ್ದ ಈ ಭೂರಹಿತ ಕೃಷಿಕರು ಇಂದು ಚಿಂತಾಕ್ರಾಂತರಾಗಿ ಅನಿರ್ದಿಷ್ಟ ಧರಣಿ. ಆರಂಭಿಸಿದ್ದರೆ ಸ್ಥಳಕ್ಕೆ ತಹಶೀಲ್ದಾರ್ ಹಿರೇಮಠ ಎಂಬ ಭ್ರಷ್ಟ ಬಂದು "ಇದು ನಾನು ಮಾಡೋಕ್ಕಾಗಲ್ಲ, ಸರ್ಕಾರದ ಮಟ್ಟದಲ್ಲಿ ಆಗಬೇಕಾದ ಕೆಲಸ. ಸರ್ಕಾರಕ್ಕೆ ತಿಳಿಸ್ತೀನಿ" ಅಂತ ತಿಪ್ಪೆ ಸಾರಿಸಿ ಹೋಗಿದ್ದಾನೆ. ತನ್ನದು ಬರೀ ಪೋಸ್ಟ್‌ಮ್ಯಾನ್ ಡ್ಯೂಟಿ ಎಂದುಕೊಂಡಿರುವ ಈ ತಹಶೀಲ್ದಾರ ತಾನು ಕಾರ್ಯದರ್ಶಿಯಾಗಬೇಕಿರುವ 'ಭೂ ಮಂಜೂರಾತಿ ಸಮಿತಿ' ಅಸ್ತಿತ್ವಕ್ಕೆ ತಂದಿಲ್ಲ, ಅಧ್ಯಕ್ಷನಾಗಿರಬೇಕಿದ್ದ ಶಾಸಕ ಭ್ರಷ್ಟ ಹಿಟ್ನಾಳ ಅದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ, ಈ ನಡುವೆ ಕೆಲ ಹಣವಂತರಿಂದ ಕಪ್ಪ ಪಡೆದ ಖದೀಮರು ಭೂಮಂಜೂರಾತಿ ನೀಡಿದ್ದರೆ, ಬಡವರಿಗೆ, ದಲಿತರಿಗೆ ನೀಡುತ್ತಿಲ್ಲ, ಸರ್ಕಾರಿ ಭೂಮಿ ಸಾಗುವಳಿ ಮಾಡುತ್ತಿರುವ ಬಡವರು, ದಲಿತರು ಕರ್ನಾಟಕ ರೈತ ಸಂಘದೊಂದಿಗೆ ಆರಂಭಿಸಿರುವ ಧರಣಿಯನ್ನು ಮುರಿಯಲು ಭ್ರಷ್ಟ ಅಧಿಕಾರಿಗಳು, ದುಷ್ಟ ಅಧಿಕಾರಿಗಳು, ಗಿಣಿಗೇರಿಯ ಕೆಲ ರೋಲ್‌ಕಾಲ್ ಗಿರಾಕಿಗಳು ಕಾರ್ಖಾನೆಗಳೊಂದಿಗೆ ಕೈಜೋಡಿಸಿದ್ದರೂ, ಅವರ ಪ್ರಯತ್ನಕ್ಕೆ ಯಶಸ್ಸು ಸಿಕ್ಕಿಲ್ಲ. ಪಹಣಿ ಕಾಲಂ 12 ರಲ್ಲಿ ಪ್ರತಿ ರೈತನ ಹೆಸರು ನಮೂದಾಗಬೇಕು, ಭೂ ಮಂಜೂರಾತಿ ಸಮಿತಿ ಅಸ್ತಿತ್ವಕ್ಕೆ ತಂದು ಭೂಮಂಜೂರಾತಿ ನೀಡಬೇಕು. ಗಂಗಾವತಿಯಲ್ಲಿ 10-20 ದಲಿತರಿಗೆ ಭೂಮಿ ಕೊಡಿಸಿದ್ದನ್ನೇ ಟಾಂಟಾಂ ಮಾಡಿಕೊಂಡು ತಿರುಗಿದ ಸಚಿವ ಅನ್ಸಾರಿ ಇದು ತನಗೆ ಸಂಬಂಧಿಸಿದ ವಿಷಯವೇ ಅಲ್ಲ ಎಂಬಂತಿದ್ದಾನೆ. ಒಂದು ವರ್ಷದ ಅವಧಿಯಲ್ಲಿ ತಾಲ್ಲೂಕಿನ ರೈತರು ಸಾವಿರಾರು ಎಕರೆ ಕಳೆದುಕೊಂಡು ಕಂಗಾಲಾಗಿದ್ದರೂ ನಂಜುಂಡಸ್ವಾಮಿ ಬಣದ ರೈತಸಂಘ ನಾಲ್ಕು ವರ್ಷಗಳ ಹಿಂದೆ ನಡೆದ ಬದನಾಳ ಘಟನೆಯನ್ನು ಮುಂದಿಟ್ಟುಕೊಂಡು ಕರಾಳ ದಿನಾಚರಣೆಗೆ ಸೀಮಿತವಾಗಿದೆ. ರೈತ ಸಂಘದ ಗಾವಿಶಿದ್ದಪ್ಪ ಹೂಗಾರ ಹತ್ತಿರದ ಕಾರ್ಖಾನೆಯಲ್ಲಿ ಈಗ ಲೇಬರ್ ಕಾಂಟ್ರಾಕ್ಟರ್. ಕೆಲ ಪದಾಧಿಕಾರಿಗಳು ಏಜೆಂಟರಾಗಿ ರೈತರ ಭೂಮಿ ಮಾರಿಸಿದರು. ಕಾರ್ಯದರ್ಶಿ ಸಂಗನಗೌಡ ಕಳಪೆ ಕಣಗಳನ್ನು ನಿರ್ಮಿಸಿದ ತಾಲೂಕು ಅಧ್ಯಕ್ಷ ರೈತನೊಬ್ಬನ ಸಾವಿಗೆ ಕಾರಣನಾದ.

ಅಧಿಕಾರಸ್ಥರೆಲ್ಲ ಕಾರ್ಖಾನೆಗಳ ಅಡಿಯಾಳಾಗಿರುವ ಸಂದರ್ಭದಲ್ಲಿ ರೈತಸಂಘ ಹಳೆಯ ಘಟನೆಯನ್ನೇ ನೆಪವಿಟ್ಟುಕೊಂಡು ಕರಾಳ ದಿನಾಚರಣೆ ಮಾಡುವುದರಲ್ಲಿ ಏನು ಅರ್ಥವಿದೆ? ಭೂಮಿ ಕಳೆದುಕೊಳ್ಳುತ್ತಿರುವ ರೈತ ಬಾಯಿ ಬಡಿದುಕೊಳ್ಳುತ್ತಿದ್ದಾನೆ, ಕೇಳಿಸುತ್ತಿಲ್ಲವೇ ಇವರಿಗೆ?

-ವರದಿಗಾರ

ಬಂಡಲ್ ರಾಘುನ ಬಡಾಯಿ ಉತ್ತರ

ಇತ್ತೀಚೆಗೆ ಕೊಪ್ಪಳದಲ್ಲಿ ನ್ಯೂಸ್ ಚಾನಲ್‌ವೊಂದು ಎಂಎಸ್‌ಪಿಎಲ್ ಕಾರ್ಖಾನೆಗೆ ಭೂಮಿ ನೀಡುತ್ತಿರುವ ಬಗ್ಗೆ ಚರ್ಚೆ ಕರೆದಿತ್ತು, ಬಹುತೇಕ ರೈತರು ಭೂಮಿ ನೀಡುವುದಿಲ್ಲ ಎಂದರು. ಆ ಚರ್ಚೆಗೆ ಕೊಪ್ಪಳದ ಶಾಸಕ ಹಿಟ್ನಾಳನೊಂದಿಗೆ ಬಂಡಲ್ ಬಿಡುವ ವಿಷಯಕ್ಕೆ ಸ್ಪರ್ಧೆ ನಡೆಸಿರುವ ಅವರ ಮಗ ರಾಘು ಕೂಡ ಹೋಗಿದ್ದ, ಬಂದವರಲ್ಲಿ ವೆಂಕಟೇಶ್ ಹಾಲವರ್ತಿ, ಗೋಪಾಲಕೃಷ್ಣ ನಗರಿ ಸೇರಿದಂತೆ ಬಹುತೇಕ ಪುಢಾರಿಗಳು ಭೂಮಿ ನೀಡುವುದೇ ಸರಿ ಅಂದ್ರು, ಅವರದು ಹಾಳಾಗಿ ಹೋಗ್ಲಿಬಿಡಿ.

ಶಾಸಕನ ಮಗ ರಾಘು ಹೇಳಿದ್ದೇನೆಂದರೆ ಕಿರ್ಲೋಸ್ಕರ್ ಫೆರಸ್ ಬಂದಾಗ, ಕಲ್ಯಾಣಿ ಸ್ಟೀಲ್ ಬಂದಾಗ ವಿರೋಧಿಸದವರು ನೀವು ಈಗ್ಯಾಕೆ ವಿರೋಧಿಸ್ತೀರಿ ಎಂದು ಹಾರಾಡಿದ. ಕಿರ್ಲೋಸ್ಕರ್ ಬಂದಾಗ ಜನ ಮುಗ್ಧರಾಗಿದ್ದರು, ಕಲ್ಯಾಣಿ ಬಂದಾಗ ಅಜ್ಞಾನಿಗಳಾಗಿದ್ದರು. ಈಗ ಎಚ್ಚರಗೊಂಡು ಪ್ರತಿಭಟಿಸುವುದು ತಪ್ಪಾ? ರಾಘು ಕೂಡ ಕೊಪ್ಪಳ ಜಿಲ್ಲಾ ಪಂಚಾಯತನ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಅಧ್ಯಕ್ಷ. ಅಷ್ಟಕ್ಕೂ MSPL ಕಾರ್ಖಾನೆ ಬೇಕೇಬೇಕು ಅನ್ನೋದಾದ್ರೆ, ತನ್ನೂರು ಹಿಟ್ನಾಳನಲ್ಲಿ ಹಾಕಿಸಿಕೊಳ್ಳಲಿ. ತನ್ನದೇ ನೂರಾರು ಎಕರೆ ಭತ್ತದ ಗದ್ದೆ ಕಾರ್ಖಾನೆಗೆ ಮಾರಿಕೊಳ್ಳಲಿ.

ಸಯಿದಾಭಾನುವಿನ ಅರಣ್ಯರೋದನ

ಹುಬ್ಬಳ್ಳಿ

ಭಾರತದಂತಹ ಪುರುಷಪ್ರಧಾನ ಸಮಾಜವೊಂದರಲ್ಲಿ ಮಹಿಳೆ ಎಂತೆಂಥ ವಿಕೃತಿಗಳಿಗೆ ಬಲಿಪಶುವಾಗುತ್ತಿದ್ದಾಳೆ ಎಂಬುದಕ್ಕೆ ಹುಬ್ಬಳ್ಳಿಯ ಸಯಿದಾಭಾನು ಒಂದು ಜೀವಂತ ಸಾಕ್ಷಿ. ಗೌಸ್ ಮೋದೀನ್ ಎಂಬ ವಿಕೃತ ಮನಸ್ಸಿನ ರಾಕ್ಷಸ ಗಂಡ ಮತ್ತು ತಾವೂ ಕೂಡ ಮಹಿಳೆಯರು ಎಂಬುದನ್ನೇ ಮರೆತು ಅವನ ವಿಕೃತ ರಾಕ್ಷಸೀ ಪ್ರವೃತ್ತಿಗಳಿಗೆ ಬೆಂಬಲವಾಗಿ, ಪ್ರೇರಕರಾಗಿ ಅವನೆಗೆ ಖುದ್ದು ಅದರಲ್ಲಿ ಭಾಗಿಗಳಾಗಿರುವ ಅವನ ತಾಯಿ ಖೈರೋನ್ನಿಸ ಮತ್ತು ಸಹೋದರಿ ಶಮೀಮಾ ಒಟ್ಟಾಗಿ ಕೊಟ್ಟ ಚಿತ್ರ ಹಿಂಸೆಗಳಿಗೆ ಸಯಿದಾಭಾನುವಿನ ಜೀವನ ಛಿದ್ರಛಿದ್ರವಾಗಿ ಹೋಗಿದೆ.

ಘಟನೆಯ ವಿವರ

ಸವಣೂರಿನ ಎಲೆ ಇಡೀ ರಾಜ್ಯದಲ್ಲಿಯೇ ಹೆಸರುವಾಸಿಯಾಗಿದೆ. ಈ ಊರಿನ ಬಹುತೇಕ ಬಡ ಕುಟುಂಬಗಳ ಗಂಡಸರು ಎಲೆ ತೋಟಗಳಲ್ಲಿ ಕೆಲಸ ಮಾಡಿದರೆ, ಹೆಂಗಸರು ಮನೆಯಲ್ಲಿ ಬೀಡಿ ಕಟ್ಟುವ ಕೆಲಸ ಮಾಡುತ್ತಾರೆ. ಹೀಗೆ, ಕುಟುಂಬದ ಸದಸ್ಯರೆಲ್ಲರೂ ಕಷ್ಟಪಟ್ಟು ದುಡಿದು ಹೇಗೋ ಜೀವನ ಸಾಗಿಸುತ್ತಾರೆ. ಇಂತಹ ಬಡ ಕುಟುಂಬಗಳಲ್ಲಿ ಮಹಮ್ಮದ್‌ಸಾಬ್ ಅವರ ಕುಟುಂಬವೂ ಒಂದು.

ಮಹಮ್ಮದ್‌ಸಾಬ್ ಅವರಿಗೆ ಒಟ್ಟು ಆರು ಜನ ಮಕ್ಕಳು. ಇವರಲ್ಲಿ ನಾಲ್ಕು ಜನ ಹೆಣ್ಣು ಮಕ್ಕಳಾದರೆ, ಇಬ್ಬರು ಗಂಡು ಮಕ್ಕಳು. ಹಳ್ಳಿಯ ಎಲ್ಲರಂತೆ ಮಹಮ್ಮದ್‌ಸಾಬ್ ಎಲೆ ತೋಟದಲ್ಲಿ ಕೆಲಸ ಮಾಡಿದರೆ ಆತನ ಪತ್ನಿ ಜಹೀರಾಬಿ ಮನೆಯಲ್ಲಿ ಬೀಡಿ ಕಟ್ಟುತ್ತಾಳೆ. ಹೊತ್ತು ತಿನ್ನುವ ಬಡತನದಲ್ಲಿಯೂ ಇವರು ಮೂರು ಜನ ಹೆಣ್ಣು ಮಕ್ಕಳಿಗೆ ಮದುವೆ ಮಾಡಿದ್ದಾರೆ. ಇವರಲ್ಲಿ ಇಬ್ಬರ ಜೀವನ ಏನೋ ಪರವಾಗಿಲ್ಲ ಎನ್ನುವಂತಿದ್ದರೆ, ಇನ್ನೊಬ್ಬ ಮಗಳು ಸಯಿದಾ ಭಾನುಳ ಜೀವನ ಅಕ್ಷರಶಃ ನರಕಮಯವಾಗಿಹೋಗಿದೆ. ಒಂದೆಡೆ ಇವಳ ಹೀನ ಪರಿಸ್ಥಿತಿ ಇನ್ನೊಂದೆಡೆ ಇನ್ನೊಬ್ಬ ಮಗಳನ್ನು ಮದುವೆ ಮಾಡುವ ಪರಿಸ್ಥಿತಿಯಲ್ಲಿ ಇಲ್ಲದ ತನ್ನ ಅಸಹಾಯಕತೆ ಇವರಿಬ್ಬರೂ ಮಹಮ್ಮದ್‌ಸಾಬ್‌ನನ್ನು ಹೆಚ್ಚುಕಡಿಮೆ ಒಬ್ಬ ಮನೋರೋಗಿಯನ್ನಾಗಿ ಮಾಡಿಬಿಟ್ಟಿವೆ.

ಮಹಮ್ಮದ್‌ಸಾಬ್‌ರು ಏಳು ವರ್ಷಗಳ ಹಿಂದೆ ತಮ್ಮ ಐದನೇ ಮಗಳಾದ ಸಯಿದಾಭಾನುವನ್ನು ಹುಬ್ಬಳ್ಳಿಯ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಗೌಸ್‌ಮೋದೀನ್ ಎಂಬುವವನಿಗೆ ಕೊಟ್ಟು ಮದುವೆ ಮಾಡಿದ್ದರು. ತಮ್ಮ ಬಡತನದ ನಡುವೆಯೂ ಮಗಳು ಸುಖವಾಗಿರಲೆಂದು ಹೇಗೋ 10,000 ರೂಪಾಯಿಗಳ ವರದಕ್ಷಿಣೆಯನ್ನೂ ಕೊಟ್ಟಿದ್ದರು. ಆದರೆ ಗೌಸ್‌ಮೋದಿ ತಮ್ಮ ಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆಂಬ ಅವರ ಕನಸು ಕೆಲವೇ ದಿನಗಳಲ್ಲಿ ನುಚ್ಚುನೂರಾಗಿ ಹೋಯಿತು. ಕಳೆದ ಏಳು ವರ್ಷಗಳಿಂದ ಮಗಳು ಮತ್ತು ಅಳಿಯ ಎಲ್ಲಿದ್ದಾರೆ, ಏನು ಮಾಡುತ್ತಿದ್ದಾರೆ, ಅವರ ಜೀವನ ಹೇಗೆ ಸಾಗಿದೆ ಎಂಬ ಅಲ್ಪ ಮಾಹಿತಿಯೂ ಮಹಮ್ಮದ್‌ಸಾಬರಿಗೆ ಇಲ್ಲ. ಗೌಸ್‌ಮೋದಿನ್ ಈ ಏಳೂ ವರ್ಷಗಳಲ್ಲಿ ಹಲವಾರು ಬಾರಿ ಮನೆಗಳನ್ನು ಬದಲಾಯಿಸುತ್ತಾ, ಮಹಮ್ಮದ್‌ಸಾಬ್ ಕುಟುಂಬಕ್ಕೆ ಸುಳ್ಳು ಮೊಬೈಲ್ ನಂಬರ್ ಕೊಡುತ್ತಾ ಹೆಂಡತಿಯೊಂದಿಗೆ ಅಲೆಯುತ್ತಿದ್ದಾನೆ. ಹೀಗಾಗಿ ಮಗಳನ್ನು ಕಂಡು ಮಾತನಾಡಿಸುವುದಿರಲಿ, ಕಣ್ಣಾರೆ ಮುಖ ಕೊಟ್ಟು ನೋಡುವುದೂ ಅಸಾಧ್ಯವಾಗಿ ಹೋಗಿದೆ ಮಹಮ್ಮದ್ ಸಾಬ್‌ರಿಗೆ. ಕೊನೆಗೆ ಒಂದು ದಿನ ಅವಳನ್ನು ಎಂಥ ದುರವಸ್ಥೆಯಲ್ಲಿ ನೋಡಬೇಕಾಗಬಹುದೆಂದು ಪ್ರಾಯಶಃ ಅವರು ಎಂದೂ ಎಣಿಸಿರಲಿಲ್ಲವೇನೋ.

ವಿಕೃತ ಹಿಂಸೆಗಳ ಉತ್ತುಂಗ

ವಾಸ್ತವದಲ್ಲಿ ಈ ಗೌಸ್‌ಮೋದೀನ್ ಒಬ್ಬ ಅತ್ಯಂತ ವಿಕೃತ ಮನಸ್ಸಿನ ರಾಕ್ಷಸೀ ಪ್ರವೃತ್ತಿಯುಳ್ಳವನು. ಸಾಲದೆಂಬಂತೆ ಇವನೆಲ್ಲಾ ವಿಕೃತಿಗಳಿಗೆ ಹಿಂದುಮುಂದು ನೋಡದೆ ಸಾಥ್ ನೀಡಿದವರು ಇವನ ತಾಯಿ ಖೈರೋನ್ನಿಸ ಮತ್ತು ಸಹೋದರಿ ಶಮೀಮ.

ಗೌಸ್‌ಮೋದೀನ್ ಮತ್ತು ಸಯಿದಾಭಾನುರ ಮೂರು ವರ್ಷದ ಸಂಸಾರದ ಫಲಶ್ರುತಿಯಾಗಿ ಅವರಿಗೆ ಒಂದು ಗಂಡು ಮಗು ಹುಟ್ಟಿತು. ಅವನಿಗೆ ಶರಫುದ್ದೀನ್ ಎಂದು ಹೆಸರಿಟ್ಟಿದ್ದಾರೆ. ಈತ ಹುಟ್ಟಿದ ಮೂರು ತಿಂಗಳಿಗೆ ಗೌಸ್‌ಮೋದೀನ್‌ನ ತಾಯಿ ಖೈರೋನ್ನಿಸ ಮತ್ತು ಸಹೋದರಿ ಶಮೀಮ ಈತನನ್ನು ತಾಯಿ ಸಯಿದಾಭಾನುವಿನಿಂದ ಕಿತ್ತುಕೊಂಡು ಸಾಕತೊಡಗಿದರು. ಸಯಿದಾಭಾನು ತಾಯಿಯಾಗಿದ್ದರೂ ಈತನಿಂದ ಅವಳನ್ನು "ಆಳು" ಎಂದು ಕರೆಸತೊಡಗಿದರು. ಒಟ್ಟಿನಲ್ಲಿ ಶರಫುದ್ದೀನ್ ಚಿಕ್ಕಂದಿನಿಂದಲೇ ತಾಯಿಯನ್ನು ಒಬ್ಬ ಶತ್ರುವನ್ನು ಕಾಣುವ ಹಾಗೆ ಕಾಣತೊಡಗಿದ. ಈತನಿಗೀಗ ನಾಲ್ಕು ವರ್ಷ.

ಗೌಸ್‌ಮೋದೀನ್ ಮದುವೆಯಾಗುತ್ತಲೇ ಸಯಿದಾಭಾನುಗೆ ಚಿತ್ರಹಿಂಸೆ ಕೊಡಲಾರಂಭಿಸಿದ್ದ. ಅದಕ್ಕಾಗಿ ಸಣ್ಣ ಸಣ್ಣ ಕಾರಣಗಳನ್ನು ಹುಡುಕುತ್ತಿದ್ದ. ಏನೂ ಕಾರಣ ಸಿಗಲಿಲ್ಲವೆಂದರೆ, ಆಕೆ ಶಾಲೆ ಕಲಿತಿಲ್ಲದ ಮೂಢೆ ಎಂಬ ಕಾರಣ ಒಡ್ಡುತ್ತಲೋ, ಆಕೆ ಸಾಕಷ್ಟು ವರದಕ್ಷಿಣೆ, ಬಂಗಾರ ತಂದಿಲ್ಲವೆಂಬ ಕಾರಣ ನೀಡಿ ಹೊಡೆಯುತ್ತಿದ್ದ. ಈತ ವಿಕೃತ ಕಾಮಿಯೂ ಹೌದು. ಆಕೆಯನ್ನು ಮನೆಯವರ ಮುಂದೆಯೇ ಬೆತ್ತಲೆಗೊಳಿಸಿ ಮನೆತುಂಬಾ ಓಡಾಡುವಂತೆ ಮಾಡುತ್ತಾನೆ. ಇನ್ನೂ ವಿಕೃತಗೊಂಡು ಅವಳ ಮೈಗೆ ಖಾರದ ಪುಡಿಯನ್ನು ಸವರುತ್ತಾನೆ. ಅವಳು ಆ ಉರಿಯಿಂದ ಕಿರುಚಾಡುತ್ತಾ ಒದ್ದಾಡುತ್ತಿದ್ದರೆ ಅದರಿಂದ ರಾಕ್ಷಸೀ ಆನಂದವನ್ನು ಅನುಭವಿಸುತ್ತಾನೆ.

ನಿರಂತರವಾಗಿ ಮಗಳ ಹುಡುಕಾಟದಲ್ಲಿ ತೊಡಗಿದ್ದ ಸಯಿದಾಭಾನುನ ತಂದೆತಾಯಿ ಗಳಿಗೆ ಕೊನೆಗೆ ಹೇಗೋ ಮಗಳು ಅರವಿಂದ ನಗರದಲ್ಲಿ ರುವುದು ಗೊತ್ತಾಗಿಬಿಟ್ಟಿದೆ. ಅಳಿಯ ಮಗಳಿಗೆ ಕೊಡ ಬಾರದ ಹಿಂಸೆಗಳನ್ನು ಕೊಟ್ಟಿದ್ದಾನೆಂಬುದೂ ಅವರಿಗೆ ಗೊತ್ತಾಗಿಬಿಟ್ಟಿದೆ. ಈತನಕ ತಲೆ ಮರೆಸಿಕೊಂಡಿದ್ದ ಅಳಿಯ ಈಗ ತಾವು ನೇರವಾಗಿ ಹೋದರೆ ಮಗಳನ್ನು ತಮಗೆ ತೋರಿಸುವುದಿಲ್ಲ ಎಂಬ ಅನುಮಾನವೂ ಅವರನ್ನು ಕಾಡಿದೆ. ಕೊನೆಗೆ ಸಯಿದಾಭಾನುನ ತಾಯಿ ಜಹಿರಾಬಿ ಎಸ್.ಎಂ. ಕೃಷ್ಣಾ ನಗರದ ಮಹಿಳಾ ಸಂಘಟನೆಯ ಮೊರೆ ಹೋಗಿದ್ದಾರೆ. ಈ ಸಂಘಟನೆಯ ಲಕ್ಷ್ಮಿ ಮತ್ತು ಸುಜಾತಾ ಕೊಟ್ಯಾನ್ ಎಂಬುವವರು ಕಳೆದ ಜೂನ್ 16ರಂದು ಸೀದಾ ಗೌಸ್‌ಮೋದೀನ್ ಮನೆಗೆ ಹೋಗಿ, ನಾವು ಸರ್ಕಾರಿ ಆಸ್ಪತ್ರೆಯಿಂದ ಬಂದಿದ್ದೇವೆ ಎನ್ನುತ್ತಲೇ ಮನೆಯ ಒಳಗೆ ನುಗ್ಗಿದ್ದಾರೆ. ಅಲ್ಲಿ ಅವರಿಗೆ ಕಂಡದ್ದು ನಗ್ನಾವಸ್ಥೆಯಲ್ಲಿ ನರಳುತ್ತಾ ಬಿದ್ದಿದ್ದ ಸಯಿದಾಭಾನು! ಅವಳಿಗೆ ಬಟ್ಟೆ ತೊಡಿಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಅವರು ಮುಂದಾದಾಗ ಗೌಸ್‌ಮೋದೀನ್‌ನ ತಾಯಿ ಮತ್ತು ತಂಗಿ ಅದಕ್ಕೆ ಅವಕಾಶ ಕೊಡುವುದಿಲ್ಲವೆಂದು ಗಲಾಟೆ ಮಾಡಿದ್ದಾರೆ. ಆದರೆ ತಕ್ಕ ತಯಾರಿಯೊಂದಿಗೆ ಹೋಗಿದ್ದ ಮಹಿಳಾ ಸಂಘಟನೆಯವರು ಇದ್ಯಾವುದಕ್ಕೂ ಜಗ್ಗದೇ ಸಯಿದಾ ಭಾನು ಮತ್ತು [illegible] ಕರೆದುಕೊಂಡು ನೇರವಾಗಿ ಕಿಮ್ಸ್ ಆಸ್ಪತ್ರೆಗೆ ಹೋಗಿದ್ದಾರೆ.

ಸಯಿದಾಭಾನುನ ದುಸ್ಥಿತಿಯನ್ನು ಕಂಡು ಆಶ್ಚರ್ಯಗೊಂಡ ವೈದ್ಯರು ಕೂಡಲೇ ಅವಳಿಗೆ ತಕ್ಕ ಚಿಕಿತ್ಸೆಯ ವ್ಯವಸ್ಥೆ ಮಾಡಿದ್ದಾರೆ. ಮರುದಿನವೇ ವೈದ್ಯರ ಸರ್ಟಿಫಿಕೇಟ್, ವರದಿಯನ್ನು ಪಡೆದುಕೊಂಡು ನೇರವಾಗಿ ಹುಬ್ಬಳ್ಳಿಯ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ದೂರು ದಾಖಲಿಸಿಕೊಂಡ ಮಹಿಳಾ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀಮತಿ ಚಲವಾದಿ ಸಯಿದಾಭಾನುನ ಮೈಮೇಲಿನ ಸುಟ್ಟ ಗಾಯಗಳನ್ನು ನೋಡಿ ಕೆಂಡಮಂಡಲವಾಗಿ ಹೋಗಿದ್ದಾರೆ. ಈ ಗಾಯಗಳನ್ನು ನೋಡಿದ ಮಹಿಳಾ ಪೇದೆಯೊಬ್ಬರು ಸ್ಥಳದಲ್ಲಿಯೇ ಮೂರ್ಛೆ ಹೋಗಿಬಿಟ್ಟರೆಂದರೆ ಸಯಿದಾಭಾನುಗೆ ಕೊಟ್ಟ ಹಿಂಸೆಯನ್ನು ನೀವೇ ಊಹಿಸಬಹುದು. ತಕ್ಷಣ ಕಾರ್ಯಪ್ರವೃತ್ತರಾದ ಮಹಿಳಾ ಪೊಲೀಸರು ಸಯಿದಾಭಾನುನ ಗಂಡ ಗೌಸ್ ಮೋದೀನ್, ಅತ್ತೆ ಖೈರೋನ್ನಿಸಾ ಮತ್ತು ನಾದಿನಿ ಶಮೀಮರನ್ನು ಒದ್ದು ಠಾಣೆಗೆ ಎಳೆತಂದು ರುಬ್ಬಿದ್ದಾರೆ. ಪೊಲೀಸರ ಮುಂದೆ ಇವರೆಲ್ಲರೂ ತಾವು ಸಯಿದಾಭಾನುಗೆ ಏನೆಲ್ಲಾ ಹಿಂಸೆ ಕೊಟ್ಟಿದ್ದೇವೆಂದು ಒಪ್ಪಿಕೊಂಡಿದ್ದಾರೆ. ಇವರೆಲ್ಲರನ್ನೂ ಜೈಲಿಗೆ ತಳ್ಳಲಾಗಿತ್ತಾದರೂ ಟೌನ್ ಪೊಲೀಸ್ ಸ್ಟೇಶನ್‌ನಲ್ಲಿ ಪೇದೆಯಾಗಿರುವ ಶಮೀಮಳ ಗಂಡ ಫೀರ್‌ಸಾಬ್ ಖುದ್ದು ನಿಂತು ಅವರನ್ನು ಜಾಮೀನಿನ ಮೇಲೆ ಹೊರತಂದಿದ್ದಾನೆ.

ಇದು ಸಯಿದಾಭಾನು ಎಂಬ ಮಹಿಳೆಯ ಜೀವನದ ದುರಂತ ಕಥೆ. ಸಾಮಾಜಿಕ ಕಾಳಜಿಯುಳ್ಳ ಹಲವರ ಪರಿಶ್ರಮದಿಂದ ಅವಳ ಬದುಕಿನ ದುರಂತ ಅಧ್ಯಾಯಗಳು ಹೊರಜಗತ್ತಿಗೆ ಬಂದಿವೆಯಾದರೂ, ಹಣ, ರಾಜಕೀಯ ಮತ್ತು ಪುರುಷಾಧಿಪತ್ಯಗಳೇ ಆಧಿಪತ್ಯ ನಡೆಸುವ ಇಂದಿನ ಸಮಾಜದಲ್ಲಿ ನ್ಯಾಯಕ್ಕಾಗಿನ ಅವಳ ಕೂಗು ಕೊನೆಗೆ ಅರಣ್ಯರೋದನವಾಗಿ ಉಳಿಯುವ ಅಪಾಯವಂತೂ ಇದ್ದೇ ಇದೆ. ಅಲ್ಲದೇ ಸಮಾಜದಲ್ಲಿ ಇಂತಹ ನೂರಾರು, ಸಾವಿರಾರು ಸಯಿದಾಭಾನುಗಳು ಮೂಕವೇದನೆಯನ್ನು ಅನುಭವಿಸುತ್ತಿರುವುದು ನಮಗೆಲ್ಲ ಗೊತ್ತು. ಅಂತಹವರಿಗೆಲ್ಲ ನ್ಯಾಯ ದೊರೆಯುವುದೆಂತು? ಭಾರತಕ್ಕೆ ಸ್ವಾತಂತ್ರ್ಯ ಬಂದು ಆರು ದಶಕಗಳು ಉರುಳಿದರೂ ಮಹಿಳೆಯರಿಗೆ ಸ್ವಾತಂತ್ರ್ಯ ಸಿಗುವುದೆಂದು?

-ವರದಿಗಾರ

ಪ್ರಜಾಪ್ರಭುತ್ವ ಬಾಳಿಯಲ್ಲಿ ಉಳಿಯುವುದಿಲ್ಲ. ಬದಲಾಗಿ ... ಮತ್ತು ... ವಿನಾಶವಾಗಿ ಸಾಗುತ್ತದೆ -ರಾಬರ್ಟ್ ಎಮ್. ...

ಮಾಯವಾದ ನರಭಕ್ಷಕಿ



ಕುತ್ತಿಗೆಗೆ ಬಾಯಿಹಾಕಿತು. ಕೋಣ ಥಕಥಕ ಕುಣಿಯುತ್ತಾ ಒದ್ದಾಡುತ್ತಿತ್ತು. ಸಾಮಾನ್ಯವಾದ ನಂಬಿಕೆ ಎಂದರೆ ಹುಲಿಗಳು ಪ್ರಾಣಿಗಳ ಕುತ್ತಿಗೆಗೆ ಪಂಜದಿಂದ ಹೊಡೆದು ಕೆಳಕ್ಕೆ ಕೆಡವಿ ಕೊಲ್ಲುತ್ತವೆ ಎಂಬುದು. ಆದರೆ ಹಾಗಲ್ಲ, ಹುಲಿಗಳು ನೇರವಾಗಿ ಶಿಕಾರಿಯ ಕುತ್ತಿಗೆಗೆ ಬಾಯಿ ಹಾಕಿ ಕೋರೆದಾಡೆಗಳ ಮೂಲಕ ಕೊಲ್ಲುತ್ತವೆ. ಕ್ಷಣದಿಂದ ಕ್ಷಣಕ್ಕೆ ಕೋಣದ ಪರದಾಟ ಹೆಚ್ಚುತ್ತಿತ್ತು, ಹುಲಿ ನನ್ನ ಕಡೆ ತಿರುಗುವುದನ್ನು ಗುರಿ ಇಟ್ಟು ಕಾಯುತ್ತಿದ್ದೆ. ಅದೋ..... ಹುಲಿ ನನಗೆ ಕಾಣಿಸಿತು ಎನ್ನುತ್ತಿದ್ದಂತೆ ನನ್ನ .275 ರೈಫಲ್ ಕಿಡಿಕಾರಿತು. ಒಂದೇ ಕ್ಷಣ, ಕೋಣ ಕುಕ್ಕರಿಸಿ ಬಿತ್ತು, ಹುಲಿ ತೃಣ ಮಾತ್ರ ಶಬ್ದ ಮಾಡದೆ ಚಂಗನೆ ನೆಗೆದು ಮಾಯವಾಯಿತು. ನಾನು ಮಹತ್ವಾಕಾಂಕ್ಷೆಯ ಶಿಕಾರಿಯಲ್ಲಿ ಗುರಿತಪ್ಪಿದ್ದು ಖಚಿತವಾಯಿತು. ಬಹುಶಃ ನನ್ನ ಬಂದೂಕದ ಗುರಿ ಹುಲಿಯಾಗಿದ್ದರೂ ತಕ್ಷಣ ಅಡ್ಡ ತಿರುಗಿದ ಕೋಣಕ್ಕೆ ಅದು ಬಡಿದಿರಬೇಕು. ಇದಕ್ಕೆ ನಾನೇನೂ ಕಾರಣ ಕೊಡಲಾರೆ. ಆದರೆ ಆ ಹುಲಿಗೆ ಏನಾಗಿದೆ, ಯಾವ ಕಡೆಯಿಂದ ಗುಂಡು ಬಡಿದಿದೆ ಎಂಬುದು ಅದರ ಗಮನಕ್ಕೆ ಬಂದಂತಿರಲಿಲ್ಲ. ಎಲ್ಲವೂ ಕ್ಷಣಾರ್ಧದಲ್ಲಿ ಸಂಭವಿಸಿ ಕೋಣ ಬಿದ್ದುಹೋಗಿತ್ತು. ನಾನಂತೂ ಏನೊಂದೂ ಅರಿವಾಗದ ಪರವಶಸ್ಥಿತಿಯಲ್ಲಿದ್ದೆ. ಆದರೆ ಒಂದಂತೂ ನಿಜ. ಕೋಣ ಸತ್ತು ಬಿದ್ದಿರುವುದು ಹುಲಿಗೆ ತಿಳಿದಿದೆ. ಅದು ಮತ್ತೆ ಬಂದರೂ ಬರಬಹುದಿತ್ತು. ನಾನು ಬಂದೂಕಕ್ಕೆ ಖಾಲಿಯಾದ ಗುಂಡನ್ನು ತುಂಬಿ ಕಾಯುತ್ತಾ ಕುಳಿತೆ.


ನನ್ನ ಕಾಯುವಿಕೆ ದೀರ್ಘವಾಗುತ್ತಿತ್ತು, ಇಷ್ಟಾದರೂ ಕೋಣ ಏಳಲಿಲ್ಲವಾದ್ದರಿಂದ ನನ್ನ ಗುಂಡು ಅದಕ್ಕೆ ಬಿದ್ದಿದೆ ಎಂಬುದು ಖಚಿತವಾಗಿತ್ತು, ಹತ್ತು-ಹದಿನೈದು ನಿಮಿಷಗಳು ನಿಧಾನವಾಗಿ ಸರಿದವು. ಅಷ್ಟರಲ್ಲಿ ಮತ್ತೆ ಹುಲಿ ನನ್ನ ಕೆಳಗಿನ ಕೊರಕಲಿನಿಂದಲೇ ತಲೆಯನ್ನು ಮುಂಚಾಚಿ ನಿಂತಿದ್ದು ಕಾಣಿಸಿತು. ಸುಮಾರು ಹೊತ್ತು ಅಲ್ಲೇ ಸುಮ್ಮನೆ ನಿಂತಿತು. ಆಮೇಲೆ ಮೀನಾಮೇಷಾ ಎಣಿಸುತ್ತ ಒಂದೊಂದೇ ಹೆಜ್ಜೆ ಸರಿಸುತ್ತ ಕೋಣದತ್ತ ಸಾಗಿತು. ಅದು ಕೋಣದ ಬಳಿಗೆ ಬರುವವರೆಗೂ ನಾನು ಆತಂಕದಿಂದ ನಿರೀಕ್ಷಿಸುತ್ತ ಕುಳಿತೆ. ನನ್ನ ಕಣ್ಣೆದುರಿಗೆ ಉದ್ದಕ್ಕೆ-ಕಪ್ಪಗೆ ಬಿದ್ದಿದ್ದ ಕೋಣದ ಸಮೀಪದಲ್ಲಿ ಕೋಣದ ಬಣ್ಣದೊಂದಿಗೆ ಮಿಳಿತವಾದ ಹುಲಿಯ ಪಟ್ಟೆಗಳ ನಡುವಿನ ಬಂಗಾರ ಮಿಶ್ರಿತ ಬಣ್ಣಕ್ಕೆ ಗುರಿ ಕಟ್ಟಿ ಕುದುರೆ ಎಳೆದೆ. ಚಂಗನೆ ಹುಲಿ ನೆಗೆದಿದ್ದು ಕಾಣಿಸಿತು. ನಾನು ನಿರೀಕ್ಷಿಸಿದಂತೆ ಮುಮ್ಮುಖ ಹಾರಿ ಬೀಳದೆ ದಿಕ್ಕೆಟ್ಟ ಪಾತರಗಿತ್ತಿಯಂತೆ ಪಕ್ಕದ ಕಮರಿಯನ್ನು ಹಾರಿ..... ಕಡಿದಸ್ಟು ಏರುತ್ತಾ ಏರುವ ರಭಸಕ್ಕೆ ಕಾಲಿಗೆ ಸಿಕ್ಕ ಕಲ್ಲುಗಳನ್ನು ರಕ್ತ ಪಿಶಾಚಿಯ ಉದುರಿಸುತ್ತಾ ಓಡೇಬಿಟ್ಟಿತು.

ನಾನು ಇನ್ನೊಮ್ಮೆ ಗುರಿ ತಪ್ಪಿದ್ದೆ ಏಕೆಂದು ಗೊ... ಎಲ್ಲವೂ ಸರಿಯಾಗಿಯೇ ಇತ್ತು, ಗಾಳಿ, ಬೆ... ಗಿಡಮರಗಳು ಅವುಗಳ ನೆರಳುಗಳಾದಿಯಾಗಿ ಎಲ್ಲವ... ನನ್ನನ್ನು ಸಮರ್ಥಿಸಿಕೊಳ್ಳುವಂತಹ ಯಾವ ಕಾರಣಗ... ನನಗೆ ಕಾಣಲಿಲ್ಲ, ನಾನು ಸರಿಯಾಗಿ ಗುರಿಕಟ್ಟುವುದ... ತಪ್ಪು ಮಾಡಿದ್ದೇನೆ ಎಂದು ಒಪ್ಪಿಕೊಳ್ಳಲೇಬೇಕಾಗಿ... ನನ್ನ ಜೀವಮಾನದಲ್ಲೇ ಹಿಂದೆಂದೂ ಹೀಗಾಗಿರಲಿ...

ಇನ್ನು ಹುಲಿಯೊಂದು ಹಿಂತಿರುಗುವ ಸಾಧ್ಯತೆ ಇದ್... ಅದಕ್ಕೆ ತಲೆಕೆಟ್ಟಿರಬೇಕು. ಅಲ್ಲದೆ ಅದಾಗಿ ಹಿಂತಿ... ಬಂದರೂ ಈಗಿದ್ದ ಬೆಳಕಿನಲ್ಲಿ ಅದನ್ನು ಗಾಯಗೊ... ಬಹುದೇ ವಿನಃ ಕೊಲ್ಲುವ ಭರವಸೆ ನನಗಿರಲಿಲ್ಲ, ಇದ್ದಿದ್... ಒಳ್ಳೆ ಬೆಳಕಿದ್ದಾಗಲೇ ಗುರಿತಪ್ಪಿದ್ದ ನಾನು ಈ ಕತ್ತಲ... ಮುಗಿಸುತ್ತೇನೆಂಬ ಭರವಸೆ ನನಗಿರಲಿಲ್ಲ,

ಬೆಳಗಿನ ಅಲೆದಾಟದ ಸಮಯದಿಂದಲೂ ನಾ... ತೊಟ್ಟ ಬಟ್ಟೆಗಳು ಬಹುಪಾಲು ತೇವವಾಗಿಯೇ ಇದ್... ಬಿಸಿಲಿನ ಝಳಕ್ಕೆ ಸುರಿಯುವ ಬೆವರು ಬಟ್ಟೆಗಳ... ನೀರಿನಲ್ಲಿ ಅದ್ದಿದಂತೆ ನೆನಸಿಟ್ಟಿತ್ತು, ಈಗಂತೂ ಶೀತ... ಶುರುವಾಗಿತ್ತು, ಇದು ಹಿಮಾಲಯದ ವೈಚಿತ್ರಗಳಲ್ಲೊಂ... ಈಗ ಶೀತ-ನೆಗಡಿ ಹಿಡಿಯುವುದು ಗ್ಯಾರಂಟಿ ಎನಿಸುತ್ತಿ... ನಾನು ತೊಟ್ಟಿದ್ದ ಮೊಣಕಾಲುವರೆಗಿನ ಖಾಕಿ ಚಡ್ಡಿ... ಸದ್ಯದ ಥಂಡಿಯನ್ನು ತಡೆಯಲು ವಿಫಲವಾಗಿತ್ತು, ವಿಫಲತೆಯೊಂದಿಗೆ ಈ ದರಿದ್ರ ಬಟ್ಟೆಗಳು ಹಾ... ಶೀತ ಗಾಳಿಯೂ ಸೇರಿ ನನ್ನ ಹಿಂಸೆಯನ್ನು ದ್ವಿಗ... ಗೊಳಿಸುತ್ತಿದ್ದವು. ನನ್ನ ಮಂಕು ಕವಿದ ಮನಸ್ಸು ಒಂ... ಲೋಟ ಬಿಸಿಬಿಸಿ ಟೀಗಾಗಿ ಹಂಬಲಿಸುತ್ತಿತ್ತು. ಹ... ಹಿಂತಿರುಗುವುದು ಸಾಧ್ಯವಿದ್ದರೆ ಅಲ್ಲಿ ಟೀ ಸಿಗುವುದ... ಗ್ಯಾರಂಟಿಯಾಗಿತ್ತು, ನನಗೆ ಹಿಂತಿರುಗಲು ಇದಕ್ಕಿ... ಬಲವಾದ ಪ್ರಲೋಭನೆ ಬೇಕಾಗಿರಲಿಲ್ಲ, ಆದರೆ ಸಾ... ಭೀತಿ?! ಇಲ್ಲಿಂದ ಹಳ್ಳಿಗೆ ಹಿಂತಿರುಗುವಾಗ ದಾಟಬೇಕ... ಕಮರಿ, ಕತ್ತಲು ಕವಿದ ದಾರಿ, ಅಜುಬಾಜಿನ ನ... ಸದೃಶ ಪೊದೆಗಳು ಎಲ್ಲವೂ ಕುಂತಲ್ಲೇ ಭ... ಹುಟ್ಟಿಸುತ್ತಿದ್ದವು. ಹಿಂತಿರುಗಲು ಮನಸ್ಸು ಹಾತೊರೆ... ತ್ತಿತ್ತು, ಸದ್ಯಕ್ಕೆ ಹುಲಿ ಎಲ್ಲಿದೆ ಎಂಬುದನ್ನು ಅಂದಾ... ಮಾಡಲು ನನ್ನಿಂದ ಸಾಧ್ಯವಾಗುತ್ತಿಲ್ಲ, ಅದು ಇಲ್ಲಿ... ಐವತ್ತು ಗಜ ದೂರದಿಂದ ಐವತ್ತು ಮೈಲಿಗಳವ... ಎಲ್ಲಿ ಬೇಕಾದರೂ ಇರಬಹುದು ಅಥವಾ ನಾ... ಹೋಗಬೇಕಾದ ದಾರಿಯಲ್ಲೇ ಅಡ್ಡಾಡುತ್ತಿರಬಹುದು... ಇಂದಿನ ನನ್ನ ವಿಫಲತೆಯನ್ನು ನೋಡಿದರೆ ಅದ...

ಹುಲಿಯ ತಲೆ ನನಗೆ ಕಾಣಿಸುತ್ತಿತ್ತೇ ವಿನಃ ನಾನು ಕುಳಿತ ಜಾಗದಿಂದ ಅದಕ್ಕೆ ಗುರಿಕಟ್ಟಲು ಸಾಧ್ಯವಿರಲಿಲ್ಲ. ಅದು ಅನೇಕ ಅಡಿಗಳಷ್ಟು ಮುಂದೆ ಬಂದರೆ ಮಾತ್ರ ನನ್ನ ಬಂದೂಕಿನ ವ್ಯಾಪ್ತಿಗೆ ಸಿಗುತ್ತಿತ್ತು, ಕಾಯುತ್ತಾ ಕುಳಿತೆ. ಹುಲಿ ಸುತ್ತಮುತ್ತ ನೋಡುತ್ತಿತ್ತು, ಅದಕ್ಕೆ ಏನನ್ನಿಸುತ್ತಿತ್ತೋ ಗೊತ್ತಿಲ್ಲ, ಸಮಾಧಾನವಾಯಿತೇನೋ ಎಂಬಂತೆ ನಿಧಾನವಾಗಿ ಏಣಿನ ಮರೆಯಲ್ಲೇ ಕೋಣದತ್ತ ಸಾಗಿತು. ಸೀದಾ ಕೋಣದ ಹಿಂಭಾಗಕ್ಕೆ ಹೋಯಿತು. ಹುಲಿಯ ದರ್ಶನದಿಂದ ಈಗಾಗಲೇ ಗಾಬರಿಯಾಗಿದ್ದ ಕೋಣ ಹುಲಿಯ ಹಾಜರಿಯಿಂದ ಸಿಟ್ಟಿಗೆದ್ದು ಸಿರುಗುಟ್ಟುತ್ತ ಪ್ರತಿಭಟಿಸತೊಡಗಿತು. ಇಂತಹ ಕೊಬ್ಬಿದ ಕೋಣವನ್ನು ಸಿಟ್ಟಿಗೆದ್ದ ಸಮಯದಲ್ಲಿ ಕೊಂಬಿನ ಕಡೆಯಿಂದ ಆಕ್ರಮಿಸುವುದು ಕಷ್ಟವೆಂದು ಹುಲಿಗೂ ಅದರ ಅನುಭವ ಕಲಿಸಿರಬೇಕು. ಹಾಗಾಗಿ ಅದು ಕೋಣದ ಹಿಂಬದಿಯನ್ನೇ ಆಶ್ರಯಿಸಿತು. ಆದರೆ ನನಗೆ ಫಜೀತಿಗಿಟ್ಟುಕೊಂಡಿತು. ಹುಲಿ ಸುತ್ತಿ ಬಳಸಿ ಕೋಣದ ಮೇಲೆ ಬೀಳಲು ಸಂಚು ಮಾಡುತ್ತಿತ್ತು, ಇವೆರಡೂ ಒಂದು ನಿರ್ದಿಷ್ಟ ವಿನ್ಯಾಸದಲ್ಲಿ ಒಬ್ಬರಿಂದೊಬ್ಬರು ರಕ್ಷಿಸಿಕೊಳ್ಳುವ ಆಟದಲ್ಲಿ ನನಗೆ ಹುಲಿಯೇ ಕಾಣುತ್ತಿಲ್ಲ, ಇನ್ನೇನು ಹುಲಿ ನನ್ನ ಕಡೆ ಬಂದಿದೆ ಎಂದಾಗ...... ಕ್ಷಣಾರ್ಧದಲ್ಲಿ ಕೋಣ ಅದಕ್ಕೆ ಅಡ್ಡಾಗುತ್ತಿತ್ತು, ಈ ಬಗೆಯ ನಿರಂತರ ಏಳುಬೀಳುಗಳ ನಡುವೆ ಕೊನೆಗೂ ಹುಲಿ ಹೇಗೋ ಮಾಡಿ ಕೋಣದ



ಬಣ್ಣ ಬದಲಾಯಿಸಿದ ಅವಕಾಶವಾದಿಗಳು

ನಕ್ಸಲೈಟ್ ಬೆಂಬಲಿಗರ ಪಟ್ಟಿ ವಿವಾದ ಹುಟ್ಟಿಸಿದ ಬೆನ್ನಲ್ಲೇ ಕೆಲವು ಬುದ್ಧಿಜೀವಿಗಳು ಕೋಮು ಸೌಹಾರ್ದ ವೇದಿಕೆಯನ್ನು ನಕ್ಸಲ್ ಸಂಘಟನೆಯೆಂದು ನಿರೂಪಿಸಲು ಮುಂದಾದರು. ಇದಕ್ಕೆ ಪ್ರತಿಕ್ರಿಯೆಯಾಗಿ 'ಲಂಕೇಶ್' ವಾರ ಪತ್ರಿಕೆಯಲ್ಲಿ ಒಂದು ಸಂಪಾದಕೀಯ ಮತ್ತು ಲೇಖನಗಳು ಸರಿಯಾದ ಉತ್ತರವನ್ನು ನೀಡಿರುವುದಲ್ಲದೆ, ಬುದ್ಧಿಜೀವಿಗಳ ಅವಕಾಶವಾದಿತನವನ್ನು ಬಯಲುಗೊಳಿಸಿವೆ.

ಕೋಮುಸೌಹಾರ್ದ ವೇದಿಕೆ 99 ರಿಂದ ಇದುವರೆಗೆ ತನ್ನ ಕಾರ್ಯ ಚಟುವಟಿಕೆಯಿಂದ ಸಂಘಪರಿವಾರಿಗಳಿಗೆ ಸವಾಲಾಗಿದೆ. ಕರ್ನಾಟಕವನ್ನು ಗುಜರಾತ್ ಆಗದಂತೆ ತಡೆಯುವ ಪ್ರಯತ್ನ ನಡೆಸಿದೆ. ಆದರೆ ಒಂದು ಬಾರಿಯಾದರೂ ನಕ್ಸಲ್ ಪರ ಹೇಳಿಕೆಯನ್ನಾಗಲಿ, ಕಾರ್ಯಕ್ರಮಗಳನ್ನಾಗಲಿ ನಡೆಸಿದ್ದಿಲ್ಲ. ಹಾಗಿದ್ದು ರಾಜೇಂದ್ರ ಚೆನ್ನಿ ಮತ್ತು ಜಿ.ಕೆ. ಗೋವಿಂದರಾಯರಿಗೆ ಕೋಮು ಸೌಹಾರ್ದ ವೇದಿಕೆ ಬಗ್ಗೆ ಯಾವ ಆಧಾರದ ಮೇಲೆ ಇಂತಹ ಅನುಮಾನ ಬಂತೋ ಗೊತ್ತಿಲ್ಲ, ದೇಶದ ಹಲವು ಸಮಸ್ಯೆಗಳನ್ನು ನೋಡುವ ರೀತಿಯಲ್ಲಿ, ತಾಳುವ ನಿಲುವಲ್ಲಿ ಎಲ್ಲರಿಗೂ ಒಂದೇ ಅಭಿಪ್ರಾಯವಿರುವುದಿಲ್ಲ, ಸಹಮತವಿರುವ ಒಂದು ವಿಚಾರಕ್ಕಾಗಿ ಎಲ್ಲರೂ ಒಗ್ಗೂಡುತ್ತೇವೆ. ಆದರೆ ಎಲ್ಲಾ ವಿಚಾರದಲ್ಲೂ ಎಲ್ಲರ ಅಭಿಪ್ರಾಯ ಒಂದೇ ಇರಬೇಕು, ಕೆಲವು ಬುದ್ಧಿಜೀವಿಗಳ ವಾದವನ್ನು ಎಲ್ಲರೂ ಒಪ್ಪಬೇಕೆಂದರೆ ಆರ್.ಎಸ್.ಎಸ್. ನವರ ವಿಕಸಂಸ್ಕೃತಿಯನ್ನು ನಾವು ಹೇರಿದಂತಾಗುತ್ತದೆ.

99ರಲ್ಲಿ ಟಿಪ್ಪು ನೆನಪಿನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾಗ ಅತಿಥಿಯಾಗಿದ್ದ ರಾಜೇಂದ್ರ ಚೆನ್ನಿಯವರ ನೈತಿಕತೆಯ ಬಗ್ಗೆ ಹಲವರು ಪ್ರಶ್ನೆ ಎತ್ತಿದ್ದರು. ಪ್ರಚಾರಕ್ಕೆ ಹೋಗಿದ್ದ ನಾವುಗಳು ಅವರ ವೈಯಕ್ತಿಕ ವಿಚಾರಕ್ಕಿಂತ ಕೋಮುವಾದದ ಬಗ್ಗೆ ಇರುವ ಅವರ ಸಾಮಾಜಿಕ ಕಾಳಜಿ ಮುಖ್ಯ ಎಂದು ಸಮರ್ಥಿಸಿಕೊಂಡಿದ್ದೆವು.

ವರವರರಾವ್, ಗದ್ದರ್‌ರವರು ಶಿವಮೊಗ್ಗಕ್ಕೆ ಬಂದಾಗ ಅವರೊಂದಿಗಿದ್ದು ಓಡಾಡಿದ ಚೆನ್ನಿಯವರು ಲಾಡ್ಜ್ ಒಂದರಲ್ಲಿ ಗಾಂಧಿಯ ಬಗ್ಗೆ ಮಾತನಾಡುತ್ತಾ "1947ರಲ್ಲಿ ಗಾಂಧಿ ಜನರಿಗೆ ದ್ರೋಹ ಮಾಡಿದ್ದಾನೆ" ಎಂದಿದ್ದನ್ನು ನಾವು ಕೇಳಿ ಸುಮ್ಮನಾಗಿದ್ದೆವು. ಯಾವಾಗ ಸಂಘಪರಿವಾರದವರು ಚೆನ್ನಿಯವರ ಮೇಲೆ ಹರಿಹಾಯಲು ಶುರು ಮಾಡಿದರೋ ನಂತರದ ದಿನಗಳಲ್ಲಿ ಅವರಿಗೆ ಜ್ಞಾನೋದಯವಾದಂತೆ ಅವರ ಎಲ್ಲಾ ನಿಲುವುಗಳಲ್ಲಿ ಬದಲಾವಣೆ ಬರಲು ಶುರುವಾಯಿತು. ಅವರ ರಕ್ಷಣೆಗಾಗಿ ಆದ ಬದಲಾವಣೆ ಬಗ್ಗೆ ಮರುಕದಿಂದ ಸುಮ್ಮನಿರಬಹುದಿತ್ತು, ಆದರೆ ತಮ್ಮ ರಕ್ಷಣೆಗಾಗಿ ಬೇರೆಯವರನ್ನು ಪೊಲೀಸರು ಮತ್ತು ಸಂಘಪರಿವಾರದವರ ಬಾಯಿಗೆ ಗುರಿ ಮಾಡುವುದು ಅಪ್ಪಟ ಅವಕಾಶವಾದಿತನವಾಗಿದೆ.

ವೈಯಕ್ತಿಕ ಜೀವನದಲ್ಲಿ ಭ್ರಷ್ಟರಾಗಿರಬಾರದು, ನೈತಿಕತೆಯನ್ನು ಮೀರಬಾರದು, ಅಧಿಕಾರಕ್ಕಾಗಿ ಲಾಬಿ ಮಾಡಬಾರದೆಂದರೆ ಇವತ್ತು ಹಲವು ಬುದ್ಧಿಜೀವಿಗಳು ತಮ್ಮ ವಿಮರ್ಶೆ ಮಾಡಿಕೊಳ್ಳಬೇಕಾಗುತ್ತದೆ ಎನ್ನುತ್ತಾರೆ. ಗಾಂಧಿವಾದದ ಬಗ್ಗೆ ಮಾತನಾಡುವ ಇವರು ಗಾಂಧಿ ತತ್ವವನ್ನು ಯಾವುದರಲ್ಲಿ ಅಳವಡಿಸಿಕೊಂಡಿದ್ದಾರೆ? ಸರಳತೆಯಲ್ಲೋ, ಬದುಕುವ ವಿಧಾನದಲ್ಲೋ, ಸಾಮಾಜಿಕ ಸಮಸ್ಯೆಗಳಲ್ಲಿ ನಾಯಕತ್ವ ನೀಡುವುದರಲ್ಲೋ? ತಿಳಿಯುತ್ತಿಲ್ಲ, ಸರ್ಕಾರದ ಹಿಂಸೆಯು ತಪ್ಪು, ಆದರೆ ನಾವೇನು ಮಾಡಲಾಗುವುದಿಲ್ಲ ಎನ್ನುವ ಇವರು ಜನರು ಪ್ರತಿಕ್ರಿಯಿಸುವ ಮಾರ್ಗದ ವಿಚಾರ ಬಂದಾಗ ಮಾತ್ರ ಅಬ್ಬರದ ಧ್ವನಿಯಲ್ಲಿ ಗಾಂಧಿವಾದವನ್ನು ತರುತ್ತಾರೆ. ಫ್ಯಾಸಿಸ್ಟ್ ಶಕ್ತಿಗಳು ಬಲವಾಗುತ್ತಿರುವುದರ ವಿರುದ್ಧ ಸಹಮತ ಇರುವ ನಾವೆಲ್ಲರೂ ಒಗ್ಗೂಡಬೇಕಾದ ಸಂದರ್ಭದಲ್ಲಿ ಸರ್ಕಾರಗಳ ಒಡೆದಾಳುವ, ಜನಪರ ಧ್ವನಿಗಳನ್ನು ಅಡಗಿಸುವ ತಂತ್ರಕ್ಕೆ ಬುದ್ಧಿಜೀವಿಗಳೇ ಬಲಿಯಾದರೆ ಸಾಮಾನ್ಯರ ಪಾಡೇನು?

- ಮಂಜುಳ, ಶಿವಮೊಗ್ಗ

ರಾಜೇಂದ್ರ ಚೆನ್ನಿಯವರ ಇತ್ತೀಚಿಗಿನ ವರ್ತನೆ ಕಂಡು ನನಗೆ ಆಶ್ಚರ್ಯವಾಗಿದೆ. ಎಷ್ಟೋ ವರ್ಷಗಳಿಂದ ಪತ್ರಿಕೆಯಲ್ಲಿ ಅವರ ಲೇಖನ ಓದಿ ಪ್ರಭಾವಿತನಾದವನು ನಾನು. ಯಾವತ್ತಿಗೂ ನಂಬಿಕೆಯ ವ್ಯಕ್ತಿಗಳ ಪಟ್ಟಿಯಲ್ಲಿ ಅವರನ್ನು ಗುರುತಿಸಿದವನು ನಾನು.

ಒಂದೆರಡು ವರ್ಷಗಳ ಹಿಂದೆ, ಮಹಾನ್ ಸಮಾಜವಾದಿ, ಜಾತ್ಯತೀತವಾದಿ ಬಸವಣ್ಣನವರ ಕುಲದವರಾಗಿ ವಿಜಯ ಸಂಕೇಶ್ವರರು ಬಿಜೆಪಿಯಂಥ ಕೋಮುವಾದಿ, ಜಾತಿವಾದಿ ಪಕ್ಷಕ್ಕೆ ಬೆಂಬಲ ನೀಡಿದರು ಎಂಬ ಕಾರಣಕ್ಕಾಗಿ "ಬಸವ ದ್ರೋಹಿ ಸಂಕೇಶ್ವರ" ಎಂಬ ಲೇಖನವನ್ನು 'ಪತ್ರಿಕೆ'ಯಲ್ಲಿ ಬರೆದಿದ್ದರು. ಆ ಲೇಖನದ ಬಗ್ಗೆ ನಾನು ನನ್ನ ಅಂತರಂಗದ ಅನಿಸಿಕೆಗಳನ್ನು ಚೆನ್ನಿಯವರು ಹೇಗೆ ಕರಾರುವಾಕ್ಕಾಗಿ ಬರೆದಿದ್ದಾರೆ ಎಂದು ಆಶ್ಚರ್ಯದಿಂದ, ಮೆಚ್ಚುಗೆಯಿಂದ ಪತ್ರಿಕೆಗೆ ಪತ್ರ ಬರೆದಿದ್ದೆ.

ತಾತ್ವಿಕವಾಗಿ ಒಮ್ಮೆ ತಮ್ಮನ್ನು ತೊಡಗಿಸಿಕೊಂಡ ಮನುಷ್ಯರು ಅದೇನೇ ಕಾರಣವಿರಲಿ ಅದು ಹೇಗೆ ಬಣ್ಣ ಬದಲಾಯಿಸುತ್ತಾರೆ ಎಂದು ಭಯವಾಗುತ್ತಿದೆ. ಇಂತಹವರು ಸಾಮಾಜಿಕ ಬದ್ಧತೆಗಿಂತ ವೈಯಕ್ತಿಕ ಪ್ರಚಾರದ ಗೀಳಿಗಾಗಿ ಶ್ರಮಪಡುತ್ತಿದ್ದಾರೆ ಎನಿಸುತ್ತಿದೆ.

ಕೋಮುಸೌಹಾರ್ದ ವೇದಿಕೆಯ ಬಗ್ಗೆ ಅದೆಷ್ಟು... ಮುಂದಾಳುಗಳು ಯಾವಾಗ ಏನೇ ನಿಲುವು ತಾಳಿದರ... ಅದೊಂದು ಸತ್ವಯುತ, ಪ್ರಾಮಾಣಿಕ, ಜನಪ... ಸಂಘಟನೆಯಾದ್ದರಿಂದ ಅದರ ನಿಲುವುಗಳಿಗೆ ಬದ್ಧರಾ... ಸಾವಿರಾರು ಪ್ರಗತಿಪರರು, ಜನಪರರು ಅವರೊಂದಿಗಿರುತ್ತ... ಕೋಮುಸೌಹಾರ್ದ ವೇದಿಕೆ ಯಾವು... ವ್ಯಕ್ತಿಗೆ, ಕಾಲಕ್ಕೆ ಸೀಮಿತವಾದದ್ದಲ್ಲ, ಅ... ಪ್ರಾಮಾಣಿಕವಾದ ನಿರಂತರ ಸಾಮಾ... ರಾಜಕೀಯ ವೇದಿಕೆ. ಅದು ವ... ಕೇಂದ್ರೀಕೃತ ಕಲ್ಪನೆಯಲ್ಲ,

-ಕೆ.ಎನ್. ದೀಪಕ್, ತಾವರೆ...

ನಕ್ಸಲೀಯ ಬೆಂಬಲಿಗ ಸಂಘಟನೆ... ಪಟ್ಟಿಯಲ್ಲಿ ಕರ್ನಾಟಕ ಕೋಮು... ಸೌಹಾರ್ದ ವೇದಿಕೆಯ ಹೆಸರ... ಸೇರಿಸುವ ಮೂಲಕ ಪ್ರಸ್ತುತ ಸರ್ಕಾ... ಬಣ್ಣ ಬಯಲಾಗಿದೆ. ಆರ... ಕೋಮುವಾದವನ್ನು ಅಳಿಸೋಣ, ಸೌಹಾರ್ದ ಕರ್ನಾ... ಕಟ್ಟೋಣ ಎಂಬ ವಿಸ್ತೃತ ತಳಹದಿಯ ಮೇಲೆ ಕಾನೂನುಬ... ಹೋರಾಟಗಳನ್ನು ನಡೆಸಿಕೊಂಡು ಬರುತ್ತಿರುವ, ಭ... ಸಿದ್ಧಾಂತಗಳ ಸಂಘಟನೆಗಳನ್ನು ಜೊತೆಗೆ ಕೊಂಡೊಯ್ಯುತ್ತಿರ... ಕೋಮು ಸೌಹಾರ್ದ ವೇದಿಕೆಗೆ 'ನಕ್ಸಲ್' ಅಜೆಂಡ... ಇರುವುದಾದರೂ ಹೇಗೆ ಸಾಧ್ಯ?


ವೇದಿಕೆಯನ್ನು ನಕ್ಸಲ್ ಬೆಂಬಲಿಗ ಸಂಘಟನೆ ಎಂ... ಪ್ರಕಟಿಸಲು ಅದರ ರಾಜೀರಹಿತ ಹೋರಾಟ...

ಟುಗುವುದಾದರೆ ಹಗಲಿನಲ್ಲಿ ಮಾತ್ರ ಎನ್ನಿಸುತ್ತಿತ್ತು. ಕೋ ಗೊತ್ತಿಲ್ಲ, ಹಾಗಾಗದಿದ್ದರೆ ಅದೇ ಮುದಿ ಯುತ್ತಾಗಿ ಸಾಯುವವರೆಗೂ ಅದನ್ನು ಕೊಲ್ಲಲಾಗದು ಬ ಗುಮಾನಿ ಆರಂಭವಾಯಿತು. ಇದನ್ನು ಪ್ಪಿಕೊಳ್ಳಲೂ ಸಾಧ್ಯವಿಲ್ಲ, ಹಾಗೆಂದು ನಿರಾಕರಿಸಲೂ ಗುತ್ತಿಲ್ಲ. ಆದರೆ ಇದನ್ನು ಪುಷ್ಟೀಕರಿಸುವವನಂತೆ ನಾನು ಳಕ ಕಾಲವನ್ನು ಅಪ್ರಜ್ಞಾಪೂರ್ವಕವಾಗಿ ಇಳಿಯತೊಡಗಿದೆ. ಈ ಅನಿಶ್ಚಿತ ಮನಸ್ಥಿತಿಯಲ್ಲಿ ಹೆಜ್ಜೆ ಹಿಡಿತ ತಪ್ಪಿತು. ದಾ ಕೆಳಕ್ಕೆ ಜಾರಿದೆ. ಅದೃಷ್ಟಕ್ಕೆ ತಳದಲ್ಲಿ ಮರಳಿತ್ತು ಕಾಲು ಮುರಿಯದೆ ಕ್ಷೇಮವಾಗಿ ಕುಕ್ಕರುಬಿದ್ದೆ.

ನಾನು ಹಿಂತಿರುಗಿದಾಗ ಇಡೀ ಹಳ್ಳಿ ಎಚ್ಚರವಾಗಿತ್ತು. ಲ್ಲರೂ ನನ್ನ ಸುತ್ತ ಸುತ್ತಿಕೊಂಡರು. ಸುತ್ತಲಿಂದ ನೂರಾರು ತೂಹಲದ ಪ್ರಶ್ನೆಗಳು ತೂರಿಬಂದವು. ಈ ಎಲ್ಲಾ ಶ್ನೆಗಳಿಗೂ ನನ್ನಲ್ಲಿ ಸಾಧ್ಯವಿದ್ದದ್ದು ಒಂದೇ ಉತ್ತರ 'ಕಲ್ಲನೆಯ ಲಿಗೆ ಖಾಲಿ ಬಂದೂಕಿನಿಂದ ಗುಂಡು ಹೊಡೆದೆ, ಲ್ಲವೂ ಮಂಗಮಾಯವಾದವು' ಎಲ್ಲರೂ ಚಕಿತರಾಗಿ ನ್ನನ್ನೇ ನೋಡುತ್ತಿದ್ದರು. ನಾನು ಹಾರಿಸಿದ ಎರಡು ಂಡುಗಳ ಸದ್ದಿಗೆ ಅವರ ಕಿವಿಗಳು ಭೌತಿಕ ಸಾಕ್ಷಿಯಾಗಿ ದ್ದವು.

ನಾವೆಲ್ಲಾ ಧಗಧಗಿಸಿ ಉರಿಯುತ್ತಿದ್ದ ಬೆಂಕಿಯ ಸುತ್ತ ಳಿತಿದ್ದೆವು. ಬೆಂಕಿಯ ಝಳ ನನ್ನ ಒಳಹೊರಗನ್ನು ಯಿಸುತ್ತಿತ್ತು. ಸುಮ್ಮನೆ ಲೋಟಗಟ್ಟಲೆ ಟೀ ಡಿಯುತ್ತಿದ್ದೆ ಇದರಲ್ಲೇ ಏನನ್ನೋ ಮುಚ್ಚಹಾಕಲು ಯಸಿದಂತೆ. ಪ್ರಜ್ವಲವಾಗಿದ್ದ ಬೆಂಕಿ, ಒಳಸೇರುತ್ತಿದ್ದ ಟೀ ನ್ನ ಹತಾಶೆಯನ್ನು ತಹಬಂದಿಗೆ ತರುತ್ತಿದ್ದವೆನಿಸುತ್ತದೆ. ಗ ಅಲ್ಲೇನು ನಡೆಯಿತು ಎಂದು ನೆರೆದಿದ್ದವರಿಗೆ ಹೇಳಿದೆ. ನ್ನ ಸುತ್ತಮುತ್ತ ಬಹುಪಾಲು ಯುವಕರೇ ಕುಳಿತಿದ್ದರು. ನ್ನ ಮಾತುಗಳನ್ನು ಕೇಳಿದ ಅವರು 'ಬನ್ನಿ ಈಗಲೇ ರೀಕ್ಷಿಸಿ ಬಿಡುವ, ಏನಾಗಿದೆ ಎಂದು' ಉತ್ತೇಜಿತರಾಗಿ ಹೊರಟೇಬಿಟ್ಟರು. ನನಗೂ ಹಾಗೆನಿಸುತ್ತಿತ್ತು, ಎಲ್ಲರನ್ನೂ ಂದಿಟ್ಟುಕೊಂಡು ನಾನು ಕುಳಿತಿದ್ದ ಜಾಗಕ್ಕೆ ಬಂದೆ. ಲ್ಲಿ ನಿಂತು..., ನಾನು ಹೇಗೆ ಕುಳಿತಿದ್ದೆ.... ಹುಲಿ ಹೇಗೆ ನ್ನ ಕೆಳಗಿನ ಗುಂಡಿಯಿಂದ ಎದ್ದು ಬಂತು... ಹೇಗೆ ೋಣದ ಮೇಲೆ ದಾಳಿ ಮಾಡಿತು... ನಾನು ಹೇಗೆ ಂಡು ಹೊಡೆದೆ..., ಅದು ಹೇಗೆ...ಯಾವ ಕಡೆಗೆ ಗರಿ ಓಡಿಹೋಯಿತು... ಎಂಬುದನ್ನು ಅಭಿನಯ ರ್ವಕವಾಗಿ ಆಯಾದಿಕ್ಕಿಗೆ ಕೈತೋರಿಸುತ್ತಾ ವಿವರಿಸುತ್ತಿದ್ದೆ. ಷ್ಟರಲ್ಲಿ ನಾನು ಮೊದಲು ಗುಂಡು ಹೊಡೆದ ದಿಕ್ಕಿನಿಂದ ರ್ಷೋದ್ಗಾರ....! 'ನೋಡಿ ಸಾಹೇಬ್ರೇ.... ಲ್ಲೊಂದು ಹುಲಿ ಸತ್ತು ಬಿದ್ದಿದೆ!!' ನಾನು ತಬ್ಬಿಬ್ಬಾದೆ. ಈ ಅಪರಾತ್ರಿಯಲ್ಲಿ ತಮಾಷೆ ಮಾಡುತ್ತಿದ್ದಾರೆಯೇ?

ನನ್ನಂತೆ ಇವರ ಕಣ್ಣುಗಳಿಗೂ ಮಬ್ಬಾಗಿವೆಯೇ? ಅನಿಸಿತು. ಅಸಮಾಧಾನದಿಂದಲೇ ಹತ್ತಿರ ಹೋಗಿ ನೋಡಿದರೆ... ಹೌದು ಈ ಹೊತ್ತು ಇತರರಿಗೆ ಮಾತ್ರವಲ್ಲ ನನ್ನ ಕಣ್ಣುಗಳಿಗೂ ಒಂದು ಹುಲಿ ಬಿದ್ದಿರುವುದು ಕಾಣುತ್ತಿದೆ!! ಅಲ್ಲಿ ನಿಜಕ್ಕೂ ಒಂದು ಹುಲಿ ಸತ್ತು ಬಿದ್ದಿದೆ. ಮರುಕ್ಷಣ ನನ್ನ ತಲೆಯಲ್ಲಿ ಹುಟ್ಟಿದ ಪ್ರಶ್ನೆ ಎಂದರೆ 'ಹಾಗಾದರೆ ನಾನು ಎರಡನೆಯ ಗುಂಡನ್ನು ಯಾವುದಕ್ಕೆ ಹೊಡೆದೆ, ಅದೂ 20-30 ನಿಮಿಷಗಳ ತರುವಾಯ?' ನಾನು ಇದೇ ಪ್ರಶ್ನೆಗಳನ್ನು ಅವರ ಮುಂದಿಟ್ಟು, ಅದು ಹೇಗೆ ಸಂಭವಿಸಿತು ಎಂದು ದಿಕ್ಕನ್ನು ನಿರ್ದೇಶಿಸಿ ವಿವರಿಸಿದೆ. ಅಷ್ಟರಲ್ಲಿ ಇನ್ನೊಂದು ಹುಲಿ ಓಡಿಹೋದ ದಿಕ್ಕಿನಿಂದ ಮತ್ತಷ್ಟು ಧ್ವನಿಗಳ ಒಕ್ಕೊರಲಿನ ಚೀತ್ಕಾರ.... 'ನೋಡಿ ಸಾಹೇಬ್ರೇ.... ಇಲ್ಲೂ ಒಂದು ಹುಲಿ ಸತ್ತು ಬಿದ್ದಿದೆ!!' ನಾನು ಮೂರ್ಛೆ ಹೋಗುವುದೊಂದು ಬಾಕಿ ಉಳಿದಿತ್ತು. ಆ ಜಾಗದತ್ತ ಓಡಿದೆ, ನಿಜ..., ಅಲ್ಲೂ ಒಂದು ಹುಲಿ ಸತ್ತು ಬಿದ್ದಿದೆ. ಎರಡೂ ಹೆಚ್ಚೂಕಡಿಮೆ ನಾನು ಗುಂಡು ಹೊಡೆದ ಜಾಗದಿಂದ ಸುಮಾರು ಅರವತ್ತು ಗಜಗಳ ಅಂತರದಲ್ಲಿ ಬಿದ್ದಿವೆ. ಬಹುಪಾಲು ಎರಡೂ ಒಂದೇ ಗಾತ್ರಕ್ಕಿವೆ.



ಈಗ ಇನ್ನೊಂದು ಸಂದಿಗ್ಧಕ್ಕೆ ಸಿಕ್ಕಿಬಿದ್ದೆ. 'ಹಾಗಾದರೆ ಈ ಎರಡನೆಯ ಹುಲಿ ಯಾವುದು?' ಇದಕ್ಕೆ ಹಳ್ಳಿಗರು ಹೇಳಿದರು 'ಈವರೆಗೂ ನಾಲ್ಕು ಜನರನ್ನು ಕೊಂದಾಗಲಾಗಲೀ, ಬೆಳಿಗ್ಗೆ ಎತ್ತನ್ನು ಹಿಡಿದಾಗಲಾಗಲೀ, ನಮ್ಮವರು ನೋಡಿದ್ದು ಒಂದೇ ಹುಲಿಯನ್ನು. ಈ ಎರಡನೆಯ ಹುಲಿ ಯಾವುದೆಂದು ಗೊತ್ತಿಲ್ಲ. ಬಹುಶಃ ಇದು ಆಕೆಯ ಜೊತೆಗಾರನಿರಬೇಕು. ಇದು ಹುಲಿಗಳ ಬೆದೆಯ ಕಾಲವಲ್ಲವೇ?' ಎಂದು. ನನ್ನ ಮುಂದೆ ಬಿದ್ದಿರುವ ಎರಡು ಹುಲಿಗಳಲ್ಲಿ ಒಂದು ನಿಜಕ್ಕೂ ಆ ಪುರಾತನ ನರಭಕ್ಷಕಿಯೇ ಆಗಿದ್ದರೆ ಜನರ ಮಾತು ಸತ್ಯವೆಂಬುದರಲ್ಲಿ ಅನುಮಾನವಿರಲಿಲ್ಲ.

ನಾನು ಎರಡನೆಯ ಹುಲಿಯನ್ನು ಹತ್ತಿರದಿಂದ ನೋಡಿದಾಗಲೇ ಇದೊಂದು ಮಧ್ಯಮ ಪ್ರಾಯದ ಗಂಡು ಹುಲಿ ಎಂಬುದು ಸ್ಪಷ್ಟವಾಗಿತ್ತು, ಸೀದಾ ಮೊದಲ ಹುಲಿಯತ್ತ ಓಡಿದೆ. ಜನ ಕುತೂಹಲದಿಂದ ನನ್ನನ್ನು ಹಿಂಬಾಲಿಸಿದರು. ಮೊದಲ ನೋಟದಲ್ಲಿ ಜನರ ಊಹೆ ಸರಿಯಾಗಿರುವಂತೆ ಕಾಣುತ್ತಿತ್ತು, ಅದೊಂದು ವಯಸ್ಸಾದ ಹೆಣ್ಣು ಹುಲಿಯಾಗಿತ್ತು, ಪಕ್ಕದಲ್ಲಿದ್ದ ಒಬ್ಬನ ಕೈಗೆ ಬಂದೂಕ ಕೊಟ್ಟು ಹುಲಿಯ ಪಂಜಗಳ ಮುಂದೆ ದಗ್ಗಾಲುಮಂಡಿ ಯೂರಿ ಕುಳಿತು, ಅದರ ಪಂಜಗಳನ್ನು ನನ್ನ ಕೈಯಲ್ಲಿಡಿದು ಪರೀಕ್ಷಿಸಿದೆ. ಈ ಹಿಂದೆ ಗೋದಿ ಹೊಲ ಕೊಯ್ಯುತ್ತಿದ್ದ ಹೆಂಗಸಿನ ಮೇಲೆ ಈ ನರಭಕ್ಷಕಿ ದಾಳಿ ಮಾಡಿ ಓಡಿಹೋಗಿದ್ದಾಗ, ಅವಳ ಹೆಜ್ಜೆ ಗುರುತುಗಳನ್ನು ಹಿಂಬಾಲಿಸಿ ಹೋಗಿದ್ದೆ. ಒಂದು ಹೊಂಡದ ಬಳಿಯ ಮೆದು ಮಣ್ಣಿನಲ್ಲಿ ಮೂಡಿದ್ದ ಹೆಜ್ಜೆ ಗುರುತುಗಳು ಇನ್ನೂ ನನ್ನ ಕಣ್ಣಿಗೆ ಕಟ್ಟಿದಂತಿವೆ. ಅವು ನನ್ನ ಕಣ್ಣಿಗೆ ಬಿದ್ದ ಈ ನರಭಕ್ಷಕಿಯ ಮೊಟ್ಟಮೊದಲ ಹೆಜ್ಜೆ ಗುರುತುಗಳಾಗಿದ್ದವು. ಹಾಗಾಗಿ ನಾನು ಅವುಗಳನ್ನು ಮರೆಯುವಂತೆಯೇ ಇರಲಿಲ್ಲ, ನನ್ನ ತಲೆಯಲ್ಲಿ ಹಚ್ಚೆ ಹೊಯ್ದಂತೆ ಕೂತಿದ್ದ ಆ ಚಿತ್ರಗಳೊಂದಿಗೆ ಈ ಪಾದವನ್ನು ಹೋಲಿಸಿ ಪರೀಕ್ಷಿಸಿದೆ, ಇನ್ನೊಮ್ಮೆ.... ಮತ್ತೊಮ್ಮೆ ಪರೀಕ್ಷಿಸಿದೆ. ನನ್ನ ತಲೆಯಲ್ಲಿದ್ದ ಅಲ್ಲಿನ ಹೆಜ್ಜೆ ಗುರುತುಗಳ ಪ್ರಕಾರ ಅದೊಂದು ತುಂಬಾ ವಯಸ್ಸಾದ ಹೆಣ್ಣು ಹುಲಿಯಾಗಿತ್ತು. ಎಷ್ಟು ವಯಸ್ಸಾದ ಹುಲಿಯೆಂದರೆ, ಅವಳ ಪಾದಗಳು ವಯಸ್ಸಿನ ಪರಿಣಾಮವಾಗಿ ಸವೆದುಹೋಗಿದ್ದವು. ನಡು ಪಾದದಲ್ಲಿರುವ ಸಿಂಬೆಯಂತಹ ಉಬ್ಬು ಸವೆದು, ಅಸಂಖ್ಯಾತ ಬಿರುಕುಗಳೊಂದಿಗೆ ರಟ್ಟುಗಟ್ಟಿ ಹೋಗಿತ್ತು. ಪಾದದ ಉಬ್ಬು ಮತ್ತು ಬೆರಳುಗಳ ನಡುವಿನ ತಗ್ಗಿನ ಉದ್ದಕ್ಕೂ ಒಂದು ಆಳವಾದ ಸೀಳು ಹರಿದಿತ್ತು. ನಾನು ಇಂಥ ಇನ್ನೊಂದು ಹುಲಿಯ ಪಾದವನ್ನು ಈವರೆಗೂ ನೋಡಿರಲೇ ಇಲ್ಲ. ಇಷ್ಟೊಂದು ವಿಲಕ್ಷಣಗಳಿದ್ದ ಒಂದು ಪಾದದ ಗುರುತನ್ನು ನಾನು ಗುರುತಿಸಬಲ್ಲೆನಾಗಿದೆ. ಹಾಗಾದರೆ ಈ ಹುಲಿ? ಹೆಣ್ಣು ಹುಲಿ...! ವಯಸ್ಸಾದ ಹುಲಿ...! ಎಲ್ಲವೂ ಹೌದು...! ಆದರೆ ಇದು ಆ ಪುರಾತನ ಚಾವಫರ್ ನರಭಕ್ಷಕಿಯಲ್ಲ!! ಈ ನನ್ನ ತೀರ್ಮಾನವನ್ನು ನಾನು ಅಲ್ಲಿದ್ದವರಿಗೆ ತಿಳಿಸಿದೆ. ತಕ್ಷಣ ಅವರ ನಡುವೆ ಗೊಣಗಾಟಗಳ ಬಿರುಗಾಳಿ ಎದ್ದಿತು. ಕ್ಷಣಮಾತ್ರದಲ್ಲಿ ಅತ್ತಲಿಂದ ಪ್ರಬಲವಾದ ಪ್ರತಿರೋಧ ನುಗ್ಗಿಬಂತು. 'ಮೊದಲು ಬಂದಾಗ ನೀವೇ ಹೇಳಿದಿರಿ ಆ ನರಭಕ್ಷಕಿ ಒಂದು ವಯಸ್ಸಾದ ಹೆಣ್ಣು ಹುಲಿ ಎಂದು. ಇದೇ ಹುಲಿ ನಮ್ಮ ಕಣ್ಣೆದುರಿಗೇ ನಾಲ್ಕು ಜನರನ್ನು ಕೊಂದು ತಿಂದಿರುವುದನ್ನು ನಾವೇ ಕಣ್ಣಾರೆ ನೋಡಿದ್ದೇವೆ. ನೀವೇನೋ ಕಾಲುಗಳನ್ನು ನೋಡಿ ಇದು ಅದಲ್ಲ ಎನ್ನುತ್ತಿದ್ದೀರಿ, ಕಾಲಿನಲ್ಲೇನಿರುತ್ತೆ ಬಿಡಿ.... ಕಾಡಿನ ಎಲ್ಲಾ ಹುಲಿಗಳ ಕಾಲುಗಳೂ ಒಂದೇ ಥರ ಇರ್‍ತವೆ..., ಅದೇನು ಮಹಾ?!' ಎನ್ನುತ್ತಾ ವಾದಕ್ಕಿಳಿದರು.

ನಾನೇನೂ ಮಾತನಾಡಲಿಲ್ಲ, ಆ ಗಂಡು ಹುಲಿಯನ್ನು ಹೊತ್ತು ತರಲು ಹೇಳಿದೆ. ಕಂದಕದ ಆಚೆಗಿದ್ದ ಅದನ್ನು ಕೂಗುತ್ತಾ... ಕೇಕೆ ಹಾಕುತ್ತಾ... ತಮಾಷೆ ಮಾಡುತ್ತಾ... ಜನ ಹೊತ್ತು ತಂದರು. ಅದನ್ನು ಮೊದಲ ಹುಲಿಯ ಪಕ್ಕದಲ್ಲಿ ಮಲಗಿಸಿದರು. ಅದು ನಿಜಕ್ಕೂ ನಡು ಪ್ರಾಯದ ಬಲಿಷ್ಠ ಗಂಡು ಹುಲಿ. ಇದ್ಯಾಕೆ ಬಂತೋ ಈ ಹೊಸ ನರಭಕ್ಷಕಿಯ ಜೊತೆಯಲ್ಲಿ!? ಅರ್ಥವಾಗಲಿಲ್ಲ, ಆದರೆ ಪರಿಸ್ಥಿತಿ ಕೈಮೀರಿತ್ತು, ಇವುಗಳ 'ಚರ್ಮಕಾಂಡ' ಮುಗಿಸಲು ನನಗೆ ಹದಿನಾಲ್ಕು ಗಂಟೆಗಳು ಹಿಡಿದವು. ಸುತ್ತಲೂ ಮುತ್ತಿದ್ದ ಜನ, ಹೊತ್ತೇರಿದಂತೆ ಬೆನ್ನಿನ ಚರ್ಮ ಸುಲಿದು ಹೋಗುವಂತೆ ಅಪ್ಪಳಿಸುತ್ತಿದ್ದ ಬಿಸಿಲಿನಿಂದ ನಾನು ಬಸವಳಿದು ಹೋದೆ. ಚರ್ಮವನ್ನು ಹೊರೆಕಟ್ಟಿ ನಮ್ಮವರ ಕೈಗೆ ಕೊಟ್ಟು ಸೀದಾ ದಲ್ಲಾನಿಯಾದತ್ತ ಹೊರಟೆ.

ಇವೆಲ್ಲಾ ಮುಗಿದಮೇಲೆ ದಿನಗಳ ಮೇಲೆ ದಿನಗಳು ಗತಿಸುತ್ತಾ ಹೋದವು. ವಾರಗಟ್ಟಲೆ ನರಭಕ್ಷಕಿಯ ಮಾಹಿತಿಗಾಗಿ ನಿರೀಕ್ಷಿಸುತ್ತಾ ಕುಳಿತೆ. ಅದರ ಸುದ್ದಿ ಇಲ್ಲ, ನನಗೆ ಅದು ಜೀವಂತವಾಗಿರುವ ಬಗ್ಗೆ ಯಾವ ಸಂದೇಹಗಳೂ ಇರಲಿಲ್ಲ. ಆದರೆ ಅದರ ಕಡೆಯಿಂದ ಯಾವ ಸುದ್ದಿಯೂ ಇಲ್ಲ. ಭೂಮಿಯಿಂದಲೇ ಮಾಯವಾದಂತೆ ಅದು ಕಾಣೆಯಾಗಿಬಿಟ್ಟಿತ್ತು. ನನಗೆ ತೆರೈನ ಜಿಲ್ಲಾಧಿಕಾರಿಗಳೊಂದಿಗೆ ಪೂರ್ವ ನಿರ್ಧಾರಿತ ಕೆಲಸವಿದ್ದುದರಿಂದ ನಾನು ದಲ್ಲಾನಿಯಾದಿಂದ ಹೊರಡಲೇ ಬೇಕಾಗಿತ್ತು.

(ಮುಂದುವರೆಯುತ್ತದೆ)


ಾರಣವಾಗಿದೆ. ಹಿಂದೂತ್ವದ ತಳಹದಿಯ ಮೇಲೆ ಅಸಮಾನತೆಯ ಸಮಾಜವನ್ನು ನಿರ್ಮಾಣ ಮಾಡಲು ನಸುತ್ತಿರುವ ಕೋಮುವಾದಿ ಪಕ್ಷಗಳು ಕೋಮು ಸೌಹಾರ್ದ ವೇದಿಕೆಯಂತಹ ಸಂಘಟನೆಗಳಿಗೆ ಸಮಾಧಿ ತೆಗೆಯಲು ಸನ್ನದ್ಧರಾಗಿದ್ದಾರೆ. ಇದು ಮುಂಬರಲಿರುವ ಕೋಮುವಾದಿ ಮುಖ್ಯಮಂತ್ರಿಯ ಆಡಳಿತದ ಒಂದು ಸ್ಯಾಂಪಲ್ ಮಾತ್ರ. ಆದರೆ ಕರ್ನಾಟಕದ ಜನತೆ ಇವರ ಸಿ ಸುಳ್ಳನ್ನು ನಂಬುವಷ್ಟು ಮೂಢರಲ್ಲ ಎಂಬುದು ಇವರಿಗೆ ತಿಳಿಯಬೇಕಿದೆ.

ಕೋಮುವಾದಿ ಪಕ್ಷಗಳ ಫ್ಯಾಸಿಸ್ಟ್ ಧೋರಣೆಗೆ ಇಂಬುಕೊಡುವಂತೆ ಬುದ್ಧಿಜೀವಿಗಳಾದ ರಾಜೇಂದ್ರ ಚೆನ್ನಿ ಹಾಗೂ ಜಿ.ಕೆ. ಗೋವಿಂದರಾವ್‌ರು "ಕೋಮು ಸೌಹಾರ್ದ ವೇದಿಕೆ ನಕ್ಸಲೀಯರ ಬೆಂಬಲಿಗ ಸಂಘಟನೆ, ಆ ಕಾರಣ ಕ್ಕಾಗಿಯೇ ವೇದಿಕೆಯಿಂದ ಹೊರಬಂದಿದ್ದೇವೆ" ಎಂದು ಹೇಳಿ ತಮ್ಮ ಅವಕಾಶವಾದಿ ಧೋರಣೆಯನ್ನು ಬಯಲುಗೊಳಿಸಿದ್ದಾರೆ.

-ವಿನಾಯಕ್ ಪೂಜಾರ್.

ಸಂಘಪರಿವಾರದ ಒತ್ತಡದಿಂದ ಬಿಜೆಪಿ ಶಂಕರಬಿದರಿ ಯವರು ಬಿಡುಗಡೆ ಮಾಡಿರುವ ನಕ್ಸಲ್ ಬೆಂಬಲಿಗರ ಪಟ್ಟಿ ನೋಡಿದರೆ, ಭಾರತ ಪ್ರಜಾಪ್ರಭುತ್ವ ರಾಷ್ಟ್ರವೇ ಎಂಬ ಅನುಮಾನ ಮೂಡುತ್ತದೆ. ಕೋಮುಸೌಹಾರ್ದ ವೇದಿಕೆ, ಶಾಂತಿಗಾಗಿ ನಾಗರಿಕರ ವೇದಿಕೆ ಮತ್ತು ಹಲವಾರು ವಿಚಾರವಂತರನ್ನು ನಕ್ಸಲ್ ಬೆಂಬಲಿಗರು ಎಂದು ಗುರುತಿಸಿದ್ದು ಚಡ್ಡಿಗಳ ಕುತಂತ್ರ ಹೊರತು ಬೇರೇನಿಲ್ಲ. ಈ ಸಂದರ್ಭದಲ್ಲಿ 'ಲಂಕೇಶ್'ದ ಪ್ರಜಾಸತ್ತಾತ್ಮಕ ಹೋರಾಟದ ನಿರ್ಧಾರಕ್ಕೆ (ಲಂಕೇಶ್ ಜುಲೈ 4)ನಾವೆಲ್ಲರೂ ಜೊತೆಗಿದ್ದೇವೆ.

ಮೊದಲಿಗೆ ಬಾಬಾಬುಡನ್‌ಗಿರಿ ವಿಷಯದಲ್ಲಿ ಪ್ರಗತಿ ಪರರಿಗೆ ನಕ್ಸಲ್ ಹಣೆಪಟ್ಟಿ ಕಟ್ಟುತ್ತಾ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಲ್ಕುಳಿ ಹೆಗ್ಡೆ ವಿಠಲ್ ಹಾಗೂ ಗೌರಿ ಲಂಕೇಶರನ್ನು ನಕ್ಸಲ್ ಬೆಂಬಲಿಗರು ಎಂದು ನೇರವಾಗಿ ವಿದ್ಯಾರ್ಥಿಗಳು (ಎಬಿವಿಪಿ) ಆರೋಪಿಸಿ ದರು. ಅದರ ಮುಂದುವರಿದ ಭಾಗವೇ ಈ ನಕ್ಸಲ್ ಬೆಂಬಲಿಗರ ಪಟ್ಟಿ. ಆದರೆ ಕೆಲವರು ಈ ಪಟ್ಟಿಯಿಂದ ಕೇವಲ ಕಡಿದಾಳ್ ಶಾಮಣ್ಣ ಮತ್ತು ರಾಜೇಂದ್ರ ಚೆನ್ನಿ ಅವರ ಹೆಸರು ಕೈಬಿಟ್ಟರೆ ಸಾಕು ಎಂಬಂತೆ ಮಾತನಾಡುತ್ತಿರುವುದು ವಿಷಾದನೀಯ.



ಪ್ರಗತಿಪರ ವಿಚಾರ ಹೊಂದಿದ ದಲಿತ, ಹಿಂದುಳಿದವರನ್ನು ನಕ್ಸಲರೆಂದೂ, ಪ್ರಗತಿ ಪರರಾದ ಮುಸ್ಲಿಮರನ್ನು ಭಯೋತ್ಪಾದಕ ರೆಂದೂ ಹಣೆಪಟ್ಟಿ ಹಚ್ಚುವುದು ಕೋಮು ವಾದಿ ಸರಕಾರಗಳ ಕಾಯಕವೇ ಆಗಿದೆ. ಇಂತಹ ಮೂರ್ಖ ಕಾರ್ಯವನ್ನು ವಿಜಯ ಕರ್ನಾಟಕ ಪತ್ರಿಕೆಯೂ ಮಾಡಿತ್ತು (ಮಾಡುತ್ತಿದೆ). ಜುಲೈ 29, 2006ರಂದು ವಿ.ಕ. ಪತ್ರಿಕೆಯು ನಮ್ಮೂರಿನವರೇ (ಕೆರೂರ) ಆದ ಫೈರೋಜ್, ಪ್ರಗತಿಪರ ವಿಚಾರ ಹೊಂದಿದ ಗೂಡಸಾಬ ಗಡದಲ್ಲಿ ಚಿಕ್ಕ ವ್ಯಾಪಾರಸ್ಥ ಅಬೂಬಕರ ಕಳ್ಳಿಮನಿ ಎಂಬುವರನ್ನು "ಬಾಂಬೆ ಬಾಂಬ್ ಸ್ಫೋಟದಲ್ಲಿ ಆರೋಪಿಗಳು, ಅವರು ಭಯೋತ್ಪಾದಕರು, ಪೊಲೀಸರು ಅವರ ಶೋಧನೆ ನಡೆಸುತ್ತಿದ್ದಾರೆ" ಎಂದು ಮುಖ(ರ್ಖ)ಪುಟವನ್ನು ಮುದ್ರಿಸಿ, ಸಂಪೂರ್ಣ ಬಾಗಲಕೋಟೆ, ವಿಜಾಪೂರ ಜಿಲ್ಲೆಗಳನ್ನು ಅಶಾಂತಿಯ ತಾಣವಾಗಿಸಿತು. ಆದರೆ ಉಳಿದೆಲ್ಲ ಪತ್ರಿಕೆಗಳು ಸತ್ಯಾಂಶ ಪ್ರಕಟಿಸಿ ಅಮಾಯಕರ ಪರ ನಿಂತು ವಿಜಯ ಕರ್ನಾಟಕದ ಚಡ್ಡಿಯನ್ನು ಕಳಚಿದವು. ಆದರೆ ಈ ಅಮಾಯಕರು ತಮ್ಮ ಉಪಜೀವನ ಸಾಗಿಸಲು ಈಗಲೂ ಕಷ್ಟಪಡುತ್ತಿದ್ದಾರೆ.

ಈ ರೀತಿ ಪೊಲೀಸರು ಮತ್ತು ವಿ.ಕದಂತ ಫ್ಯಾಸಿಸ್ಟ್ ಪತ್ರಿಕೆಗಳು ವಿಚಾರವಾದಿಗಳ ವಿರುದ್ಧ ಆರೋಪ ಮಾಡು ವುದರಿಂದ ಜನರಲ್ಲಿ ಭಯದ ಬದಲು 'ಸತ್ಯ'ಕ್ಕೆ ಜೊತೆ ನೀಡುವ ಉತ್ಸಾಹ ಇಮ್ಮಡಿಯಾಗುತ್ತದೆ ಎಂಬುದು ಚಡ್ಡಿಗಳಿಗೆ ಅರ್ಥವಾಗಬೇಕು.

-ಅಬ್ದುಲ್ ರಝಾಕ್ ದಿ. ಟಪಾಲ, ಕೆರೂರ

ಪ್ರಸ್ತುತ ಕರ್ನಾಟಕದ ಸರ್ಕಾರ ಮತ್ತು ಪೊಲೀಸ್ ಉನ್ನತ ಅಧಿಕಾರಿಯೊಬ್ಬರು ರಾಜ್ಯದ ಜನಪರ, ರೈತ ಚಳವಳಿ ಹಾಗೂ ಕೋಮುವಿರೋಧಿ ಚಳವಳಿಗಳನ್ನು ಮಾಡುತ್ತಿರುವ 9 ಸಂಘಟನೆಗಳನ್ನು ಹಾಗೂ 33 ಜನರನ್ನು ನಕ್ಸಲ್ ಪಟ್ಟಿಯಲ್ಲಿ ಸೇರಿಸಿರುವುದು ಖಂಡನೀಯ.

ಈ ಪಟ್ಟಿಯನ್ನು ಬಿಡುಗಡೆ ಮಾಡಿದ ಪೊಲೀಸ್ ಅಧಿಕಾರಿಯನ್ನು ತಕ್ಷಣ ಅಮಾನತುಗೊಳಿಸಬೇಕು. ಆಧಾರ ರಹಿತ ಪಟ್ಟಿ ಮಾಡಿ ನಕ್ಸಲ್ ಬೆಂಬಲಿಗರು ಎಂದು ಪ್ರಚಾರಪಡಿಸಿ ಪ್ರಗತಿಪರ, ಜನಪರ, ರೈತ ಚಳವಳಿ ಹಾಗೂ ಕೋಮು ವಾದದ ವಿರುದ್ಧ ಚಳವಳಿ ರೂಪಿಸುತ್ತಿರುವ ವರನ್ನು ಹತ್ತಿಕ್ಕುವ ಪ್ರಯತ್ನ ನಡೆಸುತ್ತಿರು ವುದು ಮೇಲ್ನೋಟಕ್ಕೇ ಕಾಣಿಸುತ್ತದೆ.

ಜನಪರ ಚಳವಳಿಯಲ್ಲಿ ಕೋಮು ವಾದದ ವಿರುದ್ಧ ಧ್ವನಿ ಎತ್ತಿರುವ ವರನ್ನು ನಕ್ಸಲೈಟ್ ಎಂದು ಬಿಂಬಿಸಿ ಚಳವಳಿಗಾರರಿಗೆ ಬೆದರಿಕೆ ಒಡ್ಡುವುದು ಪ್ರಜಾಪ್ರಭುತ್ವಕ್ಕೆ ಎಸಗಿದ ಅಪಚಾರವಾಗಿದೆ. ಪ್ರಜಾಸತ್ತಾತ್ಮಕ ನೆಲೆಯಲ್ಲಿ ಹೋರಾಟ ಮಾಡುವವರನ್ನೆಲ್ಲ ನಕ್ಸಲ್ ಪಟ್ಟಿಯಲ್ಲಿ ಸೇರಿಸುತ್ತಾ ಹೋದರೆ ಪಟ್ಟಿ ಎಷ್ಟು ಉದ್ದವಾದೀತು ಗೊತ್ತೆ? ಇದು ಸರ್ಕಾರ ಗಮನಿಸ ಬೇಕಾಗುತ್ತದೆ. ಆದ್ದರಿಂದ ಕೂಡಲೇ ಪಟ್ಟಿಯಲ್ಲಿದ್ದ ವ್ಯಕ್ತಿಗಳನ್ನು ಮತ್ತು ಸಂಘಟನೆಗಳನ್ನು ಕೈಬಿಡಬೇಕು ಎಂದು ಒತ್ತಾಯಿಸುತ್ತೇವೆ.

-ಅಂಕೋಲಾದ ಕರ್ನಾಟಕ ಕೋಮುಸೌಹಾರ್ದ ವೇದಿಕೆ, ಕರ್ನಾಟಕ ಸಂಘ, ಚುಟುಕು ಸಾಹಿತ್ಯ ಪರಿಷತ್, ಕರ್ನಾಟಕ ಜನಪರ ವೇದಿಕೆ, ಗ್ರಾಮೀಣ ಯುವ ಹೋರಾಟ ಸಮಿತಿ, ಸಗಡಗೇರಿ ಮತ್ತು ಇತರರು.

ಅರಾಜಕತೆ, ಅಸಮಾನತೆ, ಮೇಲು ಕೀಳೆಂಬ ವಿಚಾರಗಳ ವಿರುದ್ಧ ಹೋರಾಡುವ ಸ್ವತಂತ್ರ ಧ್ವನಿ- ಕಡಿದಾಳ್ ಶಾಮಣ್ಣ ಅರೆ, ಪೊಲೀಸರೇ ಹೋಗಿ ಕರ್ನಾ ಟಕದ ಬಡ ರೈತನ ಮನೆಯಲ್ಲಿ ತಾಸು ಕುಳಿತುಕೊಂಡು, ಅವರನ್ನು ಮಾತನಾಡಿಸಿ ಶಾಮಣ್ಣರ ಬಗ್ಗೆ ಪ್ರಸ್ತಾಪಿಸಿ, ನಿಮಗಾಗ ಅರಿವಾಗುವುದು ಅವರು ನಕ್ಸಲರೋ ಅಥವಾ ನಿಮ್ಮನ್ನು ನಾಚಿಸುವವರೋ ಎಂದು. ಬ್ರಿಟಿಷ್ ಪೊಲೀಸರ ಹಾಗೆ ವರ್ತಿಸುವುದನ್ನು ಬಿಟ್ಟು ಸತ್ಯಾಸತ್ಯತೆಗಳನ್ನು ನಿಮ್ಮ ನಿಮ್ಮ ಮನಗಳಿಗೆ ಸಂತೈಸಿಕೊಂಡು ನಿರ್ಧರಿಸಿ. ನೀವೂ ರೈತರ ಮಕ್ಕಳೇ. ಏನೋ ನಾಲ್ಕು ಅಕ್ಷರ ಕಲಿತಿದ್ದಕ್ಕೆ ನಿಮಗೆ ನೌಕರಿ!!! ನಿಮ್ಮ ಹಕ್ಕುಗಳ ಹೋರಾಟಕ್ಕೆ ಕಡಿದಾಳ್ ಶಾಮಣ್ಣನವರಂಥ ಧೀರರ ಚಾಕರಿ!!!


ಇಂಥ ಬಡವರ, ಶೋಷಿತರ ಪರ ಹೋರಾಟದ ನಾಯಕನಿಗೆ ನಕ್ಸಲರ ಪಟ್ಟಿ ಕಟ್ಟಿ ಕುತಂತ್ರದಿಂದ ಇವರನ್ನು ನಿರ್ನಾಮ ಮಾಡಬೇಕೆಂಬುದು ಶುದ್ಧ ಅಧರ್ಮ, ಅನ್ಯಾಯ. ಜನವಿರೋಧಿ ನೀತಿಗಳನ್ನು ಸರ್ಕಾರ ಕೈ ಬಿಡಬೇಕು.

-ಶ್ರೀನಿವಾಸ ಶಾಸ್ತ್ರಿ, ಹುಬ್ಬಳ್ಳಿ

ಕೋಮುವಾದಿಗಳ ಗೊಡ್ಡು ಬೆದರಿಕೆಗೆ ದಿಟ್ಟತನ ದಿಂದ ಉತ್ತರಿಸಿರುವ ತಮಗೆ ಧನ್ಯವಾದಗಳು. ಕೋಮು ವಾದದ ವಿರುದ್ಧ ಹಿಂಸೆಯ ವಿರುದ್ಧ ಮತ್ತು ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟ ಮುಂದುವರಿಯಲಿದೆ ಎಂಬ ನಿಮ್ಮ ಖಚಿತವಾದ ನಿಲುವು ಸ್ವಾಗತಾರ್ಹ. ಭ್ರಷ್ಟ ಪೊಲೀಸರ ನೆರವಿನಿಂದ ಜನಪರ ಹೋರಾಟದಿಂದ ವಿಮುಖರನ್ನಾಗಿಸಬಹುದೆಂದು ತಿಳಿದಿರುವುದು ಈ ರಾಜ್ಯದ ಕೋಮುವಾದಿಗಳ ಮೂರ್ಖತನ.

ಯಾವುದೇ ನಿಜವಾದ ಹೋರಾಟಗಾರ ಪೊಲೀ ಸರು ಮತ್ತು ಸರ್ಕಾರದ ಬೆದರಿಕೆಗೆ ಹೆದರುವುದಿಲ್ಲ. ನಕ್ಸಲೈಟರ ಬೆಂಬಲಿಗರೆಂದು ಹಣೆಪಟ್ಟಿ ಹಚ್ಚುವುದರಿಂದ ಹೋರಾಟರಂಗದಲ್ಲಿರುವ ಜೊಳ್ಳುಗಳು, ಗಟ್ಟಿಕಾಳು ಗಳಿಂದ ಬೇರ್ಪಡಬಹುದಷ್ಟೇ. ಇದರಿಂದ ಒಂದು ರೀತಿಯಲ್ಲಿ ಹೋರಾಟಗಾರರಿಗೇ ಸಹಾಯ (ನಿಜವಾದ ಹೋರಾಟಗಾರರು ಯಾರು ಎಂದು ಬಹಿರಂಗವಾಗಿ ತಿಳಿಯುವುದರಿಂದ)ವಾಗುತ್ತದೆ.

-ಎಸ್.ಎಸ್. ವೆಂಕಟೇಶ್, ಅಧ್ಯಕ್ಷರು.
ಜನಜಾಗೃತಿ ವೇದಿಕೆ, ಬೆಂಗಳೂರು.



ಪ್ರಜಾಪ್ರಭುತ್ವಕ್ಕೂ ಒಂದು ದುಂಬಿಯ ಆಡಳಿತಕ್ಕೂ ವ್ಯತ್ಯಾಸವಿಲ್ಲ; ಏಕೆಂದರೆ ಇಲ್ಲಿ ಶೇ. 49 ಜನರ ಮೇಲೆ ಶೇ. 51 ಜನರು ದಬ್ಬಾಳಿಕೆ ನಡೆಸಬಹುದು - ಥಾಮಸ್ ಜೆಫರ್ಸನ್

ಕಾಳಮಾವ ಕಾಯಿನ್ ಬೂತಿನಿಂದ ಮಾತನಾಡಿದ್ದು!

ಹೋಟೆಲಿನ ಬಂಡವಾಳ ಮತ್ತು ಆದಾಯ ಸದು ನಾಗಿ ನಡೆದುಕೊಂಡು ಹೋಗುತ್ತ ಆರಕ್ಕೇರದೆ ಮೂರಕ್ಕಿಳಿಯದೆ ಚಿಕ್ಕಣ್ಣ ಹಲವು ವರ್ಷಗಳಿಂದ ಇದ್ದಂತೆಯೇ ಇದ್ದು ವಾಟಿಸ್ಸೆಯಂತವರ ಒತ್ತಾಯದ ಮೇರೆಗೆ ಹೋಟೆಲ್ ಬಾಗಿಲಲ್ಲಿ ಕಾಯಿನ್ ಬೂತ್ ತಂದು ಹಾಕಿದ. ಅದರೊಳಕ್ಕೆ ಒಂದು ರೂಪಾಯಿ ಹಾಕಿ ಮಾತನಾಡಿ ಹೋಗುವವರನ್ನು ಕಾಳಮಾವ ಕೌತುಕದಿಂದ ನೋಡುತ್ತಿರುವಾಗ ವಾಟಿಸ್ಸೆ,

"ನೀನು ಮಾತಾಡ್ತೀಯ ದ್ವಡಪ್ಪ?" ಎಂದ.

"ಯಾರ ಕುಟ್ಗ ಮಾತಾಡನ?"

"ದ್ಯಾವೇಗೌಡ್ರುನ್ನ ಮಾತಾಡ್ಸು, ನಂಬರ್ ವಡದು ಕೊಡ್ತಿನಿ."

"ಅವುನತ್ರ ಮಾತಾಡದೇನಿದ್ದತೀಗ, ಅವುನಿಗೂ ಊರೋಗು ಅಂತದೆ, ಕಾಡು ಬಾ ಅಂತದೆ ನನಿಗೂ ಅಂಗೆ ಆಗ್ಯದೆ."

ಬಂಗಾರುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಅದ್ನೆ ಮಾತಾಡು ದ್ವಡಪ್ಪ, ಮಾಡೋದನ್ನಲ್ಲ ಮಾಡ್ಯಾಯ್ತು ಇನ್ನು ಮ್ಯಾಲಾರ ನ್ಯಟ್ಟಗಿರು ಅಂತ ಹೇಳು."

"ಅದನ್ನಲ್ಲ ಹೇಳಕ್ಯಾಗದಿಲ್ಲ, ಸುಮ್ಮನಿರ್ಲಿ ಅತ್ತಗೆ."

"ಹೋಗ್ಲಿ ಭದ್ರಾವತಿಲಿರೊ ನಿನ್ನ ಮಗಳ ಜ್ವತೆ ಮಾತಾಡ್ತಿಯಾ?"

"ನೆಂಬ್ರುಗೊತ್ತಿಲ್ಲ ಕಂದ."

"ನನಿಗ್ಗೊತ್ತು.ವಡದು ಕೊಡ್ತಿನಿ ಮಾತಾಡು" ಎಂದ ವಾಟಿಸ್ಸೆ ಭದ್ರಾವತಿಯಲ್ಲಿರುವ ಕಾಳಮಾವನ ಕಡೇ ಮಗಳು ಮಂಜುಳಮ್ಮನಿಗೆ ಫೋನ್ ಮಾಡಿಕೊಟ್ಟ.

"ತಾಯಿ ನಾನು ಕಣವ್ವಾ ಊ, ಯಲ್ಲಾ ಚನಾಗಿದ್ದೀರಾ ಇಲ್ಲೆ ಊರು ಮುಂದೆ ಚಿಕ್ಕ ಫೋನು ಡಬ್ಬ ಮಡಗ್ಯವುನೇ ಅದರಲ್ಲಿ ಮಾತಾಡು ಅಂತ ವಾಟಿಸ್ಸೆ ನೆಂಬ್ರು ವಡದು ಕೊಟ್ಟ. ಊ..... ನೋಡವ್ವ.... ಒಂದು ರೂಪಾಯ ದೇವರ ಹುಂಡಿಗಾಕಿದಂಗಾಕೀ ನಿನ್ನ ಕುಟ್ಗ ಮಾತಾಡ ಬವುದು. ಮಳಿಯಂಗಲ್ವೀ.... ಇಲ್ಲಿ ಅಂಗೇ ಊದಿ ಕಂಡದೆ. ಇನ್ನು ವಲಬಿತ್ತಿಲ್ಲಾ ಆಸಾಡ ಕಳಿಬೇಕೂ. ದರೆವಲಕೆ ಯಂತದೊ ಗಿಡ ಹತ್ತಿಗಂಡಿತ್ತು ಅದನ್ಕಲ್ಲ ಕಿತ್ತಾಕಿದೆ. ಊ. ಏನು ಮಾಡದವ್ವ ನೋಡಿಕಂಡು ಸುಮ್ಮನಿರಕ್ಯಾದತೇ?'' ಎಂದು ಕಾಳಮಾವ ಮಾತನಾಡುವಾಗ ವಾಟಿಸ್ಸೆ

"ಚಿಕ್ಕಣ್ಣ ಇನ್ನೊಂದಿಷ್ಟು ಕಾಯಿನ್ ಕೊಡು. ನಮ್ಮ ದ್ವಡಪ್ಪ ಯಾಕೋ ನಿಲ್ಸಂಗೆ ಕಾಣದಿಲ್ಲ" ಎಂದು ಕಾಯನ್ ಈಸಿಕೊಂಡು ಹಾಕುತ್ತಾ ಹೊರಟ.


"ರಂಗೇಗೌಡ ಚನಾಗಿದ್ದನೇನವ್ವಾ? ಅಂಗರೆ ಭಾರಿ ಮಳಿ ಅನ್ನು? ಸ್ವಾಮಾರ ಕಾರಬ್ಬ ಬತ್ತಿಯಾ? ಅಂಗರೆ ಪಕ್ಷಕ್ಕೆ ಬತ್ತಿಯಾ? ಬಾ, ನಿಮ್ಮವ್ವ ಮಂಡಿನವ್ವು ಅಂತಳೆ. ಆದ್ರು ಅದರಲ್ಲೇ ಕ್ಯಲಸ ಮಾಡ್ತಳೆ. ನಾನು ಸುಮ್ಮನಿರೂ ಅಂದ್ರು ಸುಮ್ಮನಿರದಿಲ್ಲ, ಆ... ಊ ಈಗಿನ ಕಾಲದ ಸ್ವಸೆರ ಮಾತಾಡಸಕ್ಯಾದತೇ ಅದೇಳು?"

"ಸಾಕು ತಗಿ ದ್ವಡಪ್ಪಾ"

"ಆ ಕಪ್ಪಸ ಕರ ಈದಿತ್ತಲ್ಲ, ಅದರ ಕರಿನ ಜ್ವತಿಗೆ ಕರ ಹಾಕಬೇಕು. ಏನಿಲ್ಲ ಅಂದ್ರು ಐದು ಸವುರುಪಾಯಿ ಬೇಕು. ಬೂಕನಬ್ಯಟ್ಟದ ಜಾತ್ರೆವೊತ್ತಿಗೆ ಏನಿಲ್ಲ ಅಂದ್ರು ಇಪ್ಪತ್ತೈದು ಸಾವುರೂಪಾಯಿ ಕರಾಯ್ತವೆ. ಅದೇಳಿದ್ರೆ ಯಾವನು ಕಿವಿಮ್ಯಾಲಾಯ್ಕಳದಿಲ್ಲ, ಹೋಗತ್ತಗೆ."

"ಸಾಕು ಬುಡು ದ್ವಡಪ್ಪ"

"ತಡಿಲ, ಏನಾರಿ ಅಂಗಾದಿ? ಇತ್ತಗಿ ಕಣವ್ವ, ಯಾವ ಸೂಳೆ ಮಗನಿಗೂ ದನವೇಬೇಕಾಗಿಲ್ಲ ಹೋಗತ್ತಗೆ. ಆ ಕಡಸಾಗ್ನೆ ಹೋರಿಗೆ ಬಂದು ವಾರಾಯ್ತು, ಮನುಸುರ ಮ್ಯಾಲೆ ನ್ಯಗಿತದೆ ಹೋರಿ ಬುಡಿಸಿಗಂಡು ಬನ್ರೊ ಮುಂಡೆ ಮಕ್ಳ ಅಂದ್ರೆ ಯಾವನೂ ಮಾತ ಕೇಳದಿಲ್ಲ, ನಾನು ಹೋಗಕ್ಯಾದತೇ?....."



"ನಾನೋಗಿ ಬುಡಿಸಿಗಂಡು ಬತ್ತಿನಿ. ಬುಡು ದ್ವಡಪ್ಪ" ಎಂದ ವಾಟಿಸ್ಸೆ.

"ಇದ್ಯಾಕ್ಲ ನಿಂತೆ ಹೋಯ್ತು?" ಎಂದು ಕಾಳಮಾವ ರಿಸೀವರ್ ಹಿಡಿದೇ ವಾಟಿಸ್ಸೆಕಡೆ ನೋಡಿದ.

"ಅಷ್ಟೇ ದ್ವಡಪ್ಪ ಅದರ ಪವರ್ರಿರದು. ಐ ರೂಪಾಯಿನ ಕಾಯಿನ್ ಹಾಕಿದೆ ಮುಗಿತು" ... ವಾಟಿಸ್ಸೆ.

"ಐದು ರೂಪಾಯಿ ಮುಟ್ಟತೆ?"

"ಮತ್ತೆ ಹೋಗಿ ಮಗಳ ಮಾತಾಡಿಸಗಂಡು ಬ... ಸರಿಯಾಗಿ ಇನ್ನುರುಪಾಯಿ ಆಯ್ತದೆ. ಅಂತೆದ್ರಲ್ಲಿ ನೀ... ಕೇವಲ ಐದು ರೂಪಾಯಿಲಿ ಯಲ್ಲಾ... ಮಾತಾಡಿದ್ದಿ."

"ಯಲ್ಲಾನು ಎಲ್ಲಿ ಮಾತಾಡಿದುನ್ನ?"

"ನಿನ್ನಸ ಹೋರಿಗೆ ಬಂದಿರದ್ರಿಂದ ಹಿಡಿ... ಯಲ್ಲಾನು ಹೇಳಿದಪ್ಪ, ಅವ್ಯಲ್ಲ ಫೋ... ಮಾತಾಡೊ ಮಾತೆ."

"ಇನ್ನೇನು ಮಾತಾಡಕ್ಯಾದಲ್ಲ, ಒಂಗ ಬದ... ಇನ್ಯಾರ ಕುಟ್ಗೆಳಕ್ಯಾದತೂ? ಅದ್ಕೆ ಹೇಳಿದ್ನ..."

"ಒಂದೇ ರೂಪಾಯಿಲೇಳದ ಐ... ರೂಪಾಯಿಲೇಳಿದೆ ನೀನು."

"ಭದ್ರಾವತಿಗೆ ಒಂದು ಕಾಲ್ದಲ್ಲಿ ಐ... ರೂಪಾಯಿ ಕಂಡ್ರ ಬಸ್ ಚಾರ್ಜು. ... ಮಂಡೇವ್ರುಕೆ ಯರಡು ರೂಪಾಯಿ ತಗ... ಈಗ ಎಲ್ಲಿಗಾರ ಹೋಗಂಗಿದ್ದತೆ?" ಎ... ಕಾಳಮಾವ.

"ಈಗ ತಿರಗ ಬಸ್‌ಚಾರ್ಜ್ ಏರಿಸ್ಯ... ಕಣಮಾವ" ಎಂದಳು ಜುಮ್ಮಿ.

"ಏನಾರ ಎರಿಸಿಗಳ್ಳೇಳು ನನಿಗೇನು?"

"ನಮ್ಮ ದ್ವಡಪ್ಪನಿಗೆ ಇನ್ನ ಫೋನ್ ನಂಬರು ವ... ಒಂದು ರೂಪಾಯಿ ಚಿಲ್ರೆ ಇದ್ರು ಸಾಕು ಎಲ್ಲ...

ಗುರುವಿಗೇ 'ಮಲ್ನಾಡ್ ಡ್ರಿಂಕ್ಸ್' ಕುಡಿಸಿದ ರಾಮದಾಸ್!

ಇವರಿಗೆ ಅಧಿಕಾರ ಇರಲಿಲ್ಲ, ಅಂತಸ್ತು ಇರಲಿಲ್ಲ.

ಹೋಗಲಿ ಹಣ? ಆದಾದರೂ ಯಥೇಚ್ಛವಾಗಿತ್ತ?

ಅದೂ ಇಲ್ಲ.

ಹಾಳಾಗಲಿ. ಜಾತಿ? ಅದು ತಾನೆ ಮುಖ್ಯ? ಆದಾದರೂ ಇತ್ತ?

ಇಲ್ಲ, ಅವರ ಜಾತಿ ಯಾವುದು ಅನ್ನುವುದೇ ಗೊತ್ತಿಲ್ಲ!

ಅಂದಮೇಲೆ ಮುಗಿಯಿತು. ಇದು ಕಾರ್ಪೊರೇಷನ್ ಕೇಸು. ಶವಸಂಸ್ಕಾರಕ್ಕೆ ಅವರಿಗೆ ತಿಳಿಸಬೇಕು.

ಅರೆ, ಅದು ಹಾಗೆ ಆಗಲೇ ಇಲ್ಲ!

ಸಾವಿರಾರು ಜನ ಸೇರಿದ್ದರು. ಬರುವವರು ಬರುತ್ತಲೇ ಇದ್ದರು. ಹೋಗುವವರು ಹೋಗುತ್ತಲೇ ಇದ್ದರು. ಜನಸಂದಣಿ ಹೆಚ್ಚುತ್ತಲೇ ಹೋಯಿತು.

ಬಂದಿದ್ದ ಜನ ಎಂತಹವರು?

ಮೌಲ್ವಿಗಳು, ಪಾದರಿಗಳು, ಮಠಾಧೀಶರು!

ಹಿಂದೂ, ಕ್ರೈಸ್ತ ಮುಸಲ್ಮಾನರು!

ಅನಾಥರು, ಬಡವರು, ಶ್ರೀಮಂತರು!

ಮಿನಿ ಭಾರತವೇ ಅಲ್ಲಿತ್ತು!

ಜಾತಿ ಮರೆಯಾಗಿತ್ತು; ವರ್ಗನಾಶ ಆಗಿತ್ತು; ಮಾನವೀಯ ಮೌಲ್ಯ ಅಂತಃಕರಣ ವಾತಾವರಣ ಆವರಿಸಿತ್ತು!


ಚಾರ್ವಾಕ ರಾಮದಾಸ್ ಅವರ ಆಶಯ ಸತ್ಯವಾಗಿಸಿತ್ತು!

ಅಂತಿಮ ದರ್ಶನ ಪಡೆದು ಗೌರವ ಸಮರ್ಪಿಸಲು ಬಂದಿದ್ದ ಅಗಾಧ ಜನಸ್ತೋಮ ಈ ಭಾವನೆ ಮೂಡಿಸಿತ್ತು.

ಇದಾದನಂತರ ನೆನಪು ಕಾರ್ಯಕ್ರಮ. 'ನೆನಪು' ಪದದ ಬಗ್ಗೆಯೇ ಜಿಜ್ಞಾಸೆ. ಹಠ ಹಿಡಿದಂತೆ ಬೆಳಗಿನಿಂದಲೇ ಮೈಸೂರಿನಲ್ಲಿ ಸುರಿಯುತ್ತಿದ್ದ ಮಳೆ. ವಿಶಾಲವಾದ ಸಭಾಂಗಣ. ಸಭಿಕರೇ ಬಾರದಿದ್ದರೇನು ಎಂಬ ಆತಂಕ ಸಂಘಟಕರಿಗೆ. ನಿಗದಿತ ಸಮಯ ಬಂದರೂ ಬೆರಳೆಣಿಕೆ ಯಷ್ಟೇ ಸಭಿಕರು. ಸಂಘಟಕರ ಪೆಚ್ಚುಮೋರೆ ಕೆಲವೇ ನಿಮಿಷಗಳಲ್ಲಿ ಗೆಲುವಾಯಿತು. ಸುರಿಯುವ ಮಳೆಯಲ್ಲೂ ಜನ ಕಿಕ್ಕಿರಿದರು!

ಸಾಮಾನ್ಯವಾಗಿ 'ನೆನಪು ಕಾರ್ಯಕ್ರಮ', 'ಶ್ರದ್ಧಾಂಜಲಿ ಸಭೆ' ಇಂತಹವುಗಳಲ್ಲಿ ಅತಿಥಿಗಳು ಹೇಗೆ ಮಾತನಾಡುತ್ತಾರೆ ಅಂದರೆ.... ಚಂದನ ವಾಹಿನಿಯಲ್ಲಿ ವಾರ್ತೆ ಓದಿದಂತೆ! ನವರಸಗಳಿದ್ದರೂ ಅವರು ಬಳಸುವುದು ಶೋಕರಸ ಮಾತ್ರ! ಸಿಟ್ಟು, ಸೆಡವು, ಸಂತೋಷ, ದುಃಖ ಯಾವ ಸನ್ನಿವೇಶವೇ ಆಗಲಿ ಈ ಏಕತಾನವನ್ನು ಬಿಡುವುದಿಲ್ಲ, ರಾಮದಾಸ್ ಅವರೇ ಇದನ್ನ ಬಹಳ ಸಲ ಹೇಳಿದ್ದರು. ಆದರೆ ಅವತ್ತಿನ ಇಡೀ ಕಾರ್ಯಕ್ರಮ ಲವಲವಿಕೆಯಿಂದ ಕೂಡಿತ್ತು. ರಾಮದಾಸ್ ಎಂದೋ ಸಿಡಿಸಿದ್ದ ನಗೆ ಚಟಾಕಿಗಳು ಅವತ್ತು ಮತ್ತೆ 'ಧಂ ಧಮಾರ್' ಅಂತ ಸಿಡಿದು ಇಡೀ ಸಭಾಂಗಣ ನಗೆಯ ಅಬ್ಬರದಿಂದ ತುಂಬಿತ್ತು!

ಕಾರ್ಯಕ್ರಮ ಪ್ರಾರಂಭ ಆದದ್ದು ಹಿಂದೂಸ್ತಾನಿ



ಸಿಗಾಯನದಿಂದ. ಸೊಗಸಾದ ಗಾಯನ. ಆದರೆ ಮುಂದಿನ ಸಾಲಿನಲ್ಲೇ ಕುಳಿತಿದ್ದು ಕೆಲವರಿಗೆ ಅದಕ್ಕಿಂತಲೂ ಪ್ರಮುಖವಾದ ಯಾವುದೋ ಸಂಗತಿ ದೊರೆತಿರಬೇಕು. ಅದರಲ್ಲಿ ಅವರು ಮಗ್ನರಾಗಿದ್ದರು. ಎಂತಹ ಘಟಾನುಘಟಿ ಕುಳವೇ ಆದರೂ ಇಂತಹ ಸಭಿಕರು ನಡುಗಿಸುಬಿಡುತ್ತಾರೆ! ಅಲ್ಲದೆ ಕಾಲಮಿತಿ ಬೇರೆ ಇತ್ತು, ಹೀಗಾಗಿ ಅನಿವಾರ್ಯವಾಗಿ ತಮ್ಮ ಗಾಯನ ತುಂಡರಿಸಬೇಕಾಯಿತು. ಆನಂತರ ರಾಮದಾಸ್‌ಗೆ ಆತ್ಮೀಯವಾಗಿದ್ದ ಅಂತರ್ಜಾತಿ ವಿವಾಹ ಕುರಿತ ಚರ್ಚೆ ಅದನ್ನು ಪ್ರಭುಶಂಕರ ಅವರು ನಡೆಸಿಕೊಟ್ಟರು. ನಂತರ ಅವರಿಂದಲೇ ತಮ್ಮ ಶಿಷ್ಯನ ನೆನಪು.

'ರಾಮದಾಸ, ತೇಜಸ್ವಿ, ಶಾಮಣ್ಣ ಸುಂದರೇಶ್ ಇವರೆಲ್ಲ ನನ್ನ ಶಿಷ್ಯರು ಅಂತ ಹೇಳ್ತಾರೆ. ಆದರೆ ಅವರನ್ನು ನಾನು ಯಾವತ್ತೂ ನನ್ನ ತರಗತಿಯಲ್ಲಿ ನೋಡಿದ್ದೇ ಇಲ್ಲ, ಅವರೆಲ್ಲ ತರಗತಿ ಒಳಗಿರುವುದಕ್ಕಿಂತ ಹೊರಗಿದ್ದದ್ದೇ ಹೆಚ್ಚು ಇವರೆಲ್ಲ ಹೀಗೆ ಜೀವನದಲ್ಲಿ ಸಾಧನೆ ಮಾಡಿರುವುದನ್ನು ನೋಡಿದರೆ ವಿದ್ಯಾರ್ಥಿಗಳು ನನ್ನ ತರಗತಿಗಳಿಗೆ ಬರುವುದಕ್ಕಿಂತ ಹೊರಗಿದ್ದರೇ ಚಂದವೇನೋ ಅನ್ನಿಸುತ್ತೆ' ಹೀಗೆ ಹಾಸ್ಯಮಯವಾಗಿ ಮಾತನಾಡಿ ಇಡೀ ಕಾರ್ಯಕ್ರಮದ ದಿಕ್ಸೂಚಿಯಾದರು.

ಸಮಾರೋಪ ಸಮಾರಂಭದಲ್ಲಿ ದೇವನೂರು ಮಹದೇವ ಹೇಳಿದ ಘಟನೆ ಪ್ರಭುಶಂಕರ ಅವರಿಗೆ ಸಂಬಂಧಿಸಿದ್ದರಿಂದ ಇಲ್ಲಿ ಹೇಳಲು ಬಯಸುತ್ತೇನೆ. (ಇದನ್ನು ಅವರು ಹೇಳಿದಾಗ ಪ್ರಭುಶಂಕರ ಅವರು ಸಭಾಂಗಣದಲ್ಲಿ ಇರಲಿಲ್ಲ).

ದೇವನೂರು ಹೇಳಿದ್ದು:

ರಾಮದಾಸ್ ಬಹಳಷ್ಟು ಘಟನೆಗಳನ್ನು ಸ್ವಾರಸ್ಯಕರವಾಗಿ ಹೇಳುತ್ತಿದ್ದರು. ಒಂದು ಘಟನೆಯನ್ನು ಹೇಳ್ತೀನಿ.

ಒಂದು ಸಲ ರಾಮದಾಸ್ ತಮ್ಮ ಗೆಳೆಯರ ಜೊತೆ ಶಿವಮೊಗ್ಗಕ್ಕೆ ಹೋಗಿದ್ದರಂತೆ. ಅವರ ಸಂಗಡ ಡಾ. ಪ್ರಭುಶಂಕರ್ ಹಾಗೂ ಅವರ ಪತ್ನಿ ಡಾ. ಶಾಂತ ಅವರೂ ಇದ್ದರಂತೆ. ಒಂದು ಹಳ್ಳಿಯಲ್ಲಿ ಇವರಿಗಾಗಿ ಸೊಗಸಾದ ಬಗನಿ ಹೆಂಡ ತಯಾರು ಇತ್ತಂತೆ. ರಾಮದಾಸ್‌ಗೆ ಬಗನಿ ಹೆಂಡದ ಮೇಲೆ ಆಸೆ. ಆದರೆ ಗುರು ಹಾಗೂ ಗುರುಪತ್ನಿ ಜೊತೆಯಲ್ಲಿದ್ದಾರೆ! ಅವರಿಬ್ಬರೂ ಮಾದಕ ಪಾನೀಯ ಅಂದರೆ ಮಾರುದೂರ ಹಾರುವವರು. ಅವರನ್ನು ತಪ್ಪಿಸಿ ಹೋಗಬೇಕು. ರಾತ್ರಿ ಮೀರುತ್ತಾ ಇದೆ. 'ಸಾರ್ ಹೊರಗಡೆ ತಿರುಗಾಡಿಕೊಂಡು ಬರ್ತೀವಿ' ಅಂದ್ರಂತೆ ರಾಮದಾಸ್. 'ನಾವೂ ಬರ್ತೀವಿ ನಡೀರಿ' ಅಂದರಂತೆ ಅವರು. ಇವರಿಗೋ ಪೀಕಲಾಟ. 'ಯಾರೋ ಸ್ನೇಹಿತರ ಮನೆ ಸಾರ್ ಅದು' ಅಂದರಂತೆ ಇವರು. 'ಆಗ್ಲಿ ರಾಮದಾಸ್, ನಾನು ಬಂದರೆ ಏನು ತೊಂದರೆ. ಇಲ್ಲಿ ಇಬ್ಬರೇ ಕುಳಿತು ಬೇಸರ ಆಗ್ತದೆ' ಅಂತ ಅವರೂ ಹೊರಟುನಿಂತರಂತೆ. ವಿಧಿ ಇಲ್ಲದೆ ಅವರನ್ನು ಕರೆದುಕೊಂಡು ಬಗನಿ ಹೆಂಡ ಇದ್ದ ಮನೆಗೆ ಹೋದರಂತೆ. ಅಲ್ಲಿ ಆ ದಂಪತಿಗಳಿಂದ ಗೌರವಾನ್ವಿತ ದೂರ ಕಾಪಾಡಿ ಕೊಂಡು ಈ ಪಟಾಲಂ ಕುಳಿತಿತ್ತಂತೆ. ಪಾನೀಯ ಸಮಾರಾಧನೇನೂ ಪ್ರಾರಂಭಿಸಿದರಂತೆ.

ಕುತೂಹಲ ತಾಳಲಾರದೆ, ಇದುವರೆವಿಗೆ ಅವ... ಚಪ್ಪರಿಸುತ್ತಾ ಕುಡಿಯುತ್ತಿದ್ದ ಪಾನೀಯವನ್ನು ನೋಡು... ಇದ್ದ ಪ್ರಭುಶಂಕರ್ ಕೇಳಿದರಂತೆ– 'ಅದೇನ್ರಪ್ಪಾ ಅ... ನೀವು ಕುಡೀತಿರೋದು?'

'ಮಲ್ನಾಡು ಡ್ರಿಂಕ್ಸ್ ಸಾರ್' ಅಂದರಂತೆ ರಾಮದಾ...

'ಹೌದಾ, ಹೇಗಿರುತ್ತೆ ಅದು?'

'ಚೆನ್ನಾಗಿರುತ್ತೆ ಸಾರ್'

ಅಣಕ

ಎಚ್.ಎಲ್. ಕೇಶವಮೂರ್ತಿ

'ಹೌದಾ, ನನಗೆ ಒಂದು ಲೋಟ ಕೊಡಿ ನೋಡೋ...

ಅನ್ಯ ಮಾರ್ಗವಿಲ್ಲದೆ ಇವರು ಒಂದು ಲೋಟ... ಹಾಕಿಕೊಟ್ಟರಂತೆ. ಅದರ ರುಚಿ ನೋಡಿದ ಪ್ರಭುಶಂ... ಅವರು 'ಚೆನ್ನಾಗೇ ಇದೆ' ಎಂದು ಹೇಳುತ್ತಾ ಗಟಗ... ಕುಡಿದು ಮುಗಿಸಿ, 'ಎಲ್ಲಿ ಇನ್ನೊಂದು ಸ್ವಲ್ಪ ಹ... ಎಂದರಂತೆ. ಆ 'ಸ್ವಲ್ಪ' ಬಂದ ಮೇಲೆ 'ಶಾಂತನಿ... ಒಂದು ಗ್ಲಾಸ್ ಕೊಡಿ' ಅಂದರಂತೆ. ಆ ರೀತಿ... ಮಾಡಿದರಂತೆ ಗೆಳೆಯರು. ಅದರ ಸೇವನೆ ಮಾಡು... ಕೇಳಿದರಂತೆ 'ಮಲ್ನಾಡ್ ಡ್ರಿಂಕ್ಸ್ ಅಂದಿರಿ. ಸ್ಥಳೀಯವ... ಏನಂತ ಕರೀತಾರೆ ಇದನ್ನ.'

'ಮಲೆಗಳಲ್ಲಿ ಮಧುಮಗಳು ಕಾದಂಬರೀಲಿ ಕುವೆ... ಬರೀತರಲ್ಲಾ ಸಾರ್ ಬಗನಿ ಹೆಂಡ' ಅಂದರ... ರಾಮದಾಸ್.

ಇಷ್ಟನ್ನ ದೇವನೂರು ಹೇಳಿದರು: ನಮ್ಮ ಜೆ... ಹರಟುತ್ತಿದ್ದಾಗ ರಾಮದಾಸ್ ಹೇಳಿದ್ದು–ಇದರ ಮುಂ... ಸಾಲು ಇನ್ನೂ ಮಜವಾಗಿದೆ.

'ಹಾಗಂತಾರಾ... ಇದು ನಿಮ್ಮಲ್ಲೇ ಇರಲಿ. ನ... ಕುಡಿದೊ ಅಂತ ಯಾರಿಗೂ ಹೇಳಬೇಡಿ' ಅಂದರ... ಪ್ರಭುಶಂಕರ ಅವರು!

ಹೀಗೆ ಇಡೀದಿನ ಇಂತಹ ಹಲವಾರು ಘಟನೆಗ... ಹೇಳುವ ಮೂಲಕ ಇಡೀ ಸಭಾಂಗಣವನ್ನು ನಗೆಗಡಲಿ... ಕೆಡವಿದರು ಭಾಷಣಕಾರರು.

ಇಷ್ಟೇ ಆಗಿದ್ದರೆ ಕಾರ್ಯಕ್ರಮಕ್ಕೆ ಕಳೆನೇ ಬರುತ್ತಿರ... ಒಂದು ರೀತಿಯ ಇತ್ತೀಚಿನ ನಗೆಹಬ್ಬ ಆಗಿ ಕೊನೆಗೊ... ತ್ತಿತ್ತೇನೊ!

ಗವಂತೆ ಕೂತಿತ್ತಾವುಲೆ ಮಾತಾಡಿಕತ್ತರೆ ಅಲವೆ ಧ್ವದಪ್ಪ? ಎಂದ ಟಿಸ್ಸ್.

"ಅಲ್ಲಾ ಪ್ರಪಂಚ ಎಲ್ಲಿಗೆ ಬಂದು ನಿಂತಗತ್ತು ನೋಡಯ್ಯ. ಒಂದು ಪಾಯಿ ದಬ್ಬವಳಿಕಾಕಿ ಭದ್ರಾವತಿಗಂಟ ಮಾತಾಡಿದನಲ್ಲಾ ಛಿ" ಎಂದು ಣಮಾವ ವಿಜ್ಞಾನದ ವಿಸ್ಮಯವನ್ನು ಹೊಸದಾಗಿ ಕಂಡವನಂತೆ ತನ್ನ ಅಚ್ಚರಿಯನ್ನು ೀರುವಾಗ,

"ಭದ್ರಾವತಿಯಲ್ಲ ಧ್ವದಪ್ಪ ಪ್ರಪಂಚದ ಯಾವುದೇ ಮೂಲೆಲಿದ್ರೂ ಮಾತಾಡಬವುದು" ಎಂದ ವಾಟಿಸ್ಸ್.

"ಪೋನಿಂದೋಗ್ಲಿ ಕಣಮಾವ, ಟೀವಿದೇಳು. ಇದೇನೊ ಮಾತುಗಳಿಲಿಬತ್ತದೆ. ಟೀವಿಗೇನೇಳ್ತೀ?" ಎಂದ ಉಗ್ರಿ.

"ಏನೊ ಕಾಣೆ ಹೋಗ್ಲ ತಲಿಕೆಟ್ಟೋಯ್ತಾ ಅದೆ" ಎಂದು ಕಾಳಮಾವ ೀಳುತ್ತಿರುವಾಗ ಏನೋ ನೆನೆಸಿಕೊಂಡಂತೆ ಜುಮ್ಮಿ,

"ಓ ಈ ವಾಟಿಸ್ಸ್ ಯಾಕೆ ಇಲ್ಲೆ ಅವುನೆ ಅಂತ ಈಗೊತ್ತಾಯ್ತು" ಂದಳು.

"ಏನಕ್ಕ ಅಂಗಂತಿ?"

"ಶರಾಪು ನಿಂತೋದ ಮ್ಯಾಲೆ ಇಲ್ಲೇ ತಿರುಗ್ತಿ ಅಲವೇನ್ಲ?"

"ನೋಡಕ್ಕ ಶರಾಪು ನಿಲ್ಸದ್ರ ಬಗ್ಗೆ ನಾನು ಜೆಡಿಎಸ್ ಲೀಡ್ರಿಗಿಂತ ಮದ್ಲೆ ೋಚನೆ ಮಾಡಿದ್ದೆ. ಅವುರು ನಿಲ್ಸಿದ್ರಿಂದ ನನಿಗೇನು ಶಾಕಾಗಿಲ್ಲ."

"ಅಲ್ಲಾ ಹಿಂಗೆ ಇದ್ದಕ್ಕಿದ್ದಂಗೆ ಶರಾಪು ನಿಲ್ಸಿದ್ರಲ್ಲಾ, ಸರ್ಕಾರ ಯಂಗೆ ಡಸ್ತರೇ?" ಎಂದ ಸೀರ.

"ಸರ್ಕಾರ ಮುದ್ಲಿಗಿಂತ ಚನ್ನಾಗೆ ನ್ಯಡಿತದೆ ಚಿಗಪ್ಪ" ಎಂದ ವಾಟಿಸ್ಸ್.

"ಅದ್ಯಂಗ್ನಾ?"

"ಈಗ ನನ್ನ ಪ್ರಾಬ್ಲಮ್ಮನೆ ತಗೊ. ಮದ್ಲು ತರ್ಟೀನ್ ರುಪೀಸ್ ಕೊಟ್ಟು ಪ್ಯಾಕಿಟ್ ಹಾಕತಿದ್ದೆ. ಈಗ ಅದಕ್ಕಿಂತ ಸೆವೆನ್ ರುಪೀಸ್ ಜಾಸ್ತಿ ಕೊಟ್ಟು ಲರ್ ಡ್ರಿಂಕ್ಸ್ ತಗತಾಯಿದ್ದಿನಿ. ಅಲ್ಲಿಗೆ ಸರ್ಕಾರಕೆ ಶರಾಪಿಗಿಂತ ಹೆಚ್ಚಿಗೆ ದಾಯ ಬತ್ತದೆ ಅಂದಂಗಾಯ್ತು."

"ಓ ಅಂಗೆ ಅನ್ನು ನಾನಿದೇನಪ್ಪ ಶರಾಪನೇ ರದ್ದು ಮಾಡಿದ್ರಲ್ಲಾ ಅಂತ ಯೋಚನೆ ಮಾಡತಿದ್ದೆ."

"ಯೋಚನೆ ಮಾಡೊ ಕಾಲ ಮುಂದೆ ಬತ್ತದಿರು ಚಿಗಪ್ಪ" ಎಂದ ವಾಟಿಸ್ಸ್.

■

ಸಮಾಜವಾದಿಗಳ ಕಾರ್ಯಕ್ರಮ ಅಂದಮೇಲೆ ಒಂದಷ್ಟು ಪ್ರತಿಭಟನೆ, ಸೈದ್ಧಾಂತಿಕ ವಿರೋಧ, ಅರುಚಾಟ ಇದ್ದರೇನೇ ಅದಕ್ಕೊಂದು ಕಳೆ. ಅದೂ ನಡೆಯಿತು. 'ಜನಸಂಖ್ಯೆ ಆಧಾರಿತ ಮೀಸಲಾತಿ' ಕುರಿತಂತೆ ನಾಗಭೂಷಣ, ರವಿವರ್ಮಕುಮಾರ್ ನಡುವೆ ಮಾತಿನ ಚಕಮಕಿ ನಡೆದರೆ, ರೈತಸಂಘದ ಮೇಲ್ಮಟ್ಟದ ಪದಾಧಿಕಾರಿಗಳು ಸಂಘವನ್ನು ತ್ಯಜಿಸಿ ಕೋಮುವಾದಿ ಭಾರತೀಯ ಜನತಾ ಪಕ್ಷ ಸೇರಲು ಕಾರಣ-ರೈತಸಂಘ ತನ್ನ ಕಾರ್ಯಕರ್ತರಿಗೆ ಅಧ್ಯಯನ ಶಿಬಿರಗಳನ್ನು ನಡೆಸುವಲ್ಲಿ ಸೋತದ್ದು ಎಂಬುದನ್ನು ಕುರಿತಂತೆ ರವಿ, ಪುಟ್ಟಣ್ಣಯ್ಯ ಮತ್ತು ರೈತಸಂಘದ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು.

ರವಿವರ್ಮಕುಮಾರ್ ಹೇಳಿದ ಒಂದು ಘಟನೆ ಇಲ್ಲಿ ಪ್ರಸ್ತುತ ಅನ್ನಿಸುತ್ತೆ. ಎಂ.ಡಿ. ನಂಜುಂಡಸ್ವಾಮಿಯವರು ಅಧಿಕಾರ ವಿಕೇಂದ್ರೀಕರಣದಲ್ಲಿ ನಂಬಿಕೆ ಇಟ್ಟವರು. ಆದರೂ ರೈತ ಸಂಘದ ಎಲ್ಲಾ ಕಾರ್ಯಗಳನ್ನೂ ಅವರೇ ಮಾಡುತ್ತಿದ್ದರು! ರವಿ ಕೇಳಿದರಂತೆ 'ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡುವ ನೀವು ಯಾಕೆ ಅಧಿಕಾರ ಕೇಂದ್ರೀಕರಣ ಮಾಡಿಕೊಂಡಿದ್ದೀರಿ? ಇದನ್ನು ವಿಕೇಂದ್ರೀಕರಣ ಮಾಡಬಾರದೆ?'

ಬಹಳ ಒತ್ತಾಯದ ನಂತರ ವಿಕೇಂದ್ರೀಕರಣಕ್ಕೆ ಸಮ್ಮತಿಸಿದರಂತೆ.

ಇನ್ನು ಮುಂದೆ ಯಾರು ಯಾರಿಗೆ ಅಧಿಕಾರ ಹಂಚಬೇಕು ಎಂಬ ಪ್ರಶ್ನೆ.

ಸಂಘಟನೆ. ಇದನ್ನು ಯಾರಿಗೆ ಕೊಡಬೇಕು?

'ಸಂಘಟಿಸುವ ಶಕ್ತಿ ಯಾರಿಗಿದೇರಿ? ಯಾರಿಗೂ ಇಲ್ಲ' ನಂಜುಂಡಸ್ವಾಮಿ ಉತ್ತರ.

ಹಾಗಾಗಿ ಸಂಘಟನೆ ಅವರ ಪಾಲಾಯಿತು.

ಇನ್ನು ಹಣಕಾಸು ವಿಷಯ.

'ಆರ್ಥಿಕ ಶಿಸ್ತು ಯಾವನಿಗಾದರೂ ಇದೆಯ? ಯಾರಿಗೂ ಇಲ್ಲ'

ಹಣಕಾಸು ವಿಷಯವೂ ಅವರ ಬಗಲಿಗೆ.

ಸಭೆ ನಿರ್ವಹಣೆ ಸಂಗತಿ.

ತಮ್ಮನ್ನು ಬಿಟ್ಟರೆ ಯಾರಿಂದಲೂ ಸಾಧ್ಯ ಇಲ್ಲ!

ಹಾಗಾಗಿ ಎಲ್ಲ ವಿಷಯಗಳೂ ಮತ್ತೆ ಅವರ ಬಗಲಿಗೇ ಹೋದುವಂತೆ!

ಇದನ್ನು ಯಾಕೆ ಹೇಳುತ್ತಿದ್ದೇನೆಂದರೆ ರಾಮದಾಸ್‌ಗೂ ಇಂತಹದ್ದೇ ಸ್ವಭಾವ. ಯಾವುದಾದರೂ ಕಾರ್ಯಕ್ರಮ ರೂಪಿಸಬೇಕಾದರೆ ಎಲ್ಲವನ್ನು ತಾನೇ ಮಾಡಬೇಕು ಎಂಬ ಕೆಟ್ಟ ಹಟ.

ಇದಕ್ಕೆ ಕಾರಣ-ಬೇರೆಯವರ ಮೇಲಿನ ಅಪನಂಬಿಕೆಗಿಂತಲೂ ತಾನು ಹಿಡಿದ ಕಾರ್ಯ ಅಚ್ಚುಗಟ್ಟಾಗಿರಬೇಕೆಂಬ ನಿಲುವು ಇರಬಹುದೆ?

ಇತ್ತೀಚೆಗೆ ಒಬ್ಬ ವೈದಿಕ ಪತ್ರಕರ್ತ ಹಲವಾರು ವರ್ಷಗಳಿಂದ ರಾಮದಾಸ್ ಮಾಡಿದ ಭಾಷಣ ವ್ಯರ್ಥ ಎಂಬರ್ಥದ ಮಾತುಗಳನ್ನು ಬರೆದಿರುವುದನ್ನು ನೋಡಿದೆ. ಅವರಿಗೊಂದು ಪ್ರಶ್ನೆ-

ರಾಮದಾಸ್ ಮರಣ ಹೊಂದಿದ ದಿವಸ, ಅವರ ನೆನಪಿನ ಕಾರ್ಯಕ್ರಮಕ್ಕೆ ಅಷ್ಟೊಂದು ಅಗಾಧ ಸಂಖ್ಯೆಯಲ್ಲಿ ಜನ ಸೇರಿದ್ದರಲ್ಲ, ಯಾವ ಚುಂಬಕ ಶಕ್ತಿ ಕಾರಣ? ಸಾವಿರಾರು ಯುವ ಮನಸ್ಸುಗಳಲ್ಲಿ ವೈಚಾರಿಕತೆಯನ್ನು ಮೂಡಿಸಿದ ಅವರ ಭಾಷಣಗಳು!

ಇದು ವ್ಯರ್ಥ ಅನ್ನುವುದಾದರೆ ಸಾರ್ಥಕ ಯಾವುದು?

■

ಮರೆಯುವ ಮುನ್ನ



ಪಿ. ಲಂಕೇಶ್ -ಜೂನ್ 23, 1991

ಚಂದ್ರಶೇಖರ್: ಪ್ರಧಾನಿಯಾಗಿ ತೋರಿದ್ದೇನು?

ಬೋಂಡ್ಸಿ ಬಾಬಾ ಚಂದ್ರಶೇಖರ್ ಸದ್ಯದಲ್ಲೇ ಕೆಳಗಿಳಿಯಲಿದ್ದಾರೆ. ಇದರಿಂದ ಇವರ ಶತ್ರುಗಳಿಗೆ ಖುಷಿಯಾಗಿದೆ. ಸಿನಿಕರು ತಮ್ಮ ನಿರೀಕ್ಷೆ ನಿಜವಾದದ್ದಕ್ಕೆ ಹಿಗ್ಗತೊಡಗಿದ್ದಾರೆ. ವಿ.ಪಿ. ಸಿಂಗ್ ತರಹದ ಅವರ ಪರಮಶತ್ರುಗಳು ತಮ್ಮ ಪಕ್ಷಕ್ಕಿಂತ ಹೆಚ್ಚಾಗಿ ಚಂದ್ರಶೇಖರ್ ಪಕ್ಷ ಸೋತದ್ದಕ್ಕೆ ಸಂತೋಷಗೊಂಡಿದ್ದಾರೆ.

ಕಳೆದ ವರ್ಷ ನವೆಂಬರ್ 10 ರಂದು ಚಂದ್ರಶೇಖರ್ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗ ಅವರು ಹಾಸ್ಯಾಸ್ಪದ ವ್ಯಕ್ತಿಯಂತೆ ಕಾಣುತ್ತಿದ್ದರು. ಜನತಾದಳವನ್ನು ಅತಿಯಾಗಿ ಪ್ರೀತಿಸುವವರು ಅವರೊಬ್ಬ ಪಕ್ಷಾಂತರಿ ಎಂದೂ, ಸ್ವಂತ ಪಕ್ಷಕ್ಕೆ ದ್ರೋಹ ಬಗೆದವರೆಂದೂ ವಾದಿಸಿದರು; ಅವರನ್ನು ಚರಣ್‌ಸಿಂಗ್‌ಗೆ ಹೋಲಿಸಿ ಗೇಲಿ ಮಾಡಲಾಯಿತು. ಆದರೆ ಜನ ಮರೆತದ್ದು, ವಿ.ಪಿ. ಸಿಂಗ್ ಅವರಿಗೆ ಬಿಜೆಪಿ ತನ್ನ ಬೆಂಬಲ ಹಿಂತೆಗೆದುಕೊಂಡಾಗ ವಿ.ಪಿ. ಸಿಂಗ್ ರಾಜೀನಾಮೆ ಕೊಡುವುದು ಅನಿವಾರ್ಯವಾಯಿತು; ಕಾಂಗ್ರೆ, ಜನತಾದಳ, ಕಮ್ಯುನಿಸ್ಟರು ಕೂಡಲೆ ಚುನಾವಣೆ ಎದುರಿಸಲು ಹೆದರುತ್ತಿದ್ದರು. ಕಾಂಗ್ರೆಗೆ ಬಿಜೆಪಿ ಮತ್ತು ಅಯೋಧ್ಯೆಯ ಬಿಸಿ ಆರಲು ವೇಳೆ ಬೇಕಾಗಿತ್ತು. ಎಲ್ಲರಿಗೂ ಕೆಲವು ತಿಂಗಳ ರಜೆ ಬೇಕಾಗಿತ್ತು, ಆಗ ಚಂದ್ರಶೇಖರ್ ರಾಜೀವರ ಬೆಂಬಲದಿಂದ ಪ್ರಧಾನಿಯಾದರು. ರಾಷ್ಟ್ರಾಧ್ಯಕ್ಷ ವೆಂಕಟರಾಮನ್ ರಾಜೀವರನ್ನು ಕರೆದು 'ಕನಿಷ್ಠ ಎರಡು ವರ್ಷ ನಿಮ್ಮ ಬೆಂಬಲ ಹಿಂತೆಗೆದುಕೊಳ್ಳಕೂಡದು' ಎಂದು ಹೇಳಿದರು. ರಾಜೀವ್ ಒಪ್ಪಿದರು.

ಎಲ್ಲರೂ ನಿರೀಕ್ಷಿಸಿದ್ದು, ಹಳೇಕಾಲದವರಂತೆ ಕಾಣುವ ಶೇಖರ್ ಪ್ರಧಾನಿಯಾಗಿ ವಿಫಲರಾಗುತ್ತಾರೆ, ಇನ್ನು ಕೆಲವು ಕಾಲ ಸರ್ಕಾರವೆನ್ನುವುದು ಇರುವುದಿಲ್ಲ-ಎಂದು. ಕಾಂಗ್ರೆಸ್ ಮತ್ತು ರಾಜೀವ್ ಕೂಡ ಚಂದ್ರಶೇಖರ್‌ರನ್ನು ಬೆರಳಿನ ಸುತ್ತ ತಿರುಗಿಸಲು ಅಣಿಯಾದರು. ಅವರು ಈ ಯೋಜನೆಯಲ್ಲಿದ್ದಾಗಲೇ ಚಂದ್ರಶೇಖರ್ ರಾಜೀವರಿಂದ ಸರ್ಕಾರದಲ್ಲಿ ತಲೆ ಹಾಕದಿರುವ ಭರವಸೆ ಪಡೆದರು.

ಅಂದಿನ ಪ್ರಧಾನಿ ಚಂದ್ರಶೇಖರ್ ಅವರೊಂದಿಗೆ ಪಿ. ಲಂಕೇಶ್



ಹಾಗೆ ಭರವಸೆ ಪಡೆದು ಹೊರಟ ಚಂದ್ರಶೇಖರ್ ನಿಜಕ್ಕೂ ಪ್ರಧಾನಿಯ ದಿಟ್ಟತನದಿಂದ ಧೈರ್ಯದಿಂದ ವರ್ತಿಸತೊಡಗಿದರು. ತಾವು ಬಲ್ಲ ಜನರನ್ನು ಮಂತ್ರಿಗಳನ್ನಾಗಿ ನೇಮಿಸಿಕೊಂಡು ಅವರು ನಿಭಾಯಿಸಬಹುದಾದ ಖಾತೆಗಳನ್ನು ಅವರಿಗೆ ನೀಡಿದ್ದರು. ಮೇನಕಾಗಾಂಧಿ, ಸಂಜಯ್‌ಸಿಂಗ್ ಇಷ್ಟವಿಲ್ಲದಿದ್ದ ರಾಜೀವರಿಗೆ ಅವರ ನೇಮಕಾತಿಯಿಂದ ಸಿಟ್ಟು ಬಂತು; ಚಂದ್ರಶೇಖರ್ ಕೇರ್ ಮಾಡಲಿಲ್ಲ. ಜಗದೀಪ್ ಧನಕರ್ ಎಂಬಾತ ಕ್ಯಾಬಿನೆಟ್ ದರ್ಜೆಯ ಆಸೆಯಿಂದ ಚಂದ್ರಶೇಖರ್ ಕಡೆ ಬಂದಿದ್ದ, ಹೊಸ ಮಂತ್ರಿಮಂಡಲದಲ್ಲೂ ಸ್ಟೇಟ್ ಮಂತ್ರಿಯ ಹುದ್ದೆ ದೊರೆತದ್ದಕ್ಕೆ ಪ್ರಮಾಣವಚನ ಸಮಾರಂಭದಲ್ಲೇ ಆತ ಸಭಾತ್ಯಾಗ ಮಾಡಿದ. ಚಂದ್ರಶೇಖರ್ ಅವನನ್ನು ಕರೆಯಲಿಲ್ಲ, ಕ್ಯಾಬಿನೆಟ್ ಹುದ್ದೆ ಕೊಡಲಿಲ್ಲ.

ರಾಜಕೀಯವೆನ್ನುವುದನ್ನು ನೌಕರಿಯ ಮಟ್ಟಕ್ಕೆ ಇಳಿಸಿದ್ದ ಕಾಂಗ್ರೆ, ದಳದವರನ್ನು ಚಂದ್ರಶೇಖರ್ ಶೈಲಿ ಬೆಚ್ಚಿಬೀಳಿಸಿತು. ಅಧಿಕಾರಿಗಳು, ರಾಜಕಾರಣಿಗಳು, ವಿದೇಶಿಯರು ಅಚ್ಚರಿಗೊಳ್ಳುವಂತೆ ಚಂದ್ರಶೇಖರ್ ತಮ್ಮ ಅಪಾರ ಅನುಭವವನ್ನು ಬಳಸಿಕೊಂಡು ನಾಯಕತ್ವವೆಂದರೆ ಏನೆಂದು ತೋರತೊಡಗಿದರು. ರಾಜಕಾರಣಿ ಸ್ವಾರ್ಥ ಮತ್ತು ಕುತಂತ್ರದಿಂದಲೇ ದುರ್ಬಲನೂ, ಗೊಂದಲಿಗನೂ ಆಗುವುದು; ಆತ ನೇರವಾಗಿ, ದೇಶದ ಹಿತದೃಷ್ಟಿಯಿಂದ ಕೆಲಸ ಮಾಡತೊಡಗಿದೊಡನೆ ಎಲ್ಲ ಸಮಸ್ಯೆಗಳು ಬಗೆಹರಿಯತೊಡಗುತ್ತವೆ. ವಿ.ಪಿ.ಸಿಂಗ್ ಅವರಿಗೆ ಅಸ್ಸಾಂನಲ್ಲಿ ಆಗುತ್ತಿದ್ದುದು ಗೊತ್ತಿತ್ತು; ಉಲ್ಫಾ ಉಗ್ರಗಾಮಿಗಳನ್ನು ಹತೋಟಿಗೆ ತರಲಾಗದ ಮಹಂತ ಮಂತ್ರಿ ಮಂಡಲವನ್ನು ಕಿತ್ತುಹಾಕಿ ರಾಷ್ಟ್ರಪತಿ ಆಡಳಿತ ತರುವ ತೀರ್ಮಾನವನ್ನು ಸಿಂಗ್ ತೆಗೆದುಕೊಂಡಿದ್ದರೂ ಮಹಂತ ಮತ್ತು ಬಿಜೆಪಿ ತಮ್ಮ ರಾಷ್ಟ್ರೀಯರಂಗ ಸರ್ಕಾರಕ್ಕೆ ಬೆಂಬಲ ಕೊಡುತ್ತಿದ್ದುದರಿಂದ ಆ ತೀರ್ಮಾನವನ್ನು ಜಾರಿಗೊಳಿಸಲಾಗಿರಲಿಲ್ಲ. ಚಂದ್ರಶೇಖರ್ ಅಧಿಕಾರಕ್ಕೆ ಬಂದೊಡನೆ ಅಸ್ಸಾಂ ಮೇಲೆ ರಾಷ್ಟ್ರಪತಿ ಆಡಳಿತ ಹೇರಿ ಉಲ್ಫಾಗಳನ್ನು ಬಗ್ಗುಬಡಿದರು. ಅಯೋಧ್ಯೆಯಲ್ಲಿ ಪ್ರಕ್ಷುಬ್ಧ ಸ್ಥಿತಿ ಸೃಷ್ಟಿಸಿದ ಜನಕ್ಕೆ ಎಚ್ಚರಿಕೆ ನೀಡಿ ಬಿಜೆಪಿ, ವಿಎಚ್‌ಪಿಗಳಲ್ಲದ ಜನರೂ ಅಲ್ಲಿ ಪೂಜೆ ಸಲ್ಲಿಸಲು ಅವಕಾಶ ನೀಡಿ ಬಿಜೆಪಿಗಳನ್ನು ದಿಗ್ಭ್ರಮೆಗೊಳಿಸಿ ಪ್ರಕ್ಷುಬ್ಧತೆ ಕಡಿಮೆಯಾಗುವಂತೆ ನೋಡಿಕೊಂಡರು. ದೇಶಕ್ಕೆ ಪೆಟ್ರೋಲ್, ಡೀಸೆಲ್ ಯಾವುದೇ ತಡೆಯಿಲ್ಲದೆ ಸರಬರಾಜಾಗುವಂತೆ ನೋಡಿಕೊಂಡರು. ಪಂಜಾಬಿನ ಉಗ್ರಗಾಮಿಗಳಿಗೆ ಎಚ್ಚರಿಕೆ ನೀಡಿ ತಮ್ಮಂಥ ನಾಯಕರೊಂದಿಗೆ ಚರ್ಚಿಸದಿದ್ದರೆ ಸೈನ್ಯದ ಗುಂಡಿನೊಂದಿಗೆ ಮಾತಾಡಬೇಕಾಗುತ್ತದೆ ಎಂದು ತಿಳಿಸಿದರು. ತಮ್ಮ ಹಳೇ ಸ್ನೇಹಿತ ಮತ್ತು ಅನುಭವಿ ರಾಜಕಾರಣಿ ಮೋಹನ್ ಧಾರಿಯಾರನ್ನು ಯೋಜನಾ ಆಯೋಗದ ಉಪಾಧ್ಯಕ್ಷರನ್ನಾಗಿ ಮಾಡಿ ಕಾಂಗ್ರೆ ಮತ್ತು ವಿ.ಪಿ.ಗಳಿಂದಾಗಿದ್ದ ಯೋಜನಾ ಅಧ್ವಾನಗಳನ್ನು ಸರಿಪಡಿಸತೊಡಗಿದರು. ಎಂಟನೇ ಪಂಚವಾರ್ಷಿಕ ಯೋಜನೆಯನ್ನು ವಾಸ್ತವದ ಹತ್ತಿರಕ್ಕೆ ತಂದು ಭಾರತ ಬ್ಯುಸಿನೆಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಎಂಬ ಸರ್ಕಾರಿ ಬಿಳಿಯಾನೆಯನ್ನು ನಾಶಮಾಡಿದರು, ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಚರ್ಚೆ ನಡೆಸಿ ಭಾರತದ ನೆರವು ಹೆಚ್ಚಿಸಿ ಇಲ್ಲಿ ಸರ್ಕಾರದ ವಶದಲ್ಲಿದ್ದ ಚಿನ್ನವನ್ನು ವಹಿಸಿಕೊಟ್ಟು ಭಾರತದ ವಹಿವಾಟಿನ ಕಷ್ಟ ಕಡಿಮೆ ಮಾಡಿದರು.

ಇದರೊಂದಿಗೆ ರಾಜಕೀಯ ನಿಭಾವಣೆ ಕೂಡ ಇತ್ತು. ವಿವಾದವೆಬ್ಬಿಸುವುದರಲ್ಲಿ ನಿಷ್ಣಾತೆಯಾದ ಮೇನಕಾಗಾಂಧಿ ಸೊಲ್ಲೆತ್ತಲಿಲ್ಲ; ದೇವಿಲಾಲ್‌ರನ್ನು ಚೌತಾಲಾ ಮೂಲಕ-ಅವರಿಬ್ಬರಿಗೂ ಏನನ್ನೂ ಕೊಡದೆ-ಹದ್ದುಬಸ್ತಿನಲ್ಲಿಟ್ಟರು. ಅತ್ಯಂತ ಸಂಕೀರ್ಣ ರಾಷ್ಟ್ರೀಯ ವಿಷಯಗಳನ್ನು ಕ್ಷಣಾರ್ಧದಲ್ಲಿ ಅರ್ಥಮಾಡಿಕೊಳ್ಳುತ್ತ ವಿಚಕ್ಷಣೆಯಿಂದ ನಿರ್ವಹಿಸುತ್ತಿದ್ದ ಚಂದ್ರಶೇಖರ್ ಅವರನ್ನು ಕಂಡು ಲಂಡನ್ನಿನ ಫೈನಾನ್ಶಿಯಲ್ ಟೈಮ್ಸ್ ಲೇಖನ ಬರೆದು ಪ್ರಶಂಸಿಸಿತು; ಭಾರತದ ಬುದ್ಧಿಜೀವಿಗಳೂ ಅಚ್ಚರಿಯಿಂದ ಚಂದ್ರಶೇಖರ್ ಅವರನ್ನು ಮೆಚ್ಚತೊಡಗಿದರು. ಇದನ್ನು ಕಂಡು ಕಾಂಗ್ರೆ ಮತ್ತು ರಾಜೀವರಿಗೆ ಭೇದಿ ಹತ್ತಿಕೊಂಡಿತು.

ಇರಾಕ್, ಕುವೈತ್ ಬಿಕ್ಕಟ್ಟಿನ ಸಮಯದಲ್ಲಿ ಚಂದ್ರಶೇಖರ್ ಹೇಳಿದ್ದು ಒಂದೇ ಮಾತು; ಅದೂ ಅವರು ನೇಪಾಳದಲ್ಲಿದ್ದಾಗ. ಅವರೆಂದರು "ಯಾವ ದೊಡ್ಡ ದೇಶವೂ ಸಣ್ಣ ದೇಶವನ್ನು ಆಕ್ರಮಿಸಿಕೊಳ್ಳಕೂಡದು." ಇದು ನೇಪಾಳಕ್ಕೆ ವಿಶ್ವಾಸ ತರುವುದರ ಜೊತೆಗೆ ಕುವೈತ್, ಸೌದಿ ಅರೇಬಿಯಾದಲ್ಲಿ ನೆಮ್ಮದಿ ಮೂಡಿಸಿತು.

ಒಬ್ಬ ನಾಯಕ ಹೇಗಿರಬಹುದೆಂಬುದನ್ನು ಸುಮಾರು ಇಪ್ಪತ್ತು ವರ್ಷಗಳ ಬಳಿಕ ಚಂದ್ರಶೇಖರ್ ತೋರಿದ್ದರು. ನಾಯಕ ನೌಕರನಲ್ಲ, ಅಧಿಕಾರಿಯೂ ಅಲ್ಲ; ನಾಯಕ ಕುತಂತ್ರದ ಪುಢಾರಿ ಕೂಡ ಅಲ್ಲ. ದೇಶದ ಹಿತಕ್ಕಾಗಿ ತನ್ನೆಲ್ಲ ಅನುಭವ ಬಳಸಿ ನೌಕರರು, ಅಧಿಕಾರಿಗಳು, ಸಹೋದ್ಯೋಗಿಗಳ ಮೂಲಕ ಕೆಲಸ ಮಾಡುವ ಮನುಷ್ಯ. ಇದನ್ನು ಮರೆತಿದ್ದ ಭಾರತಕ್ಕೆ ಚಂದ್ರಶೇಖರ್ ನೆನಪಿಸಿದರು.

ಚಂದ್ರಶೇಖರ್ ಅವರ ದೌರ್ಬಲ್ಯ ಎಲ್ಲರಿಗೂ ಗೊತ್ತಿದೆ. ಅವರು ಪ್ರಧಾನಿಯಾದ ಮೇಲೆ ತಮ್ಮ ಪಕ್ಷ ಬೆಳೆಸಲಿಲ್ಲ, ಖಶೋಗಿ, ಚಂದ್ರಾಸ್ವಾಮಿಗಳ ಸಹವಾಸ ಕೆಟ್ಟ ಹೆಸರು ತಂದಿತು. ಹಾಗೆಯೇ ಕಾಂಗ್ರೆಗಳನ್ನು ಓಲೈಸಲಿಲ್ಲ. ಚಂದ್ರಾಸ್ವಾಮಿ, ಖಶೋಗಿ, ಸುಬ್ರಮಣ್ಯಸ್ವಾಮಿ, ಶರದ್ ಪವಾರ್‌ಗಳು ಕೂಡ ನಿಜವಾದ ರಾಜಕಾರಣಿಯ ದಾಳವಾಗಬಲ್ಲರು ಎಂಬುದನ್ನು ಚಂದ್ರಶೇಖರ್ ತೋರಿಸಿಕೊಟ್ಟರು. ಆದರೆ ಇದರಿಂದ ಸ್ವಲ್ಪ ಕಳಂಕಗೊಳ್ಳ ಬೇಕಾಯಿತು.

ಚಂದ್ರಶೇಖರ್ ಈಗ ಒಬ್ಬಂಟಿ. ಅವರು ತೋರಿದ ನಾಯಕತ್ವ ಮರೆಯಾಗುವ ಅಪಾಯ ಕೂಡ ಇದೆ. ಸಮಸ್ಯೆಗಳ ಆಗರವಾಗಿರುವ ಭಾರತ ನಿರಂತ ರಂಜನೆ, ನಾಟಕಕ್ಕೆ ಒಲಿಯುವ ಅಪಾಯ ಕೂಡ ಇದೆ. ಇದರೊಂದಿಗೆ ಚಂದ್ರಶೇಖರ್ ಮತ್ತು (ಅವರಲ್ಲದಿದ್ದರೆ) ಅವರಂಥವರು ಭಾರತದಲ್ಲಿ ಹೊಸ ನಾಯಕತ್ವ ಕಟ್ಟುವ ಸಾಧ್ಯತೆ ಕೂಡ ಇದೆ. ನೆಹರು ಕುಟುಂಬದ ಗುಲಾಮೀ ವ್ಯವಸ್ಥೆ ಇಲ್ಲದಿರುವುದು ಇದಕ್ಕೆ ನೆರವಾಗುತ್ತದೆ.

■

ಪುರುಷನ ಅರ್ಧ ಶರೀರವೇ ಪತ್ನಿಯಂತೆ, ಸ್ತ್ರೀಯಳ ಅರ್ಧ ಶರೀರದಲ್ಲಿ ಪತಿ ಇರುತ್ತಾನೆಯೇ?

ಡಿ.ಎಲ್. ಸುರೇಶ್, ಹರಪನಹಳ್ಳಿ

ಪುಣ್ಯಕೋಟಿ ಗೋವಿಗೂ, ಕೋಟಿಯ ಕೋಟಿ ದೇವ್ರುಗೂ ವ್ಯತ್ಯಾಸ?

*** ಗೋವಿಗೂ, ಗೋಮುಖವ್ಯಾಘ್ರನಿಗೂ ಇರುವಷ್ಟೇ ವ್ಯತ್ಯಾಸ!**

ಎಂ.ಎಸ್. ಮಂಜರ್, ಬಂಡಳ್ಳಿ

ಕರ್ನಾಟಕದ ಮುಂದಿನ ಮುಖ್ಯಮಂತ್ರಿ ಯಡ್ಡಿಯೊ, ಎಚ್.ಡಿ.ಯೋ?

*** ಯಾರೇ ಆದರೂ ದೇವೇಗೌಡ ಮಾತ್ರ ಎಂ.ಡಿ.!**

ಎಂ. ಶಿವಸ್ವಾಮಿ, ಬೆಂಗಳೂರು

ಮುಂಗಾರು ಮಳೆಯು ಅಬ್ಬರ ಕೆಲವೆಡೆ ಬರ್ಬರವಾಗಿರಲು ಕಾರಣವೇನು?

* ಗ್ಲೋಬ್‌ಗೇ ವಾರ್ನ್ ಮಾಡುತ್ತಿರುವ ವಾರ್ಮಿಂಗ್!

ಗಾನಾಸುಮಾ, ಪಟ್ಟಸೋಮನಹಳ್ಳಿ

ಕೋ-ಜಾ ಸರ್ಕಾರದ ಗುರಿ 'ನಕ್ಸಲ್ ನಿಗ್ರಹ'ವೂ ಇಲ್ಲಾ ದೋಸ್ತಿ ಸರ್ಕಾರದ 'ನೆಕ್‌ಲೆಸ್' ನಿಗ್ರಹವೋ?

*** ಎರಡರೊಂದಿಗೆ ತಲೆಯಲ್ಲಿ ಸ್ವಲ್ಪ 'ಲೆಸ್' ಆಗಿರುವುದು.**

ಬಸವರಾಜ ಹೂಗಾರ್, ಸವದತ್ತಿ

ಕಾರಿನ ಹಿಂದೆ ಹೋದರೆ ಧೂಳು, ಹುಡುಗಿಯ ಹಿಂದೆ ಹೋದರೆ?

*** ಮಣ್ಣು!**

ಪಿ.ಎಸ್. ಶ್ರೀವತ್ಸ, ಬೆಂಗಳೂರು

ದೊಡ್ಡ ಗಣೇಶ್ ಕ್ರಿಕೆಟ್ ಬಿಟ್ಟು ಜನತಾದಳ ಸೇರಿದಂತೆ ನಾಳೆ ಸಾನಿಯಾ ಮಿರ್ಜಾಳೂ ಕಾಂಗ್ರೆಸ್ ಸೇರಿದರೆ?

*** ಆತನೊಂದಿಗೆ ಬಂದಿದ್ದು ಕೇವಲ ಹತ್ತು ಕೋಟಿ ರೂಪಾಯಿ. ಅವಳೊಂದಿಗೆ ಬರುವುದು ಹತ್ತು ಲಕ್ಷ ವೋಟ್‌ಗಳು ಎಂದು ಕಾಂಗ್ರೆಸ್ಸಿಗರು ಲೆಕ್ಕ ಹಾಕುತ್ತಿದ್ದಾರಂತೆ.**

ಕಣ್ಣಾ ಮುಚ್ಚಾಲೆ

ಕೆ. ಶ್ರೀನಿವಾಸ್, ಮಂಡ್ಯ

ಹೊರದೇಶದಲ್ಲೂ ಪೂಜಾರಿಗಳಿಗೆ ಬೇಡಿಕೆ ಬಂದಿದೆಯಂತಲ್ಲಾ!?

*** ಜನಿವಾರ ಸಂತತಿಯವರೇ ಅಲ್ಲಿಗೆ ಹೆಚ್ಚು ಸಂಖ್ಯೆಯಲ್ಲಿ ಓಡಿಹೋಗಿರುವುದರಿಂದ!**

ಡಿ.ಎಲ್. ಶ್ವೇತಾ, ಹರಪನಹಳ್ಳಿ

ಗ್ರಾಮವಾಸ್ತವ್ಯಕ್ಕಿಂತ ಕಚೇರಿ ವಾಸ್ತವ್ಯ ಹೂಡಿದರೆ ಜನರಿಗೆ ಹೆಚ್ಚು ಉಪಯೋಗವಾಗಬಹುದೇ?

*** ಜನರು ಹಾಳಾಗ, ಪಾಪ ಪತ್ರಿಕೆಗಳು ಏನನ್ನು ವರದಿ ಮಾಡಬೇಕು?**

ಆರ್. ವರಲಕ್ಷ್ಮಿ ನಾ. ರೆಡ್ಡಿ, ಕೆ.ಜಿ.ಎಫ್.

ಹೆಣ್ಣು ಗರ್ಭಿಣಿಯಾದಾಗ ತನ್ನ ಪತಿಗೆ 'ನೀವು ತಂದೆಯಾಗಲಿದ್ದೀರಿ' ಎಂದೇ ಏಕೆ ತಿಳಿಸಬೇಕು?

*** ತನ್ನ ಪಾತ್ರದ ಬಗ್ಗೆ ಆತನಿಗೆ ಡೌಟ್ ಬಾರದಿರಲಿ ಎಂದು?**

ಅಳ್ಳಿಮರನಹಳ್ಳಿ ಗಿರೀಶ್, ಕನಕಪುರ

ಕೋಮುವಾದಿಗಳು ಮತ್ತು ಪ್ರಗತಿಪರರು ಕೈ ಜೋಡಿಸಿದರೆ ರಾಜ್ಯದ ಗತಿಯೇನು?

*** ಲದ್ದಿ ಜೀವಿಗಳ ಕಾರು-ಬಾರು!**

ಮಂಚಾಲಿ ಗುರು ರಾಜಚಾರು, ಬಳ್ಳಾರಿ

ಟೆನ್ನಿಸ್ ಆಟದಲ್ಲಿರುವ 'ಲವ್'ಗೂ ಹುಡುಗಿಯರು ಮಾಡುವ 'ಲವ್'ಗೂ ಏನು ವ್ಯತ್ಯಾಸ?

*** ಅಲ್ಲಿ 'ಲವ್ ಆಲ್' ಇರುತ್ತೆ, ಇಲ್ಲಿ ಬರೀ 'ಮ್ಯಾಚ್ ಪಾಯಿಂಟ್' ಎದುರಾಗುತ್ತೆ ಹುಷಾರ್!**

ಅಬ್ದುಲ್ ರಜಾಕ್, ದೇವದುರ್ಗ

ಪ್ರತಿಭಾ ಪಾಟೀಲ್ ಮುಂದಿನ ರಾಷ್ಟ್ರಪತಿನಾ ಪತ್ನಿನಾ?

*** "ನಮ್ಮುಕೆ ಬರೀ ನಾಲ್ಕು, ಅವರ್‍ಕೆ ಕೋಟಿಗಳು" ಎಂದು ನೀವ್ಯಾಕೆ ಪ್ರತಿಭಟಿಸಬಾರದು ಅಬ್ದುಲ್ ಸಾಹೇಬರೇ?**

ಡಿ.ಎಲ್. ನಾಗರಾಜ್, ಹರಪನಹಳ್ಳಿ

ಲೈಂಗಿಕತೆ ಎಂದರೇನು? ಅಶ್ಲೀಲತೆ ಎಂದರೇನು?

*** ಪ್ರಕೃತಿ ಸಹಜವಾದದ್ದು ಮೊದಲನೆಯದು. ಚೆಡ್ಡಿಗಳ ಮನಸ್ಸಿನಲ್ಲಿ ವಿಕೃತ ರೂಪ ಪಡೆದಿರುವುದು ಎರಡನೆಯದು!**

ಬಹುಮಾನಿತ ಪ್ರಶ್ನೆ

ಕೆ.ಎಸ್. ವೀರಭದ್ರಪ್ಪ, ದಾವಣಗೆರೆ

ಪುರುಷನ ಅರ್ಧ ಶರೀರವೇ ಪತ್ನಿಯಂತೆ, ಸ್ತ್ರೀಯಳ ಅರ್ಧ ಶರೀರದಲ್ಲಿ ಪತಿ ಇರುತ್ತಾನೆಯೇ?

***ಟಾಪ್‌ನೊಂದಿಗೆ ಪ್ಯಾಂಟ್ ಧರಿಸಿರುವ ಸ್ತ್ರೀಯರ ದೇಹದ ಮೇಲಂತೂ ಅರ್ಧ 'ಅಂಗಿ' ಇರುತ್ತೆ.**



ಪ್ರಶ್ನೆ 18:

ಪ್ರಪಂಚದ ಎಂಟನೇ ಅದ್ಭುತ ಯಾವುದು?

ಪ್ರಶ್ನೆ ೧೬: ಸರಕಾರ ಬಿಡುಗಡೆಮಾಡಿರುವ ನಕ್ಸಲೈಟರ ಬೆಂಬಲಿಗರ ಪಟ್ಟಿಯನ್ನು ತಯಾರುಮಾಡಿದವರು ಯಾರು?

ನಿಮ್ಮ ಉತ್ತರ : ಕೇಶವಕೃಪದಲ್ಲಿ ಕುಳಿತಿರುವ ಕಮಂಗಿ ಕೋಮುವಾದಿಗಳು

ಉತ್ತರ ಕಳುಹಿಸಿ ಬಹುಮಾನ ಪಡೆದವರು: ರಾಂಚಂದ್ರ, ಕೊಪ್ಪಲು, ತೀರ್ಥಹಳ್ಳಿ

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಶಿಸ್ತಿನ ಸಿಪಾಯಿ ಶಿವರಾಜ್‌ಕುಮಾರ್

ಹೊಗಳಿಕೆ


ಟಿವಿ 9 ಚಾನಲ್‌ನಲ್ಲಿ ಬಂಜಗೆರೆ ಜಯಪ್ರಕಾಶ್ ಹಾಗೂ ಮಾತೆ ಮಹಾದೇವಿಯವರು 'ಆನು ದೇವಾ...' ಪುಸ್ತಕದ ಕುರಿತು ನಡೆಸಿದ ಚರ್ಚೆಯನ್ನು ನೋಡಿದ ಮೇಲೆ ನನಗೆ ಈ ಪತ್ರ ಬರೆಯಬೇಕೆನ್ನಿಸಿತು. ಒಂದು ಕೃತಿಯ ಬಗ್ಗೆ ಬೌದ್ಧಿಕ ನೆಲೆಯಲ್ಲಿ, ಸಹನೆಯಿಂದ ಪರಸ್ಪರ ಗೌರವವನ್ನಿಟ್ಟುಕೊಂಡು ಚರ್ಚಿಸಬೇಕು. ಆದರೆ ಮಾತೆ ಮಹಾದೇವಿಯವರು ತೀರಾ ಅಸಹನೆಯಿಂದ, ಯಾವುದೇ ಸಂಶೋಧನಾತ್ಮಕ ಒಳನೋಟಗಳಿಲ್ಲದೆ ಬಂಜಗೆರೆಯನ್ನು ಖಂಡಿಸುವ ಏಕೋದ್ದೇಶದಿಂದ ಮಾತನಾಡಿದರು. ಅವರನ್ನು ಆತ, ಈತ ಎಂದು ಕೆಲವು ಸಲ ಸಂಬೋಧಿಸಿದ ಮಾತೆಯವರು ಒಂದು ಸಲವಂತೂ ತೀರಾ ವೈಯಕ್ತಿಕವಾಗಿ "ನಿಮ್ಮ ಹುಟ್ಟಿನ ಬಗ್ಗೆ ನಿಮ್ಮ ತಾಯಿಯವರನ್ನು ಶಂಕಿಸಬಹುದೇ?" ಎಂಬಂತಹ ಗಾಂಭೀರ್ಯರಹಿತ ಮಾತುಗಳನ್ನಾಡಿದರು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಬಂಜಗೆರೆಯವರು ಚರ್ಚೆಯುದ್ದಕ್ಕೂ ಅತ್ಯಂತ ಸಹನೆಯಿಂದ, ಶಾಂತಚಿತ್ತರಾಗಿ ಎಲ್ಲಾ ಪ್ರಶ್ನೆಗಳಿಗೂ ಪಾಂಡಿತ್ಯಪೂರ್ಣವಾಗಿ ಉತ್ತರಿಸಿದರು. ಪ್ರತಿಸಲವೂ ಮಾತೆ ಮಹಾದೇವಿಯವರನ್ನು ಅಮ್ಮಾಜಿಯವರು ಎಂದು ವಿನಯದಿಂದ ಗೌರವಪೂರ್ವಕವಾಗಿ ಸಂಬೋಧಿಸುತ್ತಿದ್ದರು. ಬಂಜಗೆರೆಯವರ ಮಾತುಗಳಲ್ಲಿ ಬೆಳಕಿತ್ತು ಮತ್ತು ನಿಜವಾದ ಸಂತತನ ಅವರಲ್ಲಿ ಕಾಣುತ್ತಿತ್ತು.

-ಡಾ.ಸಿ. ರವೀಂದ್ರನಾಥ್, ಬೆಂಗಳೂರು

ಉಳ್ಳಾಲ ಚುನಾವಣೆಯ ಫಲಿತಾಂಶವು ಕೆ.ಎಫ್.ಡಿಯ ಫಲಶ್ರುತಿ ಎಂದು ಪ್ರಕಟಿಸಿರುವ 'ಲಂಕೇಶ್' ವಾರ ಪತ್ರಿಕೆಗೆ ಧನ್ಯವಾದಗಳು. ಕರ್ನಾಟಕದಲ್ಲಿ ಕೋಮುವಾದಿಗಳ ಕಾರ್ಯವೈಖರಿಯ ಬಗ್ಗೆ ಸ್ಪಷ್ಟ ಚಿತ್ರಣ ನೀಡುತ್ತಿರುವುದರಿಂದ ಈ ಪತ್ರಿಕೆಯು ವಿಚಾರವಾದಿಗಳ ಮನೆ ಗೆದ್ದಿದೆ. ಮಾತ್ರವಲ್ಲದೇ ಸಂಘ ಪರಿವಾರಕ್ಕೆ ಬೆನ್ನೆಲುಬು ಎಂಬಂತಿರುವ ಇತರ ಪತ್ರಿಕೆಗಳಿಂದ ತಿಳಿಯದಂತಹ ಕೋ-ಜಾಗಳ ಆತ್ಮಚರಿತ್ರೆಯು 'ಲಂಕೇಶ್' ವಾರ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವುದರಿಂದ ಪತ್ರಿಕೆಯು ಓದುಗರ ಒಲವು ಪಡೆದಿದೆ. ಚಾಮುಂಡೇಶ್ವರಿಯಲ್ಲಿ ಸೋತು ಕಂಗಾಲಾಗಿರುವ ಕೋ-ಜಾ ಸರ್ಕಾರವು ಅಲ್ಪಸಂಖ್ಯಾತರ ಮತಗಳನ್ನು ಒಡೆಯುವ ಹಗಲು ಕನಸನ್ನು ಉಳ್ಳಾಲ ಮತದಾರರು ಕನಸಾಗಿಯೇ ಉಳಿಸಿದ್ದಾರೆ. ಇದು ಕೇವಲ ಕೆಎಫ್‌ಡಿಯ ಸಾಧನೆ ಮಾತ್ರವಲ್ಲ, ಇಂತಹ ಪ್ರಗತಿಪರ ಸಂಘಟನೆಯವರ ಜೊತೆ ಲಂಕೇಶ್ ವಾರಪತ್ರಿಕೆ ಕೂಡಾ ಇತ್ತು ಎಂಬುದು ತಿಳಿದಿರಲಿ. ಪ್ರಗತಿಪರ ಸಂಘಟನೆಗಳು ಮತ್ತು ಮಾಧ್ಯಮ ಒಂದಾದರೆ ಕೋಮುವಾದಿಗಳನ್ನು ಸೋಲಿಸಬಹುದು ಎಂಬುದಕ್ಕೆ ಇದು ನಿದರ್ಶನ.

-ಜಮಾಲ್, ಪಾಮಂಜೂರು

ಶಿವರಾಜ್‌ಕುಮಾರ್ ಯಾವುದೇ ಇಮೇಜಿಗೆ ಗಂಟು ಬೀಳದೆ ಎಲ್ಲಾ ತೆರನಾದ ಪಾತ್ರಗಳನ್ನು ಮಾಡುತ್ತ 20 ವರ್ಷಗಳಿಂದ ತಮ್ಮ ತಾರಾ ವರ್ಚಸ್ಸು ಕಾಯ್ದುಕೊಂಡು ಬಂದಿರುವುದರ ಗುಟ್ಟೇನೆಂದರೆ ಅವರಲ್ಲಿರುವ ವೃತ್ತಿಪರತೆ, ಶಿಸ್ತು, ಸಹನೆ, ಸಮಯಪಾಲನೆ, ಕನ್ನಡಾಭಿಮಾನ, ನಯ-ವಿನಯ ಮತ್ತು ಶ್ರದ್ಧೆಯಿಂದ ಎಂದರೆ ತಪ್ಪಾಗಲಾರದು. ಏಕೆಂದರೆ ಚಿತ್ರರಂಗದವರೆಲ್ಲರೂ ಹೇಳುವ ಒಂದೇ ಮಾತು ಶಿಸ್ತಿಗೆ ಇನ್ನೊಂದು ಹೆಸರೇ ಶಿವರಾಜ್‌ಕುಮಾರ್ ಎಂದು.



ಸದಾ ಹೊಸತನಕ್ಕಾಗಿ ತುಡಿಯುವ ಶಿವಣ್ಣ ಅಂದು-ಇಂದು-ಎಂದಿಗೂ ಸೋಲು ಗೆಲುವುಗಳನ್ನು ಒಂದೇ ನಾಣ್ಯದ ಎರಡು ಮುಖಗಳಂತೆ ಸ್ವೀಕರಿಸುತ್ತ ಬಂದಿರುವುದರಿಂದಲೇ ಇವತ್ತು ನಿರ್ಮಾಪಕರ ನಟನಾಗಿ, ನಿರ್ದೇಶಕರ ಕಲಾವಿದನಾಗಿ, ಅಭಿಮಾನಿಗಳ ಅಣ್ಣನಾಗಿ ಇಂದು 90 ಚಿತ್ರಗಳ ನಾಯಕ ನಟನಾಗಿ ಬೆಳೆಯುತ್ತಿದ್ದಾರೆ.

ಇಲ್ಲಿಯವರೆಗೆ 3 ಬಾರಿ ಫಿಲಂ ಫೇರ್ ಪ್ರಶಸ್ತಿ, 4 ಬಾರಿ ರಾಜ್ಯ ಸರ್ಕಾರ ಅತ್ಯುತ್ತಮ ನಟ ಪ್ರಶಸ್ತಿ ಹಾಗೂ ಹಲವಾರು ಸಂಘ-ಸಂಸ್ಥೆಗಳಿಂದ ಅನೇಕ ಪ್ರಶಸ್ತಿಗಳನ್ನು ಪಡೆದು, ಅಭಿಮಾನಿಗಳಿಂದ ನಾಟ್ಯ ಪ್ರವೀಣ, ಅಭಿನಯ ಕಲಾ ಸಾರ್ವಭೌಮ, ಕನ್ನಡದ ಕುವರ, ಕಲಾ ಮಯೂರ, ಸಿಂಹದಮರಿ, ಕನ್ನಡಿಗರ ಕಣ್ಮಣಿ ಮೊದಲಾದ ಬಿರುದುಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

ಇಂದಿನ ಯುವನಾಯಕ ನಟರನ್ನೇ ನಾಚಿಸುವಂತೆ ಡ್ಯಾನ್ಸ್ ಮಾಡುವ ಇವರು ಚಿತ್ರಗಳು ಸೋಲಲಿ ಗೆಲ್ಲಲಿ, ಸದಾ ಡಿಮ್ಯಾಂಡ್‌ನಲ್ಲಿರುವ ಕನ್ನಡದ ಏಕಮಾತ್ರ ಹೀರೋ ಎಂದರೆ ತಪ್ಪಾಗಲಾರದು. ಇದೇ ಜುಲೈ 12ರಂದು ತಮ್ಮ 46ನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಶಿವಣ್ಣನಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.

-ಚಂದ್ರಶೇಖರ ಮ. ಮೋರೆ, ಮಹಾಲಿಂಗಪುರ

ಗೌರಿಯವರು ದುರಾಚಾರದಿಂದ ಬೇಸತ್ತು 'ಲಂಕೇಶ್ ಪತ್ರಿಕೆ'ಯಿಂದ ದೂರವಾದ ವೇಳೆ ರಾಮದಾಸರ ಬಳಿ ಹೋಗಿದ್ದು 'ಕಂಡ ಹಾಗೆ'ಯಲ್ಲಿ ನೆನೆದುಕೊಂಡಿದ್ದಾರೆ. ಹಾಗೆಯೇ ನಿಮ್ಮ ಕಿತ್ತಾಟಕ್ಕೆ ಓದುಗರಿಗೂ ಆದ ಬೇಸರ ತಿಳಿದಿರಬೇಕು. ಕಿರಿಯನಾದ ನಾನೇ ಪೊಲೀಸ್ ಕೇಸು, ಕೋರ್ಟ್ ನೋಡಿ "ಲಂಕೇಶ್ ಆಶಯಗಳಿಗೆ ಮಕ್ಕಳು ಇಟ್ರಲ್ಲಾ ಬೆಂಕಿಯಾ" ಎಂದುಕೊಂಡಿದ್ದೆ. ಆದರೆ ಆನಂತರ 'ಲಂಕೇಶ್' ಮರುಹುಟ್ಟು ಪಡೆದು ಕೆಲವೇ ದಿನಗಳಲ್ಲಿ ಬೆಳೆದ ರೀತಿ ಆಶ್ಚರ್ಯ ಮತ್ತು ಆನಂದ ತಂದಿತು.

ಈಗ ಲಂಕೇಶ್, ತೇಜಸ್ವಿ, ರಾಮದಾಸರು ಇಲ್ಲವಾಗಿದ್ದಾರೆ. ಕೋಮುವಾದಿಗಳು ಅಟ್ಟಹಾಸಗೈಯುತ್ತಿದ್ದಾರೆ. ವ್ಯವಸ್ಥೆ ಹಳಸಿದೆ. ಪ್ರಜಾಸತ್ತಾತ್ಮಕ ಅಹಿಂಸಾತ್ಮಕ ಸಂಘಟನೆಗಳು, ಕಡಿದಾಳ್ ಶಾಮಣ್ಣರಂತಹ ರೈತಪರರು, ಪ್ರಗತಿಪರರು, ಜನಪರ ಚಿಂತಕರು, ನಕ್ಸಲೈಟ್ ಬೆಂಬಲಿಗರು ಎನ್ನಲಾಗಿದೆ. ನಾಳೆ ಕೋಮುವಾದಿಗಳು ಮುಖ್ಯಮಂತ್ರಿಯಾದರೆ ಪತ್ರಿಕೆ 'ನಕ್ಸಲ್ ಮುಖವಾಣಿ', ಅದರಲ್ಲಿರುವವರು ನಕ್ಸಲರು ಎಂದರೆ ಆಶ್ಚರ್ಯಯವೇನಿಲ್ಲ.

ಗೌರಿಯವರ ಮತ್ತು 'ಲಂಕೇಶ್' ಬಳಗದ ಜನಪರ ಹೋರಾಟ ಮುಂದುವರೆಯಲಿ. ಹಾಗೆಯೇ ನೀವಿಡುವ ಹೆಜ್ಜೆಗಳು ನನ್ನಂತಹ ಕಿರಿಯ ಓದುಗನಿಂದಿಡಿದು ಪತ್ರಿಕೆಯ ಒಡನಾಡಿಗಳಿಗೆ ನೋವಾಗದಿರಲಿ.

-ಡಿ.ಎಲ್. ಮಂಜು, ಕೇರಳ

ಲಂಕೇಶ್, ನಂಜುಂಡಸ್ವಾಮಿ, ಮುರಾರಿ ಬಲ್ಲಾಳ್, ತೇಜಸ್ವಿ ಇದೀಗ ರಾಮದಾಸ್!!! ಇವರುಗಳ ಅವಶ್ಯಕತೆ ಅಂದಿಗಿಂತ ಇವತ್ತೇ ಹೆಚ್ಚಿರುವಂತೆ ಇವತ್ತಿನ ಪರಿಸ್ಥಿತಿ ತೋರಿಸುತ್ತಿದೆ. ಈ ಜನಪರ ಚೇತನಗಳು ಒಬ್ಬೊಬ್ಬರಾಗಿ ನಾಡಿನ ಪ್ರಜ್ಞಾವಂತ ಜನತೆಯನ್ನು ಬಿಟ್ಟು ತೆರಳುತ್ತಿರುವುದು ಅತ್ಯಂತ ನೋವು ತರುವ ಸಂಗತಿಯಾಗಿದೆ.

ಇದೀಗ ಭೌತಿಕವಾಗಿ ಇವರುಗಳು ನಮ್ಮೊಂದಿಗಿರದಿದ್ದರೂ, ಇವರು ಹಾಕಿಕೊಟ್ಟ ಚಿಂತನೆಯ ಹೋರಾಟದ ಜಾಡು ನಮ್ಮ ಮುಂದಿದೆ. ಅವುಗಳೇ ನಮ್ಮನ್ನೂ ಮುನ್ನಡೆಸುವಂತಾಗಲಿ. ಈ ಪ್ರಯುಕ್ತ 'ಲಂಕೇಶ್'ನ ಪ್ರಸ್ತುತತೆ ದಿನೇ ದಿನೇ ಹೆಚ್ಚುತ್ತಿರುವುದು ಕೂಡ ಹೌದು.

ನಿಮ್ಮ ಕಾರ್ಯಗಳಿಗೆ ಸದಾ ನಮ್ಮ ಬೆಂಬಲವಿರುತ್ತದೆ.

-ರವಿ ಪುತ್ತೂರ, ದಕ್ಷಿಣಕನ್ನಡ

ಕನ್ನಡತಿಯರಿಗಿಲ್ಲದ ಅದೃಷ್ಟ ಕನ್ನಡೇತಿಯರಿಗೆ



ಕನ್ನಡದ ಹುಡುಗಿಯರು ಎಲ್ಲಿ ಹೋಗಿದ್ದಾರೆ? ಈ ಪ್ರಶ್ನೆ ಸಹಜವಾಗೇ ಉದ್ಭವಿಸುತ್ತದೆ.

ಹಿಂದೊಂದು ಕಾಲವಿತ್ತು, ತಮ್ಮ ಚಿತ್ರಗಳಿಗೆ ಬೆಡಗಿಯರನ್ನು ಮುಂಬೈನಿಂದ ಅಥವಾ ಮದ್ರಾಸಿನಿಂದ ಕರೆತರುತ್ತಿದ್ದರು. ಇಂತಹ ಒಂದು ಸಂಪ್ರದಾಯವನ್ನು ಪ್ರಾರಂಭಿಸಿದವರು ಕ್ರೇಜಿಸ್ಟಾರ್ ರವಿಚಂದ್ರನ್. ಉದಾಹರಣೆಗೆ ಅವರ ಚಿತ್ರಕ್ಕೆ ಬಂದ ಪರಭಾಷಾ ನಾಯಕಿಯರ ಲಿಸ್ಟ್‌ಅನ್ನು ಒಮ್ಮೆ ನೋಡಿ: ಜೂಹಿ ಚಾವ್ಲಾ, ಖುಷ್ಬೂ, ಶಿಲ್ಪಾ ಶೆಟ್ಟಿ, ಮೂನ್‌ಮೂನ್ ಸೇನ್, ರಮ್ಯಕೃಷ್ಣ, ಸ್ನೇಹಾ, ಅಮಲಾ..... ಹೀಗೆ ಪಟ್ಟಿ ದೊಡ್ಡದಾಗುತ್ತಾ ಹೋಗುತ್ತದೆ. ಆದರೆ ಆ ಬೆಡಗಿಯರ್‍ಯಾರೂ ಕನ್ನಡದಲ್ಲೇ ಮೊಕ್ಕಾಂ ಹೂಡಲಿಲ್ಲ, ಚಿತ್ರ ಮುಗಿಯುತ್ತಿದ್ದಂತೆ ಅವರೂ ಪ್ಯಾಕ್ ಅಪ್ ಹೇಳಿ ಜಾಗ ಖಾಲಿ ಮಾಡುತ್ತಿದ್ದರು.

ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಚಿತ್ರವೊಂದರಲ್ಲಿ ನಟಿಸಲು ಬಂದವರು ಇಲ್ಲೇ ಠಿಕಾಣಿ ಹೂಡುತ್ತಿದ್ದಾರೆ. ಹೀಗಾಗಿ ಈ ಆಮದು ಹುಡುಗಿಯರ ಆಗಮನದಿಂದಾಗಿ ಕನ್ನಡದ ಹುಡುಗಿಯರಿಗೆ ಅವಕಾಶಗಳು ತಪ್ಪುಹೋಗುತ್ತಿವೆ.

ಇದಕ್ಕೆ ಬೆಸ್ಟ್ ಉದಾಹರಣೆ ಎಂದರೆ, 'ಜೋಗಿ' ಖ್ಯಾತಿಯ ಜೆನ್ನಿಫರ್ ಕೊತ್ವಾಲ್. ಮುಂಬೈಯ ಈ ಮಾಡೆಲಿಂಗ್ ಹುಡುಗಿಯನ್ನು 'ಜೋಗಿ' ಚಿತ್ರಕ್ಕೆ ನಾಯಕಿಯಾಗಿ ಆಯ್ಕೆ ಮಾಡಿದಾಗ ಇಡೀ ಗಾಂಧಿನಗರದ ಜನ ಲೊಚಗುಟ್ಟತೊಡಗಿದ್ದರು. "ಚಿತ್ರದ ಹೀರೋಯಿನ್ನೇ ವೀಕ್" ಎಂಬ ತೀರ್ಪನ್ನು ನೀಡಿದ್ದರು. 'ಜೋಗಿ' ಹಿಟ್ ಆದ ನಂತರವೂ ಅವರ ನಿಲುವು ಬದಲಾಗಲಿಲ್ಲ, ನಾಯಕಿ ಸ್ವಲ್ಪ ಗ್ಲಾಮರಸ್ ಆಗಿದ್ದಲ್ಲಿ ಚಿತ್ರ ಇನ್ನೂ ಸೂಪರ್‌ಹಿಟ್ ಆಗುತ್ತಿತ್ತು ಎಂದು ಅಪಸ್ವರ ಎತ್ತಿದರು. ಇದೆಲ್ಲಾ ಹಳೆಯ ವಿಷಯ. ಆದರೆ ಅಂದು ಆಕೆಯ ಬಗ್ಗೆ ಹೀಗೆ ಹೀಯಾಳಿಸಿ ಮಾತನಾಡಿದ ಜನರೇ ಈಗ ಜೆನ್ನಿಫರ್‌ಗೆ ತಮ್ಮ ಚಿತ್ರಗಳಲ್ಲಿ ಅವಕಾಶ ನೀಡುತ್ತಿದ್ದಾರೆ. 'ಜೋಗಿ'ಗೆಂದು ಕರ್ನಾಟಕಕ್ಕೆ ಬಂದ ಈ ಹುಡುಗಿ ಕಳೆದ ಎರಡು ವರ್ಷಗಳಿಂದ ಕರ್ನಾಟಕ ಬಿಟ್ಟು ಮತ್ತೆ ವಾಪಾಸು ಊರಿಗೆ ಹೋಗಿದ್ದೇ ಇಲ್ಲ, ಈಗ ಆಕೆ ಬಹುತೇಕ ಕನ್ನಡದ ಮನೆಮಗಳ ಥರ ಮಾರ್ಪಾಡಾಗಿದ್ದಾಳೆ.



'ಜೋಗಿ'ಯ ಜೆನ್ನಿಫರ್ ಸಾಲಿಗೆ ಸೇರುವ ಮತ್ತೋರ್ವ ಹುಡುಗಿಯೆಂದರೆ, ಪಂಜಾಬಿ ಮೂಲದ 'ಮುಂಗಾರು ಮಳೆ' ನಾಯಕಿ ಪೂಜಾ ಗಾಂಧಿ. ನಿಮಗೆ ನೆನಪಿರಬಹುದು, ಈ ಚಿತ್ರ ಬಿಡುಗಡೆಯಾದಾಗ ಅದೇ ಜನ ಈಕೆಯ ಬಗ್ಗೆಯೂ ಅದೇ ಹಳೆಯ ರಾಗವನ್ನು ಹಾಡಿದ್ದರು. "ಚಿತ್ರದ ನಾಯಕಿ ಸರಿಯಿಲ್ಲ, ಈಕೆಯ ಸ್ಥಾನದಲ್ಲಿ ರಮ್ಯಾ ಇದ್ದಿದ್ರೆ ಚಿತ್ರವು ಸೂಪರ್‌ಹಿಟ್ ಆಗ್ತಿತ್ತು" ಎಂದು ಗಿಣಿಶಾಸ್ತ್ರ ಹೇಳಿದ್ದರು. ಆದರೆ ಅವರ ಗಿಣಿಶಾಸ್ತ್ರ ಸುಳ್ಳಾಯಿತು. 'ಮುಂಗಾರು ಮಳೆ' ಸೂಪರ್ ಡೂಪರ್ ಹಿಟ್ ಆಯಿತು. ಪರಿಣಾಮವಾಗಿ ದಿನಬೆಳಗಾಗುವುದರೊಳಗೆ ಪೂಜಾಗಾಂಧಿ ಕರ್ನಾಟಕದ ಮನೆಮಾತಾದಳು. ಅಷ್ಟೇ ಅಲ್ಲ, ಆಕೆ ಗಾಂಧಿನಗರದ ನಿರ್ಮಾಪಕ, ನಿರ್ದೇಶಕರಿಗೂ ಇಷ್ಟವಾದಳು. ಈಗ ಕನಿಷ್ಠವೆಂದರೂ ಆಕೆ ಹತ್ತು ಚಿತ್ರಗಳಿಗೆ ನಾಯಕಿಯಾಗಿ ಆಯ್ಕೆಯಾಗಿದ್ದಾಳೆ. ಇದರರ್ಥ ಈಕೆ ಇನ್ನು ಕೆಲವರ್ಷಗಳ ಕಾಲ ಕರ್ನಾಟಕದಲ್ಲೇ ಇರುತ್ತಾಳೆ.


ಈ ಇಬ್ಬರು ಆಮದು ತಾರೆಯರ ಅದೃಷ್ಟವೋ ಅಥವಾ ಕನ್ನಡದ ನಾಯಕಿಯರ ದುರಾದೃಷ್ಟವೋ ಗೊತ್ತಿಲ್ಲ, ಇವರಿಬ್ಬರಿಗೂ ಹೊಡೆದ ಲಕ್ ಇತರರಿಗೆ ಸಿಕ್ಕಿಲ್ಲ, ಅಂದಹಾಗೆ, ಇವರಿಬ್ಬರೂ ವಿಶ್ವಸುಂದರಿಯರಂತೂ ಅಲ್ಲ (ಹಲವೊಮ್ಮೆ ಇವರಿಬ್ಬರೂ ಒಂಥರಾ ಮ್ಯಾನ್ಲೀ ಆಗೇ ಕಾಣಿಸುತ್ತಾರೆ), ತಮ್ಮ ಮೈಮಾಟವನ್ನು ತೋರಿಸುವ ಗ್ಲಾಮರ್ ಗೊಂಬೆಗಳೂ ಅಲ್ಲ, ಇನ್ನು ನಟನೆಯಲ್ಲೂ ಅಷ್ಟಕ್ಕಷ್ಟೇ.



ಹೀಗಿದ್ದರೂ, ಈ ಸಾಧಾರಣ ಹುಡುಗಿಯರು ಕನ್ನಡದಲ್ಲಿ ಇಷ್ಟೊಂದು ಅವಕಾಶಗಳನ್ನು ಹೇಗೆ ಗಿಟ್ಟಿಸುತ್ತಿದ್ದಾರೆ? ಎಂಬುದು ಯಕ್ಷಪ್ರಶ್ನೆ. ಇದೇ ಹೊತ್ತಿಗೆ ಯಶಸ್ಸು ಕಂಡ ಕನ್ನಡದ ಹುಡುಗಿಯರಿಗೆ ಮಾತ್ರ ಇಂತಹ ಅವಕಾಶಗಳ ಸುರಿಮಳೆ ಯಾಕೆ ಸಿಗುತ್ತಿಲ್ಲ? ಎಂಬುದು ಅರ್ಥವಾಗದ ವಿಷಯವಾಗಿದೆ.

ಇವರಿಬ್ಬರಂತೆ ಗಾಂಧಿನಗರದಲ್ಲಿ ಅಪಾರ ಬೇಡಿಕೆಯನ್ನು ಕಂಡಿದ್ದ ಪರಭಾಷಾ ನಟಿಯರಲ್ಲಿ ದೊಡ್ಡ ಹಿಟ್ ಆಗಿದ್ದ 'ಫ್ರೆಂಡ್ಸ್' ಚಿತ್ರದಲ್ಲಿ ನಟಿಸಿದ್ದ ಋತಿಕಾ ಕೂಡ ಸೇರುತ್ತಾಳೆ. ತುಂಬು ಮೈಮಾಟದ ಈ ನಟಿ ಎಲ್ಲರೂ ಬೆಚ್ಚಿಬೀಳುವಂತೆ ಅವಕಾಶವನ್ನು ಗಿಟ್ಟಿಸಿದ್ದಳು. ಆಕೆಯೂ ಅಷ್ಟೇ "ನಾನು ಕನ್ನಡದಲ್ಲೇ ಉಳಿಯುತ್ತೇನೆ, ಕನ್ನಡದಲ್ಲೇ ಮಾತನಾಡುತ್ತೇನೆ" ಎಂದು ಹೇಳಿದ್ದಳು. ಎರಡು ವರ್ಷಗಳ ಕಾಲ ಹತ್ತಾರು ಚಿತ್ರಗಳಲ್ಲಿ ನಟಿಸಿದ ನಂತರ ಯಾಕೋ ಏನೋ ಈಕೆ ಒಮ್ಮೆಲೇ ಮಾಯವಾಗಿ ಹೋದಳು.

ಋತಿಕಾ ಬೆನ್ನಲ್ಲೇ ಗಾಂಧಿನಗರದವರನ್ನು ಮೋಡಿ ಮಾಡಿದ ಮತ್ತೊಬ್ಬ ನಟಿಯೆಂದರೆ ಮಾನ್ಯ. ಈಕೆಯಂತೂ ಕನ್ನಡ ಎಷ್ಟು ಬೇಗ ಕಲಿತಳೆಂದರೆ, ಆ ಒಂದು ಕಾರಣಕ್ಕಾಗಿಯೇ ರೋಮಾಂಚನಗೊಂಡ ನಿರ್ಮಾಪಕ, ನಿರ್ದೇಶಕರು ಆಕೆಯನ್ನೇ ತಮ್ಮ ಚಿತ್ರಗಳಿಗೆ ಆಯ್ಕೆ ಮಾಡಿಕೊಳ್ಳುತ್ತಿದ್ದರು. "ನೋಡಿ, ಈ ಹುಡುಗಿ ಕನ್ನಡ ಮಾತನಾಡುತ್ತಾಳೆ, ನಮ್ಮ ಕನ್ನಡದ ಹುಡುಗಿಯರೇ ಕನ್ನಡ ಮಾತಾಡಲ್ಲ" ಎಂದು ಪತ್ರಕರ್ತರಿಗೆ ಆಕೆಯನ್ನು ಪರಿಚಯಿಸಲು ನಿರ್ಮಾಪಕರಲ್ಲಿ ಪೈಪೋಟಿ ನಡೆಯುತ್ತಿತ್ತು. ಕೊನೆಗೆ ಆಕೆ ವಿವಾದವೊಂದರಲ್ಲಿ ಸಿಲುಕಿದ ನಂತರ ಗಾಂಧಿನಗರದವರು ಆಕೆಯನ್ನು ಮೈಲು ದೂರದಲ್ಲಿ ನಿಲ್ಲಿಸಲಾರಂಭಿಸಿದರು.



ಇದಕ್ಕೆಲ್ಲ ಮುನ್ನುಡಿ ಬರೆದದ್ದೇ ಮಾಲಾಶ್ರೀ ಎಂಬ ಮಾಯಾಂಗನೆ. ಆಕೆಯ ಆಗಮನದ ತನಕ ಯಾವುದೇ ಪರಭಾಷಾ ನಾಯಕಿ ಕನ್ನಡದಲ್ಲಿ ನೆಲೆನಿಂತ ಉದಾಹರಣೆಗಳಿರಲಿಲ್ಲ, ನಾಯಕಿಯೆಂದರೆ ನಮಗಾಗ ನೆನಪಾಗುತ್ತಿದ್ದುದು ಅಚ್ಚ ಕನ್ನಡತಿಯರೇ. ಭವ್ಯ, ಸುಧಾರಾಣಿ, ಶೃತಿ, ತಾರಾ, ಪ್ರೇಮಾ, ವಿಜಯಲಕ್ಷ್ಮಿ.... ಹೀಗೆ ಇಲ್ಲಿಯವರೇ ಇಲ್ಲಿ ಮೆರೆಯುತ್ತಿದ್ದರು.

ಆದರೆ ಮಾಲಾಶ್ರೀ ಬಂದನಂತರ ಆಕೆಯ ಜನಪ್ರಿಯತೆಯ ಸುಂಟರಗಾಳಿಗೆ ಕನ್ನಡದ ನಾಯಕಿಯರೆಲ್ಲಾ ಒಣಗಿದ ತರಗೆಲೆಯಂತೆ ಉದುರತೊಡಗಿದರು. ಅಲ್ಲಿಂದಾಚೆಗೆ ಆಮದು ತಾರೆಯರು ಕನ್ನಡದಲ್ಲಿ ಕೀರ್ತಿ ಪತಾಕೆ ಹಾರಿಸುತ್ತಾ ಸಾಗಿದ್ದಾರೆ. ಮಾಲಾಶ್ರೀ ತರ ಇವರೂ ಕೂಡ ಕರ್ನಾಟಕದ ಸೊಸೆಯಂದಿರಾದರೂ ಆಶ್ಚರ್ಯವಿಲ್ಲ.

ಹಿಂದೊಂದು ಕಾಲವಿತ್ತು, ಆಗಿನ ತಲೆಮಾರಿನ ಯುವಕರು ತಮ್ಮ ತಲೆಮಾರಿನ ನಾಯಕಿಯರ ಜೊತೆ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದರು. ನಾವು ಭಾರತಿ ಜಮಾನಾದವರು, ನಮ್ದು ಆರತಿ ಕಾಲ, ನಮ್ದು ಲೀಲಾವತಿ ಟೈಮು, ನಾವು ಕಲ್ಪನಾ ಕಾಲದವರು..... ಹೀಗೆ ಮಾತನಾಡುತ್ತಿದ್ದುದು ಮಾಮೂಲಿಯಾಗಿತ್ತು. ಈಗಿನ ಜಮಾನದ ಹುಡುಗರಿಗೆ ಹಾಗೆ ಮಾತಾಡಿಕೊಳ್ಳಲೂ ಕೂಡ ಅವಕಾಶ ಇಲ್ಲದಂತಾಗಿದೆ. ಅಷ್ಟೊಂದು ಕನ್ನಡದ ಹುಡುಗಿಯರ ಕೊರತೆ ಚಿತ್ರರಂಗದಲ್ಲಿ ಕಾಣುತ್ತಿದೆ. ನಾಯಕಿಯರೆಂದರೆ ಗ್ಲಾಮರ್, ಬೆಡಗು, ಬಿನ್ನಾಣ ಅಷ್ಟಕ್ಕೇ ಸೀಮಿತವಾಗಿದ್ದಾರೆ. ಒಂದು ಪಾತ್ರದ ಮುಖಾಂತರ ಜನರ ಮನಸ್ಸಿನಲ್ಲಿ ಕಾಯಂ ಆಗಿ ಉಳಿಯುವ ನಾಯಕಿಯರೇ ಇಲ್ಲ, ಉದಾಹರಣೆಗೆ ರಂಗನಾಯಕಿ, ಉಪಾಸನೆ, ಪಡುವಾರಳ್ಳಿ ಪಾಂಡವರು ಚಿತ್ರದ ಆರತಿಯನ್ನು ನಾವು ನೀವು ಮರೆಯಲು ಸಾಧ್ಯವೇ? ಹಾಗೆಯೇ ಶರಪಂಜರ ಮತ್ತು ಬೆಳ್ಳಿಮೋಡದ ಕಲ್ಪನಾಳನ್ನು.... ಹೀಗೆ ಕನ್ನಡದ ಎಲ್ಲ ನಾಯಕಿಯರೂ ಪ್ರೇಕ್ಷಕರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಆದರೆ ಈಗಿನ ನಾಯಕಿಯರು ನಿರ್ಮಾಪಕರ ಹೃದಯದಲ್ಲಷ್ಟೇ ಉಳಿಯುತ್ತಿದ್ದಾರೆ ಎನ್ನಬಹುದು.

-ಶೆಣೈ



'ರಾಜಕುಮಾರಿ'ಯಲ್ಲಿ ಬಾಲಾಜಿ



ಬಂತಪ್ಪೋ ಬಂತು ಚಿತ್ರಗಳ ಸುರಿಮಳೆ

ಕಳೆದ ಒಂದು ವಾರದಲ್ಲಿ ಗಾಂಧಿನಗರದಲ್ಲಿ ಸುಮಾರು ಏಳೆಂಟು ಚಿತ್ರಗಳು ಸೆಟ್ಟೇರಿವೆ. ಈ ಚಿತ್ರಗಳ ಒಟ್ಟು ಬಂಡವಾಳವನ್ನು ಲೆಕ್ಕ ಹಾಕಿದರೆ ಅದು ಸರಿಸುಮಾರು ಮೂವತ್ತು ಕೋಟಿ ರುಪಾಯಿಗಳಷ್ಟಾಗುತ್ತದೆ. ಅಂದರೆ ಬೆಂಗಳೂರಿನಲ್ಲಿ ಐಟಿಬಿಟಿಯಲ್ಲಿ ಮಾತ್ರವಲ್ಲ, ಬಣ್ಣದ ಕನಸುಗಳನ್ನು ಪಸರಿಸುವ ಚಿತ್ರರಂಗದಲ್ಲೂ ಸಾಕಷ್ಟು ಬಂಡವಾಳವನ್ನು ಜನ ಹೂಡುತ್ತಾರೆ ಎಂದಾಯಿತು.

ಹತ್ತೇ ದಿನದಲ್ಲಿ ಸೆಟ್ಟೇರಿದ ಚಿತ್ರಗಳ ಪಟ್ಟಿಯತ್ತ ಒಮ್ಮೆ ಕಣ್ಣಾಯಿಸಿ. ಏಳು ಕೋಟಿ ವೆಚ್ಚದ 'ಗಾಳಿಪಟ' ಮತ್ತು ನಾಲ್ಕು ಕೋಟಿ ವೆಚ್ಚದ 'ರಾಜಕುಮಾರಿ' ಇವುಗಳಲ್ಲಿ ಪ್ರಮುಖ. ಅದಾದನಂತರ 'ನೀನ್ಯಾರೇ?', 'ಯುಗ ಯುಗಗಳೆ ಸಾಗಲಿ', 'ಬಾ ಬೇಗ ಚಂದ ಮಾಮಾ', 'ಹೃದಯಾ ಐ ಮಿಸ್ ಯೂ', 'ಆಯೋಗ್ಯ', 'ಮರುಭೂಮಿ', 'ಹನಿ ಹನಿ', 'ಕೃಷ್ಣ', 'ಪ್ರೊಡಕ್ಷನ್ ನಂ. 1', 'ಯುಗ', 'ಮೇಘವೇ ಮೇಘವೇ', 'ಇಂದ್ರ', 'ಪ್ರೀತಿ ಸಂಗಮ' .... ಹೀಗೆ ಹತ್ತು ಚಿತ್ರಗಳು ಸೆಟ್ಟೇರಿವೆ. ಈ ಹತ್ತರಲ್ಲಿ ಕಾಳೆಷ್ಟು ಜೊಳ್ಳೆಷ್ಟು ಎಂದು ಈಗಲೇ ತೀರ್ಮಾನಿಸುವುದು ಕಷ್ಟ. ಆದರೆ ಇಷ್ಟೊಂದು ದೊಡ್ಡ ಮೊತ್ತದ ಬಂಡವಾಳವನ್ನು ಕನ್ನಡ ಚಿತ್ರರಂಗದ ಮೇಲೆ ಹೂಡುತ್ತಿರುವುದರಿಂದ ಕನ್ನಡ ಚಿತ್ರರಂಗ ಉದ್ಧಾರವಾಗಬಹುದೇ ಎಂಬ ಆಶಯವನ್ನು ಹೊಂದಬಹುದು.

ಆದರೆ ಇದೇ ಹೊತ್ತಿಗೆ ಬೆಂಗಳೂರಿನಲ್ಲಿ ನಡೆದ ಆದಾಯ ತೆರಿಗೆ ದಾಳಿ ಚಿತ್ರರಂಗದ ಭವಿಷ್ಯದ ಮೇಲೆ ಕಾರ್ಮೋಡ ಚೆಲ್ಲಿದೆ. ಯಾಕೆಂದರೆ, ಕನ್ನಡ ಚಿತ್ರರಂಗದಲ್ಲಿ ಇವತ್ತು ಬಂಡವಾಳ ಹೂಡುವವರೆಲ್ಲಾ ರಿಯಲ್ ಎಸ್ಟೇಟ್ ಧಣಿಗಳೇ. ಈಗ ಆದಾಯ ತೆರಿಗೆಯ ಕಣ್ಣು ಅವರ ಮೇಲೆ ಬಿದ್ದಿರುವುದರಿಂದ ಸದ್ಯಕ್ಕೆ ಇವರೆಲ್ಲಾ ಸೈಲೆಂಟಾಗುವ ಸಾಧ್ಯತೆಯಿದೆ. ಹೀಗಾದಲ್ಲಿ ಹೊಸಬರ ಅಬ್ಬರ ಕಡಿಮೆಯಾಗಿ ಹಳಬರು ಮತ್ತೆ ಲೈಮ್ ಲೈಟಿಗೆ ಬರುವ ಸಾಧ್ಯತೆಯಿದೆ.

ಪ್ರಜಾಪ್ರಭುತ್ವವೂ ಒಂದು ರೀತಿಯ ಆರಾಧನೆ. ನರಿಗಳನ್ನು ಕತ್ತೆಗಳು ಆರಾಧಿಸುವಂತೆ - ಎಚ್. ಎಲ್. ಮೆನ್‌ಕೆನ್

R.B.P. LANKESH, Kannada Weekly Price Rs. 10/- 18-7-2007 RNI No. KARKAN2005/14648 Regd.No.KA/BG(S)/2036/200

ನೋಡಬಹುದಾದ ಎರಡು ಚಿತ್ರಗಳು





ಕೊಡ್ಲು ರಾಮಕೃಷ್ಣ ನಿರ್ದೇಶನದ 'ತಮಾಷೆಗಾಗಿ' ಚಿತ್ರದ ಬಗ್ಗೆ ಹೇಳುವುದಕ್ಕೆ ವಿಶೇಷವಾಗಿ ಏನಿಲ್ಲದಿದ್ದರೂ ಈ ಚಿತ್ರವನ್ನು ಸುಲಭವಾಗಿ ತಳ್ಳಿಹಾಕುವ ಹಾಗಿಲ್ಲ.

ಚಿತ್ರದ ಶೀರ್ಷಿಕೆಯಂತೆ ಈ ಚಿತ್ರದುದ್ದಕ್ಕೂ ನಿಮಗೆ ಹಾಸ್ಯದ ರಸದೌತಣವನ್ನು ಕೊಡ್ಲು ಉಣಿಸುತ್ತಾರೆ. ಅರ್ಥಾತ್ ಲಾಂಗು ಮಚ್ಚು ಮತ್ತು ರಕ್ತದೋಕುಳಿ ಇಲ್ಲ ಎಂಬುದೇ ಸಮಾಧಾನದ ವಿಷಯ. ಹೀಗಾಗಿ ನೀವು ನಿಮ್ಮ ಆಪ್ತರೊಂದಿಗೆ ಈ ಚಿತ್ರವನ್ನು ನೋಡಿ ಎಂಜಾಯ್ ಮಾಡಲು ಯಾವುದೇ ಅಳುಕಿಲ್ಲ. ಈ ಹಿಂದೆ ಇಂತಹ ಹಾಸ್ಯ ಚಿತ್ರವನ್ನು ಲೀಲಾಜಾಲವಾಗಿ ನಿರೂಪಿಸಿದ ನಿರ್ದೇಶಕ ದಿನೇಶ್ ಬಾಬುರವರಿಗೆ ಹೋಲಿಸಿದರೆ ಕೊಡ್ಲು ನಿರೂಪಣೆ ಸ್ವಲ್ಪ ಸಪ್ಪೆಯಾಗಿ ಕಾಣಿಸುತ್ತದೆ. ಇಂತಹ ಹಾಸ್ಯಮಯ ಚಿತ್ರಗಳಲ್ಲಿ ಕಲಾವಿದರ ಆಯ್ಕೆ ಬಹುಮುಖ್ಯವಾಗುತ್ತದೆ. ತಮ್ಮ ಡೈಲಾಗ್ ಡೆಲಿವರಿ ಮತ್ತು ಮ್ಯಾನರಿಸಂ, ಬಾಡಿ ಲಾಂಗ್ವೇಜುಗಳನ್ನು ಬಳಸಿದರೆ ಮಾತ್ರ ಆ ಕಲಾವಿದ ಯಶಸ್ಸು ಕಾಣುತ್ತಾನೆ. ಇಂತಹ ಪಾತ್ರಕ್ಕೆ ಅನಂತ್‌ನಾಗ್ ಮತ್ತು ಜಗ್ಗೇಶ್ ಹೇಳಿಮಾಡಿಸಿದಂತಹ ಪ್ರತಿಭೆಗಳು. ಆದರೆ 'ತಮಾಷೆಗಾಗಿ' ಚಿತ್ರದಲ್ಲಿ ಆ ಮಟ್ಟದ ಕಲಾವಿದರು ಯಾರೂ ಕಾಣಿಸುವುದಿಲ್ಲ. ಹೀಗಾಗಿ 'ತಮಾಷೆಗಾಗಿ' ಚಿತ್ರವನ್ನು ಒಂದು ಅತ್ಯುತ್ತಮ ಚಿತ್ರವನ್ನಾಗಿಸುವ ಅವಕಾಶವನ್ನು ಕೊಡ್ಲು ಕಳೆದುಕೊಂಡಿದ್ದಾರೆ.

ಲಘುವಾದ ಹಾಸ್ಯ ಮತ್ತು ಮನರಂಜನೆಯಿಂದ ಪ್ರೇಕ್ಷಕರಿಗೆ ಕಚಗುಳಿಯಿಡುವ ಈ ಚಿತ್ರ ಒಮ್ಮೆ ನೋಡಲು ಯಾವುದೇ ಮೋಸವಿಲ್ಲ.

'ಯುಗಾದಿ' ಚಿತ್ರವನ್ನು ನೋಡಿದಾಗ ಥಟ್ಟನೆ ನೆನಪಾಗುವುದು ರವಿಚಂದ್ರನ್ ನಟಿಸಿದ 'ಒಂದಾಗೋಣ ಬಾ' ಚಿತ್ರ. ಇಲ್ಲೂ ಅಷ್ಟೇ: ಎರಡು ಕುಟುಂಬಗಳ ನಡುವೆ ಮದುವೆಯ ವಿಷಯದಲ್ಲಿ ಮನಸ್ತಾಪ ಉಂಟಾಗುವ ಕಥಾವಸ್ತು ಇದೆ. ಹೀಗಾಗಿ ಚಿತ್ರದಲ್ಲಿ ಪ್ರೀತಿ ಪ್ರೇಮ, ಆನಂತರ ಸೆಂಟಿಮೆಂಟ್ಸ್, ತ್ಯಾಗ, ಕೊನೆಗೆ ಶುಭಂ.... ಹೀಗೆ ಚಿತ್ರ ಆರಂಭಗೊಂಡು ಮುಕ್ತಾಯವಾಗುತ್ತದೆ.

ಈ ಚಿತ್ರದ ಹೈಲೈಟ್ ಎಂದರೆ ಅದರ ಶ್ರೀಮಂತಿಕೆ. ಅತ್ಯಂತ ವೈಭವವಾಗಿ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಯಾವಾಗಲೂ ಬರೀ ಒಂದೆರಡು ಹಾಡುಗಳಿಗಷ್ಟೇ ವಿದೇಶಕ್ಕೆ ಹೋಗುವ ಸಂಪ್ರದಾಯವನ್ನು ಬದಿಗಿಟ್ಟು ವಿದೇಶದಲ್ಲಿ ಕೆಲವು ದೃಶ್ಯಗಳನ್ನೂ ಚಿತ್ರೀಕರಿಸಿದ್ದಾರೆ. ರವಿಚಂದ್ರನ್ ತುಂಟನಾಗಿ, ಪ್ರೇಮಿಯಾಗಿ ಕೊನೆಯಲ್ಲಿ ತ್ಯಾಗರಾಜನಾಗಿ ಮನೋಜ್ಞವಾಗಿ ಮತ್ತು ಅಷ್ಟೇ ಲೀಲಾಜಾಲವಾಗಿ ನಟಿಸಿದ್ದಾರೆ. ಆದರೆ ಅವರು ತಮ್ಮ ಮೈ ಭಾರವನ್ನು ಇಳಿಸಿ ನಟಿಸಿದ್ದಲ್ಲಿ ಇನ್ನೂ ಚೆನ್ನಾಗಿರುತ್ತಿತ್ತು. ಕ್ರೇಜಿ ಸ್ಟಾರ್‌ಗೆ ಪೈಪೋಟಿ ನೀಡುವಷ್ಟು ಚೆನ್ನಾಗಿ ಜೆನ್ನಿಫರ್ ಕೊತ್ವಾಲ್ ಕೂಡಾ ನಟಿಸಿದ್ದಾಳೆ. ಈಕೆಗೂ ಅಷ್ಟೇ ಮನಸ್ಸಿನಲ್ಲಿ ಉಳಿಯುವಂತ ಗ್ಲಾಮರ್ ಮತ್ತು ಸೆಂಟಿಮೆಂಟಲ್ ಪಾತ್ರ ದೊರಕಿದೆ. ಇನ್ನು ತೆಲುಗಿನ ಶ್ರೀಕಾಂತ್ ಪಾತ್ರವೇ ಚಿತ್ರದ ಹೈಲೈಟ್. ಅಷ್ಟೊಂದು ಮನೋಜ್ಞವಾಗಿದೆ ಈತನ ನಟನೆ.

ಮನೆಮಂದಿಯೆಲ್ಲಾ ಜೊತೆಯಾಗಿ ಕುಳಿತು ನೋಡುವಂತ ಚಿತ್ರಗಳು ಅಪರೂಪವಾಗುತ್ತಿರುವ ಇಂದಿನ ಸಂದರ್ಭದಲ್ಲಿ 'ಯುಗಾದಿ' ಎಂಬ ರಿಮೇಕ್ ಚಿತ್ರ ತುಂಬಾ ಸ್ಲೋ ಚಿತ್ರ ಎಂದು ಅನ್ನಿಸಿದರೂ ಸೈ ಎನಿಸುತ್ತದೆ.



'ಸವಿಸವಿ ನೆನಪು' ಮಲ್ಲಿಕಾ ಕಪೂರ್



ಮರಳಿ ಯತ್ನವ ಮಾಡುತ್ತಿರುವ ನಾಗೇಂದ್ರ ಪ್ರಸಾದ್

ಇಲ್ಲಿಯವರೆಗೂ ನಿರ್ದೇಶಕರಾಗಿ ಫ್ಲಾಪ್ ಆಗಿರುವ ಗೀತರಚನೆಕಾರ ವಿ. ನಾಗೇಂದ್ರ ಪ್ರಸಾದ್ ಈ ಬಾರಿ ಗೆಲ್ಲಲೇಬೇಕೆಂಬ ಹಟದಲ್ಲಿ ಹಲವಾರು ಸರ್ಕಸ್‌ಗಳನ್ನು ಮಾಡುತ್ತಿದ್ದಾರೆ. ಅವುಗಳಲ್ಲಿ ಒಂದು 'ಲಗಾನ್' ನಾಯಕಿ ಗ್ರೇಸಿ ಸಿಂಗ್‌ಳನ್ನು ಸ್ಯಾಂಡಲ್‌ವುಡ್ಡಿಗೆ ಕರೆತಂದಿರುವುದು. ಎರಡನೆಯದು, ಚಿತ್ರದ ಮುಹೂರ್ತದ ದಿನದಂದೇ ನೇಪಾಳಕ್ಕೆ ಹಾರಿಹೋಗುವುದು. ಮೂರನೆಯದು ('ಮುಂಗಾರು ಮಳೆ'ಯ ಯಶಸನ್ನು ಕಂಡು?) ತಮ್ಮ ಚಿತ್ರಕ್ಕೆ 'ಮೇಘವೇ ಮೇಘವೇ' ಎಂದು ಹೆಸರಿಟ್ಟಿರುವುದು.

ಯಾವುದು ವರ್ಕ್‌ಔಟ್ ಆದರೂ ನಾಗೇಂದ್ರ ಪ್ರಸಾದರವರಿಗೆ ಅದೃಷ್ಟ. ಅಕಸ್ಮಾತ್ ಆಗದಿದ್ದರೆ....?



ಡಿಗ್ರಿ ಪಡೆದ ಮೆಂಟಲ್ ಮಂಜ

'ಮೆಂಟಲ್ ಮಂಜ' ತಂಡ ಮತ್ತೆ ಸಕ್ರಿಯವಾಗಿದೆ. ನಿರ್ಮಾಪಕ ಚಳವಳಿ ನಾರಾಯಣ್ '3ನೇ ಕ್ಲಾಸ್ ಮಂಜ B.Com ಭಾಗ್ಯ' ಎಂಬ ಚಿತ್ರ ನಿರ್ಮಾಣಕ್ಕೆ ಹೊರಟುನಿಂತಿದ್ದಾರೆ. ಎಂದಿನಂತೆ ಅವರ ಒಬ್ಬ ಮಗ ಸಾಯಿಸಾಗರ್ ನಿರ್ದೇಶಕ, ಮತ್ತೊಬ್ಬ ಮಗ 'ಮೆಂಟಲ್' ಖ್ಯಾತಿಯ ಅರ್ಜುನ್ ನಾಯಕ.

ಎರಡು ವರ್ಷಗಳ ಹಿಂದೆ 'ಮೆಂಟಲ್'ನಲ್ಲಿ ಜೊತೆಯಾಗಿ ಬಂದಿದ್ದ ಸಾಯಿಸಾಗರ್ ಮತ್ತು ಅರ್ಜುನ್ ಸಹೋದರರು ಇತ್ತೀಚೆಗೆ ಬಿಡುಗಡೆಯಾದ 'ತಿಮ್ಮ'ನಲ್ಲೂ ಜೊತೆಯಾಗಿದ್ದರು. ಆದರೆ 'ತಿಮ್ಮ' ಮಾತ್ರ ಬಾಕ್ಸಾಫೀಸಿನಲ್ಲಿ ಅಮೋಘವಾಗಿ ನೆಲಕಚ್ಚಿದ್ದ. ಹೀಗಾಗಿ ಇವರಿಬ್ಬರೂ ಈಗ ಮತ್ತೆ 'ಮೆಂಟಲ್ ಮಂಜ'ನ ಮೊರೆ ಹೋಗಿದ್ದಾರೆ.

'ಮಂಜ'ನಿಗೇನೋ ಬಿ.ಕಾಂ ಭಾಗ್ಯವನ್ನು ಅವರಲ್ಲ ದಯಪಾಲಿಸಿದ್ದಾರೆ. ಆದರೆ ಪ್ರೇಕ್ಷಕರಿಗೆ ಅದೆಂತಹ 'ಭಾಗ್ಯ' ಕಾದಿದೆಯೋ?!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44